॥ श्री हाडवलुमां ॥

ಶ್ರೀಃ ಅವ್ಯಾದಿ

ಹರಿದಾಸರ ಪದ ಸುಳಾದಿಗಳು

ಸು- (೫೯) ಪದ ೬

ಪ್ರಕಾಶಕರು—

ಹನುಮಂತರಾವ ಗೋರಾಬಾಳ,

ಸಂಚಾಲಕ

ಶ್ರೀ ವಾದೀಂದ್ರ ಹರಿದಾಸ ಸಾಹಿತ್ಯ ಮಂಡಲ, ಲಿಂಗಸೂಗೂರ.

ಪುಟ ೧೪೦ ಬೆಲೆ ೧-[illegible] ನ. ಪೈಸೆ

ನ್ನೂ, ಮತ್ತು ೬
ಪ್ರಕಟಿಸ
ಸ್ತೋತ್ರ
ಸುಳಾದಿ
ವಿಜಯ
ದಿಗಳು.
ಸ ಅವರ
೧೨-೧೪
ಪ್ಯವಾ
ವನ್ನೆಲ್ಲಿ
ಾದವು.
ಂತಲೂ
. ೪
. ೩
. ೧೩
. ೧೨
. ೨
. ೧
. ೨
ಕದಲ್ಲಿ
ತಿ ಸಜ್ಜ
ವೆಂದು

ಬಿನ್ನೈಸುತ್ತೇನೆ.

ದಾಸರ ದಾಸ.

ಹನುಮಂತರಾವ ಗೊರಬಾಳ

ಸಂಚಾಲಕ ಮಂಡಲ.

OSMANIA UNIVERSITY LIBRARY

Call No. K 81.6/ H25H. Accession No. K.5309.

Author [illegible]

Title [illegible]

This book should be returned on or before the date last marked below.

UNIVERSAL LIBRARY

OU_200909

UNIVERSAL LIBRARY

ಅನುಕ್ರಮಣಿಕೆ

ಶ್ರೀ ನರಹರಿ ತೀರ್ಥರು ರಚಿಸಿದ ಪದಗಳು

(ರಘುಪತಿ)

ಕ್ರಮಾಂಕ		ಪುಟ
೧	ಇಂತು ಮರುಳಾದೆನು ನಾ ಇಂತು ಮರುಳಾದೆ (೨೩ ನುಡಿ)	೧
೨	ತಿಳಕೊ ನಿನ್ನೊಳಗೆ ನೀನೆ ಮರುಳೆ ಅಳಕೋಪೋದಾ (೧೫ ನು)	೩
೩	ಎದಿರ್ಯಾರೋ ಗುರುವೆ ಸಮರ್ಯಾರೋ ಮದನ ಜನಕ	೬
೪	ಹರಿಯೆ ಇದು ಸರಿಯೆ ಚರಣ [illegible]ನಲಿ ಕರುಣಾ	೮

ಶ್ರೀಪಾದರಾಜರ ಸುಳಾದಿಗಳು (ರಂಗವಿಠಲ)

೧	ಈವನಪೆಡೆಯೊಳು ಈನದಿ ಪುಲಿನಗಳೀಶತಿ ಶಿಲೆಗಳು	೯
೨	ಅನಂತ ಕಾಲದಲ್ಲಿ ನಿನ್ನನಾನರಿಯದೇ ಭವಗಳಲ್ಲಿ	೧೧
೩	ನಿನ್ನಾಧೀನ ಈ ಶರೀರ ಕರಣಚೇಷ್ಟೆಗಳೆಲ್ಲ ನಿನ್ನಾಧೀನ	೧೩

ಶ್ರೀವ್ಯಾಸರಾಜರ ಸುಳಾದಿಗಳು (ಶ್ರೀಕೃಷ್ಣ)

೧	ನೀಲಮೇಘ ಶ್ಯಾಮಕೋಮಲಾಂಗದ ಮೇಲೆ	೧೫
೨	ಆಲದೆಲೆಯಲ್ಲಿ ಮಲಗಿದಂದು ನಿನ್ನ ಲೀಲೆಯೊಂದು	೧೭
೩	ತಂದೆಯಾಗಿ ತಾಯಿಯಾಗಿ ಇಂದಿರೇಶನೆ ಎನಗೆ ಬಂಧು	೧೯
೪	ತಾಯಿ ಈ ಲೋಕಕ್ಕೆ ಶ್ರೀಹರಿ ಕಾಯುದಿಂ ಜಗವ, ಆದಿ	೨೧
೫	ಅಂತರಂಗದಿ ಬ್ರಹ್ಮನಂದನಾಗಿ ನೀನಿರಲು ಅಂತಕನ	೨೩
೬	ಶ್ರೀದೇವಿಯ ಶ್ರೀಮಂತ ಸಿಂಧೂರಗಳಿಂ ಅತಿ ಅತಿ	೨೪
೭	ತಾಯಿ ಎಂಬೆನೆ ನಿನ್ನ ಧ್ರುವನ ತಾಯಿ ನಿನ್ನಂತೆ ಕಾಯ್ವಳೆ	೨೪
೮	ನಾನಾಯಜ್ಞದ ಹವಿರ್ಗಳಿಂದ ಕದ್ದಾ ಬೆಣ್ಣೆಯುಮಿಗಿಲೆ	೨೫
೯	ಶ್ರೀಪತಿ ಸಲಹೆಂದೆನುವಂಥ ಮನುಜರ ತಾಪತ್ರಯ	೩೦
೧೦	ಎನ್ನ ಮಹದೋಷಗಳು ಅನಂತವಾದರು ಅಂಜೆನಾ	೩೨
೧೧	ದೇಹ ಜೀರಣವಾಯಿತೊ ಧನನೇಹ ಜೀರಣವಾಗದೊ	೩೩

ಕರ್ನಾಟಕ ಸಾಹಿತ್ಯ ಮಂದಿರ.

೧೨ ಕಾಮವೆಂಬ ಹೆಚ್ಚಿನ ಕಾಡುಗಿಚ್ಚೊಂದು ಕಡಿಯಲಿನ್ನ ೩೫
೧೩ ಹರಿಚರಿತೆ ಶ್ರವಣದುರಿತ ಕುಚ್ಚಾಟನಂ ಹರಿನಾಮ ೩೭

ಶ್ರೀವಾದಿರಾಜರು (ಶ್ರೀಹಯವದನರ) ಸುಳಾದಿಗಳು.

೧ ಚಿನುಮಯಮೂರುತಿ ಪ್ರಳಯ ಜಲಧಿಯೊಳು ೩೯
೨ ಹರಿಸ್ವಾತಂತ್ರ್ಯ ಸರ್ವೇಶ ಸಿರಿವಿರಂಚಿಸಮೀರ ೪೧
೩ ಒಪ್ಪುವಮಾನಿಸ ದೇಹಂಗಳೆಲ್ಲ ಬ್ರಹ್ಮಪುರಕೊಂಭತ್ತು ೪೪
೪ ಅಂಬಿಕಾಪತಿ ಉಮಾಪತಿಯೆಂದು ವೇದತ್ರಿಯಂಬಕನ ೪೭
೫ ಅರಳಿದ ಕೆಂದಾವರಿಯ ಇರವ ಧಿಕ್ಕರಿಸುವ ಗಿರಿಯ ೫೩
೬ ದಶರಥನಂದನ ಋಷಿಯಾಗ ಸಂರಕ್ಷಣ ಶಶಿಮುಖಿ ೪೩
೭ ಕಲ್ಕಿಯಾಗಿ ತುರಗವನೇರಿ ಖಳರ ಕಟಕವಪೊಕ್ಕು ೫೫
೮ ಹರಿನಿನ್ನ ಜ್ಞಾನ ಸಿರಿಗೆಣೆಗಾಣೆ ಮತ್ಸ್ಯಾವತಾರದಿ ೫೭
೯ ಬಲುಚರ್ಮಚೀಲದೊಳಗೆ ರಕ್ತಮಲಮೂತ್ರ ೬೦
೧೦ ಹರಿಪಾದನೆನೆವಂಗೆ ಅರಿಗಳ ಭಯವಿಲ್ಲ ಹರಿಪಾದ ೬೩
೧೧ ಕಾಲುತೊಳೆದವನೊಬ್ಬ ತೊಳೆಸಿಕೊಂಡವನೊಬ್ಬ ೬೫
೧೨ ಸಲಹಯ್ಯಾ ಕರುಣಿ ಸಕಲದೇವರ ಸಾರ್ವಭೌಮ ೬೯

ಶ್ರೀ ವಿಜಯೀಂದ್ರ ಸ್ವಾಮಿಗಳವರ ಸುಳಾದಿ

೧೩ ಯಾಕೆಲೆಮನವೆ ನೀ ಎನ್ನ ಕೀಟಕ ದೇಶಕ್ಕೆ ಶೆಳೆದು ೭೧
೧೪ ಪರಬೊಮ್ಮ ಹರಿಯು ತಾ ನರ ರೂಪತಾಳಿಹ ೭೩

ಬೇಲಾಪುರ ವೈಕುಂಠದಾಸರ ಸುಳಾದಿ

೧೫ ನೋಡೆಲೆಮನವೆ ಜಗದೀಶನ ಲಾವಣ್ಯಾಂಬುಧಿಯಂ ೭೫
ಪದ ೫ (ಮಹಿಪತಿ) ವಾಸುದೇವನಾಶ್ರೈಸದ ಉಪನ್ಯಾಸವ್ಯಾತಕೆ ೭೮

ಆದ್ಯರ ಸುಳಾದಿಗಳು ೭೯

ಅಚಲಾನಂದ ವಿಠಲರವು (೪) ಸುಳಾದಿ

೧ ಥೋರ ಮಲ್ಲಿಗೆಯ ದುರುಬಿನ ಜೋಲೆಯಾದ ಕಸ್ತೂರಿ ೮೧

	ರಂಗಾ ನಿನ್ನ ಎಡದಂಗುಟದುಗುರು ಸೋಂಕಿದ ಸುರನದಿ	೮೩
೩	ಕಾಮಕೆಂಗಡಿಸುತಲಿಪೆ ಕ್ರೋಧಬಾಧಿಸುತಿಪೆ ಲೋಭ	೮೪
೪	ಹಿಂದಣ ಜನ್ಮಜನ್ಮಾಂತರದಿ ಮಾಡಿದ ಘವನಿವಾರಿಸು	೮೬

ಮುದ್ದುವಿಠಲದಾಸರು (೪) ಸುಳಾದಿ

೫	ಸತ್ಯವಿದು ಹರಿಯು ಸದ್ಗುಣಗಳೆಂಬೋರಾಶಿ ಸತ್ಯವಿದು	೮೭
೬	ಆವನ ಭಯದಿಂದ ಮರುತಾ ತಿರುಗುತಿಪ್ಪಾ	೮೯
೭	ಶ್ರೀ ರಮಣಿ ಕುಚಕುಂಕುಮಾಂಕಿತದ ಚರಣ	೯೧
೮	ಮುಡಿಯ ಮುತ್ತಿನ ಜೊಲ್ಲಿಯದ ಕಸ್ತೂರಿನಾಮ	೯೩

ಯೋಗೇಂದ್ರ ವಿಠಲ

೯	ಭವವೆಂಬೋಗಜಕೆ ಪಂಚಾನನಹರಿನಾಮ	೯೪

ನರಕಂಠೀರವ ವಿಠಲ

೧೦	ಎನ್ನವಗುಣಗಳನು ಎಣಿಸದಲೆ ಎಲೊದೇವ	೯೬

ಸೊಬಗು ವಿಠಲ

೧೧	ಗಿರಿಯ ಶಿಖರವನೇರಿ ತಲೆವೂರಿ ಬಹುಕಾಲ	೯೮

ಗರುಡವಾಹನಲಕ್ಷ್ಮೀನಾರಾಯಣ

೧೨	ಎಲೆಮನ ಮೊದಲಾದ ಅಖಿಳಜ್ಞಾನೇಂದ್ರಿಯಗಳೆ	೯೯

ಸಿರಿಕೃಷ್ಣ ವಿಠಲ

೧೩	ನಾರಿಯೆಂಬುವಳು ಪುಣ್ಯವಾರಿ ಕೇಳಿರಯ್ಯ	೧೦೩
೧೪	ನೀ ಓಲಿಯದಿರಲು ವಸುಧಿಯೊಳಿನ್ನ ಕಾವಜನರಾವರೊ	೧೦೪
	೬ ಪದ-ಸುಖತೀರ್ಥರೆದುವರನ ಸ್ಥಾಪಿಸಿ ಒಂಭತ್ತು ಯತಿಗಳನು ಮಾಡಿ ಅವರವರಿಗೆ (ಪ್ರಾಣೇಶ ವಿಠಲ)	೧೦೬

ವೈಕುಂಠ ವೆಂಕಟೇಶ

೧೫	ಸುರನದಿಯ ಪಡೆದ ಚರಣಾಂಬುರುಹ ಪದ	೧೦೭

ವೈಕುಂಠ ವಿಠ್ಠಲ (೨)

೧೬ ಎಲ್ಲಿಹ ಮಧುರಾಪುರ ಇನ್ನೆಲ್ಲಿಹ ಕಂಸಾಸುರನೆ ೧೦೮

೧೭ ಲಕ್ಷುಮಿಯ ಮಸ್ತಕಕ್ಕೆ ಮಣಿ ಮೌಳಿಯಾದ ೧೧೦

ಅಚ್ಯುತ ವಿಠಲ (೨)

೧೮ ಹೊನ್ನುಹಣ ಹಾಗ ವೀಸ ಏನು ಇಲ್ಲದ ಚಿನ್ನಿವಾರ ೧೧೩

೧೯ ಕಲ್ಪಾಂತವಾದಡಂ ಕೇಡಿಲ್ಲ ತಮಗೆಂದು ೧೧೪

ವರದ ಕೇಶವ

೨೦ ತನ್ನ ಶರಣರ ಜರದಪಂ ಕರುಳಮಾಲೆಯ ಕಿತ್ತು ೧೧೬

೨೧ ತಳರಂತೆ ಹೆಜ್ಜೆಹೆಜ್ಜೆಗೆ ಚರಣ ತಳಗಳು ೧೧೭

ಚೆನ್ನಕೇಶವ

೨೨ ನೋಡಲೆ ಮನವೆ ಜಗದೇಕ ಲಾವಣ್ಯ ನಿಧಿಯ ೧೧೯

ವರದರಾಜ ವೆಂಕಟೇಶ

೨೩ ಶ್ರೀ ರಘುರಾಮ ಎಂದಾದರು ನೆನದರೆ ೧೨೧

ವರದರಾಜ ರಾಮ

೨೪ ಜಾನಕಿಯರಮಣ ರಾಮಗೆ ಜನನ ಉಂಟೆಂದು ೧೨೨

ವರದರಾಜಕೃಷ್ಣ (೪)

೨೫ ಸುರಮುನಿ ಭೂಸುರ ಲೋಕಂಗಳಲಿ ಚರಿಸುವ ೧೨೪

೨೬ ಹರಿರವಿಯು ದಯವ ಕಾಣುತ ಕರಕಮಲದಿ ೧೨೬

೨೭ ಕಡುಮುದ್ದು ಕೃಷ್ಣ ಗೋಕುಲದಲ್ಲಿ ಗೆಳೆಯರ ೧೨೭

೨೮ ವೃಂದಾವನದಲ್ಲಿ ಸುಳಿವನಲ್ಲೆ ತರು ವೃಂದರೂಪಿನ ೧೨೯

ಒಟ್ಟಿಗೆ ೬ ಪದಗಳು ೫೯ ಸುಳಾದಿಗಳಿವೆ.

॥ श्रीगुरु राजोविजयते ॥

ಶ್ರೀ ನರಹರಿ ತೀರ್ಥರು ರಚಿಸಿದ ಪದಗಳು

ಈ ಪದಗಳು ಶ್ರೀನರಹರಿ ತೀರ್ಥರು ಮಾಡಿದ ಪದಗಳೆಂದು. ಚಿಪ್ಪರಿಯಲ್ಲಿ ಶ್ರೀ ವಿಜಯದಾಸರ ಕಟ್ಟೆಯಲ್ಲಿದ್ದ ೨೫೦ ವರ್ಷ ಪೂರ್ವದಲ್ಲೆ ಬರೆದ ವಹಿಯಲ್ಲಿವೆ. ಅಲ್ಲದೆ ದಕ್ಷಿಣ ದೇಶದ ಒಬ್ಬ ಬ್ರಾಹ್ಮಣರಲ್ಲಿ ೧೬ ಪದಗಳು ಶ್ರೀ ನರಹರಿ ತೀರ್ಥರ ಪದಗಳೆಂದು ನೋಡಿದೆ. ಆದರೆ ಅವರು ಬರದುಕೊಳ್ಳಲು ಅವಕಾಶ ಕೊಡಲಿಲ್ಲ ಇದೆಲ್ಲ ಸಾಂಪ್ರದಾಯವು ನಿಜವಾದದು.

ಪದ (೧) ರಾಗ ಪಂತುರಾಳಿ ಆದಿತಾಳ

ಇಂತು ಮರುಳಾದೆನು ನಾ ಇಂತು ಮರುಳಾದೆ ॥ ಪ ॥

ಇಂತು ಮರುಳಾಗಿ ಮರುಳಾಗಿ ಬಯಲಿಗೆ ಬೀಳುವೆನಾ ।
ಸಂತತರಕ್ಷಿಸೈಯ್ಯಾ ರಘುಘುಕುಲತಿಲಕ ॥ ಅ.ಪ. ॥

ಆರಿಗಾಗಿ ಧಾವತಿಗೊಂಬೆ । ಆರಿಗೆ ಧನವನು ಬಚ್ಚಿಡುವೆ ॥
ನಾರಿಪುತ್ರ ಮಿತ್ರಾದಿಗಳು ಬಾರರು ಸಂಗಡ ಎಂದರಿದು ॥ ೧ ॥

ಭ್ರಾಂತನಾಗಿ ವ್ಯೈಯ್ಯನೆ ಮರೆದು । ಸಂತತ ತನ್ನ ತುತಿಸಿಕೊಳ್ಳುತ್ತಾ ॥
ಚಿಂತೆ ಇಲ್ಲದೇ ಲೋಗರಜರಿವಾ । ನಂತಸುಕೃತಗಳ ಸೂರೆಗೊಡುವಾ ॥ ೨ ॥

ಭವನವಾರ್ತೆಯಲಿ ಸಮಚಿತ್ತ । ಭುವನೇಶನ ಕಥೆಯಲ್ಲಿ ಬಹುಚಿತ್ತ ॥
ಭವಕಾರಣದಲ್ಲಿ ಬಹುಮಾನಾ । ಭವಅಘಹರರಲ್ಲಿ ಅಪಮಾನ ॥೩॥

ಸತಿಯುಮ್ಯಾಲೆ ಬೈದರೆ ಬೈವಾ । ಶ್ರೀ ಪತಿಯ ಬೈದರೆ ಕೇಳುತನಗುವ ।
ಮತಿಗೆಟ್ಟು ಮಾಯಲಂಪಟನಾಗಿ । ಗತಿಯನಗಿಲ್ಲ ಹಾ ಹಾ ಎನುತ ॥ ೪ ॥

ತನ್ನ ಬೈದರೆ ಜೀವಕೆ ಮುನಿವಾ । ಪನ್ನಗಶಯನನ ಬೈದರೆ ನಲಿವ ॥
ತನ್ನ ತಿನಸಿಗನುಕೂಲವಾಗೆ । ಕುನ್ನಿಯಂತವರ ಬಾಗಿಲು ಕಾಯ್ವ ॥ ೫ ॥

ಸುಜನರಾಗಲಿ ತನಗಲ್ಲದವರ । ಕುಜನರೆಂದು ಮತ್ತೆ ಬೋಧಿಸುತ್ತಾ ।
ಗಜಸ್ನಾನದಂತೆ ಕರ್ಮವಕಳಧು । ರಜಕನಂತೆ ಮತ್ತೆ ಮೆರವುತಲಿ ॥ ೬ ॥

ಧರ್ಮಕ್ಕೆ ಕಾಸು ಸಾಸಿರಹೊನ್ನು ಅ । ಧರ್ಮಕ್ಕೆ ಕೋಟಿಹೊನ್ನೊದು ಕಾಸು ॥
ಧರ್ಮಮಾಡುವಲ್ಲಿ ಬ್ಯಾಸರಿಕೆ ಅ । ಧರ್ಮಮಾಡುವಲ್ಲಿ ನಲಿದಾಟ ॥ ೭ ॥

ಕಕ್ಕುಲಾತಿ ಮಾಡಿ ಬಯಲೀಗೆ । ಜಕ್ಕಿಕನ್ನಿಯರು ಮುಂತಾದ ।
ಭಿಕ್ಕರ ದೈವವ ಪೂಜಿಸುವ । ಮುಖ್ಯ ವೈಷ್ಣವನು ತಾನೆಂಬ ॥ ೮ ॥

ಪೆಸರುಮಡದು ಬದುಕುವ ನರನು । ಉಸುರುಳ್ಳಪೆಣನೆಂದು ಬೋಧಿಸುತ ॥
ಪಶುಪನರನ ಬುದ್ಧಿಯ ಕೇಳಿ । ವಿಷಯಲಂಪಟರ ಬಾಗಿಲಕಾಯ್ವಾ ॥ ೯ ॥

ಡೊಂಬನಂತೆ ಬಯಲಿಗೆ ಹಲುಬಿ । ಡಂಬಕತನದ ಭಕುತಿಯಮಾಡಿ ॥
ಅಂಬುಜ ನಾಭಗದೂರವಾಗಿ । ಕುಂಭೀಪಾಕಕ್ಕೆ ಗುರಿಯಾಗಿ ॥ ೧೦ ॥

ಅನ್ಯಾಯದಲಿಧನವ ಘಳಿಸಿ । ತನ್ನವರೆಂಬ ಸ್ವಾರ್ಥವ ಮಾಡಿ ॥
ತನ್ನವರನು ಸಾಕುವ ತೆರದಿ । ತನ್ನನಿಲಿಸುವರು ನರಕದಲ್ಲಿ ॥ ೧೧ ॥

ಗಣಪತಿ ಸಿದ್ಧಾಂತವನೋದಿ । ಹಣದ ಆಶಿಗೆ ವಿಪರೀತ ಮಾಡಿ ॥
ಗಣಿಕ ಸುತನಂತೆ ನಿಜವರಿಯೆ । ಭಣಗುಡೊಂಬನಂತೆ ಹಲುಬುತಲಿ ॥ ೧೨ ॥

ಏಕಾಂತದಲಿ ಧನದ ಗೋಷ್ಟಿ । ಲೋಕಾಂತದಲಿ ವೈರಾಗ್ಯದ ವಾರ್ತೆ ॥
ಶ್ರೀಕಾಂತನ ಸೇವಿಗನುಮಾನ । ಭೂಕಾಂತನ ಸೇವಿಗುತ್ಸಹಾ ॥ ೧೩ ॥

ಮುಪ್ಪಾಗಲು ಲೋಭ ಘನವಾಗಿ । ಚಿಪ್ಪುಮುಂತಾದುದು ಬಚ್ಚಿಡು ತಾ ॥
ತಪ್ಪುಹೊರಿಸಿಕೋಳುತಲಿ ಮನೆಯಾ । ಕಪ್ಪನೆ ಕಳಚಿತು ಕಾಯುವನೆ ॥ ೧೪ ॥

ಮಾತಿನಲ್ಲಿ ಹರಿದಾಸತನಾ । ನೀತಿಯಲಿ ಪ್ರಭುದಾಸತನ ॥
ಭೀತಿಬಡುವ ವಿಹೀತದಲ್ಲಿ ನಿ । ರ್ಭೀತಿಲಿ ಮನೆ ಮನೆ ತಿರುಗುವೆನೊ ॥ ೧೫ ॥

ದಾಸ ದಾಸಿ ವರ್ಗವನೆರಹಿ । ಬ್ಯಾಸರೆದವರ ಸಲಹಿ ಸುಖಿಸೀ ॥
ವಾಸುದೇವನ ಪೂಜಿಗೆ ಬೇಡೆ ವಂದು । ಕಾಸನು ಅರ್ಪಣೆಗಿಲ್ಲೆನುತಾ ॥ ೧೬ ॥

ಕಾಮವೆಂಬ ಮದವಾವರಿಸಿ । ಶೀಮೆಯ ತಿರುಗುವ ಶುನಕನಂತೆ ॥
ಕಾಮಿನಿಯರ ಭೋಗಕ್ಕಾಗಿ । ಧೂಮಕೇತನದ ಸತ್ಕುಲಕ್ಕೆ ॥ ೧೭ ॥

ರೋಷವೆಂಬ ಮದದವಾವರಿಸಿ । ಭೂಸುರರನೆ ನಿಂದಿಸಿ ನುಡಿವ ॥
ಕ್ಲೇಶ ಅವರ ಚಿತ್ತಕೆ ಮಾಡಿ । ದೋಷಮುಯುದಿ ನರಕದೊಳಿರುವಾ ॥ ೧೮ ॥

ಹೊರೆಯು ಬೇಕು ಉದರವ ಎನುತ । ಧೊರೆಗಳ ಮನೆಯು ಬಾಗಿಲಕಾಯ್ವಾ ॥
ವರಬಿನುಗು ನುಡಿ ಕೇಳುತ ಮರುಗಿ । ಕಿರಿಯತನಗಳಾ ನೆರೆಪೊತ್ತು ॥ ೧೯ ॥

ಪರರ ವಿರೋಧಿಸಿ ಧನವ ತಂದು । ಹರಿಯು ಪೂಜೆಯು ಮಾಡಬೇಕೆನುತಾ ॥
ಹಿರಿಯತನಕೆ ಬ್ಯಾರೆ ಬೆಂಬಲಿಸಿ ತಾ । ನರಳುವ ನಾನಾ ನರಕದಲಿ ॥ ೨೦ ॥

ನೆಳಲು ನೀರು ಭೋಜನವಿಲ್ಲದೆ । ಜ್ವಲಿಸುವ ಮಳಲಂತೆ ಮಾರ್ಗದಲಿ ॥
ನೆಳಲು ನೀರು ಭೋಜನವಿಲ್ಲದೇ । ಜ್ವಲಿಸುವೆನಾ ಸಜ್ಜನರ ಕಂಡು ॥ ೨೧ ॥

ಲೋಗರೊಡವಿಗಳನಪಹರಿಸಿ । ಭೋಗಕೆ ಸಕಲವು ಬರಕೈದು ॥
ಹಾಗವದಾನಕೆ ವೆಚ್ಚಿಸದೆ । ಮೂಗುಹಿಡಿದು ಶುಚಿತಾನೆಂಬ ॥ ೨೨ ॥

ಎಜಿಸು ಬ್ರಹ್ಮಾದಿ ವಂದಿತ ಹರಿಯಾ । ತ್ಯಜಿಸು ಕಾಮಾದಿ ಹಗೆಗಳನಾ ॥
ಸುಜನ ವಂದಿತ ಸಿರಿನರಹರಿಯಾ । ಭಜಿಸಿ ಬದಕು ಶ್ರೀರಘುಪತಿಯಾ ॥ ೨೩ ॥

ಪದ (೨) ರಾಗ ತಾಳ ಅಟ್ಟ, ಅಥವಾ ಝಂಪಿ

ತಿಳಕೊ ನಿನ್ನೊಳಗೆ ನೀನೆ ಮರುಳೆ । ತಿಳಕೊ ನಿನ್ನೊಳಗೆ ನೀನೆ ॥ಪಲ್ಲ॥

ತಿಳಕೊ ನಿನ್ನೊಳಗೆ ನೀ ಅಳಕೊ ಪೋದಾಯುಷ್ಯ ।
ಕಳಕೊ ದುಷ್ಕರ್ಮವನ್ನು ವಿಷಯದಿಂ ।
ಸೆಳಕೊ ಇಂದ್ರಿಯಗಳನ್ನು ಸ್ವಲ್ಪಾರು ।
ಬೆಳಸಿಕೊ ಜ್ಞಾನವನ್ನು ಮರುಳೆ ॥ಅನುಪಲ್ಲ॥

ಆಹರ ನಿದ್ರಾಸಂಗಮುಹರಾದಿ ಕ್ರಿಮಿಕೀಟ ।
ಸಹವಾಸ ದುರುಯೋನಿಗೂ ಇದ್ದದ್ದು ।
ಬಹುಶ ತಂದು ಮನಸಿಗೂ ಅಷ್ಟೇವೆ ।
ಸಹಿತ ವೆಂಬವು ನಿನಗೆ ಈ ಮಾತು ।
ವಿಹಿತವಲ್ಲವು ಎಂದಿಗೂ ಮರುಳೆ ॥ ೧ ॥

ಸಾದರದಿ ಜನರಿಂದ ಅಹುದೆನಿಸಿಕೊಂಬುವದು ।
ಸಾಧಾರಣವಲ್ಲೆಂದಿಗೂ ಚಿತ್ತೈಸಿ ।
ಮೋದದಲಿ ಚರಿಸೋ ಇಂದು ಕೃಷಿಪೋಷ್ಯ ।

ವಾದ ವೃಷಭಾದಿಗಿಂದು ಈ ಧರ್ಮ ||
ಸಾಧಿಸದೆ ಅಪ್ರಾಸ್ಯವೇನೊ ಒಂದು ಮರುಳೆ || ೨ ||

ಸೋತು ನಡಧಾಂಗೆ ಬಹುಮಾತು ಕಥೆ ಚಾತುರ್ಯ |
ನೀತಿವಾದದಲಿ ಧೈರ್ಯ ಮೊದಲಾದ |
ನೀತಿಯನು ನಡಿಸೊ ಪಿರಿಯಾ ಸಜ್ಜನರ |
ಪ್ರೀತಿಯನು ಪಡಿಸೊ ಚರ್ಯಾ ಹಾಸ್ಯಗಾ |
ರಾತ ಮಾಡುವದನರಿಯಾ || || ೩ ||

ಧನದೊರಕಿಸಿ ದಿವ್ಯ ಮನೆ ಮಾಳ್ಗಿಗಳ ರಚಿಸಿ |
ದಿನದಿನಕೆ ಪೆಚ್ಚಿಸುತ್ತಾ ನಾಲ್ವರೊಳು |
ಘನತೆ ಆವನೆಂದೆನಿಸುತ್ತಾ ಇದ್ದದ್ದು ||
ಖನಗೆ ವೇಶ್ಯಾದಿ ಸಹಿತ ಅಂತ್ಯಜ |
ಕೊನೆಜಾತಿಗಲ್ಲ ನೀತ ಮರುಳೆ || ೪ ||

ಮೀರಿ ಅಶನಾ ಶನದ ಸಾರ ಸುಖವನು ತನಗನು |
ಸಾರಿ ಜನರಿಂದ ಕೂಡಿ ನಿರ್ಭಯದಿ |
ಭಾರಿ ಭಾರಿಯಲಿ ರೂಢಿಯೊಳಗಿದ್ದ |
ಘೋರ ಯಾತ್ರೆಗಳ ಮಾಡಿ ಚರಿಸುವ |
ಭೈರಾಗಿ ಗಣವ ನೋಡಿ ಮರುಳೆ || ೫ ||

ಅವಗಹನ ಸ್ನಾನ ವಿಹಿತ ಜಪಸತ್ಕರ್ಮ |
ಹವಿರನ್ನ ಭೋಜನವನ್ನು ಮಾಡುತ್ತ |
ತ್ರಿವಿಧ ಜನ ಸಮ್ಮತಿಯನು ಬಿಡಿಸಿ ಮ |
ತ್ತವರಿಂದ ಹಣವ ನೀನು ಬಿಡಿಸಲಾ |
ಕವಿಗೇಯು ಮೆಚ್ಚೋನೇನೋ ಮರುಳೆ || ೬ ||

ದಾಸನೆಂದೆನಿಸಿ ಧನದಾಶೆಯಲ್ಲಿ ಸರ್ವ |
ದೇಶವನು ಸಂಚರಿಸಿ ಮುಡುಪಿನ |
ಕಾಸುಗಳ ಸಂಪಾದಿಸಿ-ನಿಜ ತನು |

ಜಾ ಸತಿ ಸುತಾಪ್ತರ ಪೋಷಿಸಿ ಇದ್ದರೆ ।
ಘಾಸಿ ಯಮನಲ್ಲಿ ತಪ್ಪುವದೇನೊ ಹೇಸಿ ಮರುಳೆ ॥ ೭ ॥

ಹುಚ್ಚಾಗಿ ಕಲಿತು ಕಡಿ ಹೆಚ್ಚುತನವಾಕೃತಿಯು ।
ಕೊಚ್ಚುತ್ತ ಜನರಿಘೇಳಿ ಹೃದ್ರೋಷ್ಯ ।
ಬಚ್ಚಿಟ್ಟುಕೊಂಡು ಸೂಳಿಯು ಸೋಗಿನೋಲ್ ।
ತುಚ್ಛದಲಿ ಬದುಕಿ ಬಾಳೀ ಇದ್ದರೆ ಯಮನೋಡಿ ಯದಿ ।
ಗಿಚ್ಚಕ್ಕನೇನೋ ಖೋಡಿ ಮರುಳೆ ॥ ೮ ॥

ಬುದ್ಧಿಯಿಂನ್ಯಾಯದಿಂ ಸಿದ್ಧಾಂತಗಳನೋದಿ ।
ಮುದ್ದು ಭಾಷಣಗಳಿಂದ ಸಭೆಯೊಳಗೆ ।
ಗೆದ್ದು ವಾದಿಗಳ ವೃಂದ ದೂರ ಪ್ರ ।
ಸಿದ್ಧನೆನಿಸಿದ್ದೆ ಛಂದ ಭಣಗು ನಿನಗೆ ।
ಇದ್ದವುದ್ದೇವೆ ಚಂದ ಮರುಳೆ ॥ ॥ ೯ ॥

ವೇದಾಂತ ಶಾಸ್ತ್ರವನು ಓದಿ ವಿದ್ಯಾರ್ಥಿಗಳಿ ।
ಗೋದನೋದಕವ್ಕೊಟ್ಟು ಪ್ರವಚನದ ।
ನಾದ ಉಂಟೇನೋ ಗುಟ್ಟು ।
ಎವ್ಯಪೀಸಾಧಿಸಿ ನುಡಿವ ಮಿಥ್ಯಾ ।
ವಾದಿಗಾದರು ಏನ ಸಾಧ್ಯ ಈ ಕೃತ್ಯ ಮರುಳೆ ॥ ೧೦ ॥

ಆಗತಃ ಸಂ ಪ್ರಾಪ್ತವಾಗಿರುವ ಕೆಲವು ಬಹು ।
ಶ್ಯಾಗಮಸಿದ್ಧವಾದ ಚರ್ಯೆಗಳು ।
ಹೀಗಿತರ ಪ್ರಾಣಿಗಳಿಗೆ ಸಾಧಾರಣ ।
ವಾಗಿ ಮಾನುಷ್ಯ ಕರ್ಮವಾದ ಸೃಜಿಸುವದೆ ।
ನಾಗಶಯನನನಿಗೆ ಮೋದ ಮರುಳೆ ॥ ೧೧ ॥

ಈ ಪರಿಯು ಸರ್ವ ವ್ಯಾಪಾರದಿಂದಲಿ ।
ನಾಪಾರಗಾಣುವಾ ಪಥವು ಇಲ್ಲೆಂದು ।
ಕೋಪದಲಿ ನುಡಿಸಲ್ಲವು ವ್ಯರ್ಥ ಸಂ ।
ತಾಪಬಡಲಾಗದು ನಿನ್ನಷ್ಟು ।

ಸಂಪತ್ತು ಇತರಿಗಾರಿಗು ಮತ್ತಿಲ್ಲವೊ ಮರುಳೆ ॥ ೧ ॥
ಆವಾವಕರ್ಮದಿಂ ಆವಾವ ವಿದ್ಯದಿಂ ।
ಗೋವಿಂದ ಪ್ರೀತನಾಗಿ ಸುಜ್ಞಾನ ।
ಈವ ಭವಬಂಧನೀಗಿ ತತ್ಕೃತಿ । ಅ ವಿದ್ಯಂಗಳಿಗೆ ಆ ।
ಭುವನೆ ಸುಖಯೋಗಿ ಭೋಗಿ ಮರುಳೆ ॥ ೧೩ ॥
ಮಣಿಯು ಸಿಕ್ಕಿರಲದನು ತೃಣಮಾಡಿ ನಿಷ್ಕಾರ್ಯ ।
ದಣಿದು ನೀಚತ್ವವನ್ನು ।
ಎಣಿಸದೆ ನಾಮಾರ್ಥ ಮರ್ಮವನು ಎಚ್ಚರದೆ ।
ಕುಣಿಸಿ ಈ ದೇಹವನ್ನು ಇಲ್ಲಿರುಸಿ ।
ಉಣಬ್ಯಾಡ ದುಃಖವನ್ನು ಮರುಳೆ ॥ ೧೪ ॥
ಭರತಖಂಡದೊಳು ಭೂಸುರ ಜನ್ಮ ಸರ್ವಜ್ಞ ।
ವರಶಾಸ್ತ್ರದಧಿಕಾರವ ಕಳಕೊಳದೆ ।
ಚರಮ ಸೌಭಾಗ್ಯೋದ್ಭವ ಜ್ಞಾನದಿಂ ।
ವಿರಕುತಿ ಮೂಲ ಮಾಡಿ (ಭಾವ) ಪಡಿಯೋನೀ ।
ನರಹರಿ ರಘುಪತಿಯ ಪ್ರೇಮ ಸುಖವಾ ಮರುಳೆ ॥ ೧೫ ॥

ಶ್ರೀ ಪ್ರಾಣದೇವರ ಸ್ತೋತ್ರ

ಪದ (೩) ರಾಗ ಆನಂದ ಭೈರವಿ ಆದಿತಾಳ

ಎದುರ್ಯಾರೋ ಗುರುವೆ ಸಮರ್ಯಾರೋ ॥ ಪಲ್ಲ ॥
ಮದನ ಜನಕ ಪದ ಪದುಮಷಟ್ಪದನೆ ॥ಅನುಪಲ್ಲ॥
ಜನನ ತರುಣದಲಿ ಇನಶಶಿ ಮಂಡಲ ಫಲವೆನುತಲಿ ಸವಿಯಲು।
ವನನಜ ಮುಖ್ಯ ರಶನಿ ಕಾಕಾಗಮನ ದೀರ್ಘಾಯುವು ।
ಹನುಮಾಖ್ಯಾಯು ಕೊಡಲನುಪಮ ದೇಹದೊಳು ।
ಇನನೊಳು ನಿಗಮಗಳನು ವ್ಯಾಕರಣಗಳ ಗ ।
ಗನಪಥದಿ ಕಲಿದಿನಜನಸೇರಲು ।
ಮನುವಂಶನ ಪದ ವನಜದಯುಗಕೆ ।
ದಿನಪತಿ ತನಯಗೆ ಘನಸುಸ್ನೇಹಗ ।

ಳನು ಬೆಳಸುತ ಭೂತನುಜೆ ಗರುಹತಲಿ ।
ವನನಿಧಿ ಸೇರಿದ ವನಚರ ಮುಖ್ಯಾ ॥ ೧ ॥
ಘನಜವದಲಿ ಯೋಜನ ಶತಪರಿಮಿತ ।
ವನನಿಧಿ ದಾಟುತ ದನುಜರ ಪುರದೊಳು ।
ಜನಕ ನೃಪಾತ್ಮಜಯನು ಕಾಣದೆ । ಮನದನು ತಾಪದಲುಪ ।
ವನಸೇರಲು ಆದನುಜೆಯರನಡುವೆ । ವನಜ ಮುಖಿಯ ಪದ।
ವನಜವ ಕಾಣಲು । ಅನುವೋದದಿ ರಾಮನ ಕುಶಲವ ಶ್ರೀ ।
ವನಿತೆಗರುಹಿ ಕುರುಪಿನ ಮುದ್ರಿಯು ಕೊಡೆ ।
ಮಣಿಯು ಕೊಡಲು ಕೊಂಡಲನಗೆ ಲಂಕೆಯನುಣಿಸಿ ಬಂದನೃಪ।
ನೆಣಿಕಿಯ ಸಫಲಿಸಿದನುಪಮ ಶೌರ್ಯ ॥ ೨ ॥
ಕ್ಷಿತಿಯೊಳು ಕುಂತಿಸುತನಾಗೆ ದ್ರುಪದನ।
ಸುತಿಯನೆ ಮಾತೆಯ ಮತದಿಂದೈವರು ।
ಕೃತು ವೈವಾಹಿಸಿ ಅತಿಬಲನಾಗಾಯುತನ ಸತ್ವರ ಜರಾ ।
ಸುತನ ಸದೆದು ಪ್ರಮುದಿತೆ ದಿಂದಿರೆ ।
ಕ್ಷಿತಿಯಾಳುತ ಧೂರ್ತ ವಿತತಿಕೃತ ದ್ಯೂತದಿ ।
ಕ್ಷಿತಿ ಬಿಡುತಲಿ ಪರ್ವತ ವನಗಳ ತಿರುಹುತಲಿ ವಿರಾಟ ಭೂ ।
ಪತಿಯ ಸೇರಿದಿತಿಸುತ ಕೀಚಕನನ್ಮಥಿಸಿ ಪುರಕ ಬಂ।
ದತಿ ರಥ ರಥಿಕರ ಪೃಥನದಿ ಸವರಿದ ಕ್ಷಿತಿ ಪತಿ ಚಂದ್ರಾ ॥ ೩ ॥
ಕಡುಭೀಷಣಗದೆ ಪಿಡಿದಹಿತರ ಎದೆವೊಡೆಯಲು ಘರ್ಜಿಸು ।
ತಡೆ ಎಡೆ ಜಡೆ ಗಡಗಡನೆ ನಡುಗಿ ಪೊರೆಪೊರೆಗಳ ಹಿಡಿಯುತ।
ಪುಡಿ ಪುಡಿ ಮಾಡುತ ಕಡಿಯಲು ಕ್ರೋಧದಿ ।
ಘುಡಿ ಘುಡಿಸುತ ನಿಜ ಮಡದಿಯ ಶರಗನು ।
ಪಿಡಿದನ ರಕುತವ ಮುಡಿದ ಕುರುಪತಿಯ ।
ತೊಡೆಗಳ ಶೀಳುತ ಕೆಡಹಿ ಶತ್ರುವ ।
ಪೊಡವಿಯೊಳಣ್ಣಗ ಕೊಡುತ ವಿಜಯ ಸುಧೆ ।

ಸಂಪತ್ತು ಇತರಿಗಾರಿಗು ಮತ್ತಿಲ್ಲವೊ ಮರುಳೆ ॥ ೧ ॥
ಆವಾವಕರ್ಮದಿಂ ಆವಾವ ವಿದ್ಯದಿಂ ।
ಗೋವಿಂದ ಪ್ರೀತನಾಗಿ ಸುಜ್ಞಾನ ।
ಈವ ಭವಬಂಧನೀಗಿ ತತ್ಕ್ರತಿ । ಅ ವಿದ್ಯಂಗಳಿಗೆ ಆ ।
ಭುವನೆ ಸುಖಯೋಗಿ ಭೋಗಿ ಮರುಳೆ ॥ ೧೩ ॥
ಮಣಿಯು ಸಿಕ್ಕಿರಲದನು ತೃಣಮಾಡಿ ನಿಷ್ಕಾರ್ಯ ।
ದಣಿದು ನೀಚತ್ವವನ್ನು ।
ಎಣಿಸದೆ ನಾಮಾರ್ಥ ಮರ್ಮವನು ಎಚ್ಚರದೆ ।
ಕುಣಿಸಿ ಈ ದೇಹವನ್ನು ಇಲ್ಲಿರುಸಿ ।
ಉಣಬ್ಯಾಡ ದುಃಖವನ್ನು ಮರುಳೆ ॥ ೧೪ ॥
ಭರತಖಂಡದೊಳು ಭೂಸುರ ಜನ್ಮ ಸರ್ವಜ್ಞ ।
ವರಶಾಸ್ತ್ರದಧಿಕಾರವ ಕಳಕೊಳದೆ ।
ಚರಮ ಸೌಭಾಗ್ಯೋದ್ಭವ ಜ್ಞಾನದಿಂ ।
ವಿರಕುತಿ ಮೂಲ ಮಾಡಿ (ಭಾವ) ಪಡಿಯೋನೀ ।
ನರಹರಿ ರಘುಪತಿಯ ಪ್ರೇಮ ಸುಖವಾ ಮರುಳೆ ॥ ೧೫ ॥

ಶ್ರೀ ಪ್ರಾಣದೇವರ ಸ್ತೋತ್ರ

ಪದ (೩) ರಾಗ ಆನಂದ ಭೈರವಿ ಆದಿತಾಳ

ಎದುರ್ಯಾರೋ ಗುರುವೆ ಸಮರ್ಯಾರೋ ॥ ಪಲ್ಲ ॥
ಮದನ ಜನಕ ಪದ ಪದುಮಷಟ್ಪದನೆ ॥ಅನುಪಲ್ಲ॥
ಜನನ ತರುಣದಲಿ ಇನಶಶಿ ಮಂಡಲ ಫಲವೆನುತಲಿ ಸವಿಯಲು।
ವನನಜ ಮುಖ್ಯ ರಶನಿ ಕಾಕಾಗಮನ ದೀರ್ಘಾಯುವು ।
ಹನುಮಾಖ್ಯಾಯು ಕೊಡಲನುಪಮ ದೇಹದೊಳು ।
ಇನನೊಳು ನಿಗಮಗಳನು ವ್ಯಾಕರಣಗಳ ಗ ।
ಗನಪಥದಿ ಕಲಿದಿನಜನಸೇರಲು ।
ಮನುವಂಶನ ಪದ ವನಜದಯುಗಕೆ ।
ದಿನಪತಿ ತನಯಗೆ ಘನಸುಸ್ನೇಹಗ ।

ಳನು ಬೆಳಸುತ ಭೂತನುಜೆ ಗರುಹತಲಿ ।
ವನನಿಧಿ ಸೇರಿದ ವನಚರ ಮುಖ್ಯಾ ॥ ೧ ॥

ಘನಜವದಲಿ ಯೋಜನ ಶತಪರಿಮಿತ ।
ವನನಿಧಿ ದಾಟುತ ದನುಜರ ಪುರದೊಳು ।
ಜನಕ ನೃಪಾತ್ಮಜಯನು ಕಾಣದೆ । ಮನದನು ತಾಪದಲುಪ ।
ವನಸೇರಲು ಆದನುಜೆಯರನಡುವೆ । ವನಜ ಮುಖಿಯು ಪದ।

ವನಜವ ಕಾಣಲು । ಅನುವೋದದಿ ರಾಮನ ಕುಶಲವ ಶ್ರೀ ।
ವನಿತೆಗರುಹಿ ಕುರುಪಿನ ಮುದ್ರೆಯು ಕೊಡೆ ।

ಮಣಿಯು ಕೊಡಲು ಕೊಂಡಲನಗೆ ಲಂಕೆಯನುಣಿಸಿ ಬಂದನೃಪ।
ನೆಣಿಕಿಯು ಸಫಲಿಸಿದನುಪಮ ಶೌರ್ಯ ॥ ೨ ॥

ಕ್ಷಿತಿಯೊಳು ಕುಂತಿಸುತನಾಗೆ ದ್ರುಪದನ।
ಸುತಿಯನೆ ಮಾತೆಯ ಮತದಿಂದೈವರು ।
ಕೃತು ವೈವಾಹಿಸಿ ಅತಿಬಲನಾಗಾಯುತನ ಸತ್ವರ ಜರಾ ।
ಸುತನ ಸದೆದು ಪ್ರಮುದಿತೆ ದಿಂದಿರೆ ।

ಕ್ಷಿತಿಯಾಳುತ ಧೂರ್ತ ವಿತತಿಕೃತ ದ್ಯೂತದಿ ।
ಕ್ಷಿತಿ ಬಿಡುತಲಿ ಪರ್ವತ ವನಗಳ ತಿರುಹುತಲಿ ವಿರಾಟ ಭೂ ।

ಪತಿಯು ಸೇರಿದಿತಿಸುತ ಕೀಚಕನನ್ಮಥಿಸಿ ಪುರಕ ಬಂ ।
ದತಿ ರಥ ರಥಿಕರ ಪೃಥನದಿ ಸವರಿದ ಕ್ಷಿತಿ ಪತಿ ಚಂದ್ರಾ ॥ ೩ ॥

ಕಡುಭೀಷಣಗದೆ ಪಿಡಿದಹಿತರ ಎದೆವೊಡೆಯಲು ಘರ್ಜಿಸು ।
ತಡೆ ಎಡೆ ಜಡೆ ಗಡಗಡನೆ ನಡುಗಿ ಪೊರೆಪೊರೆಗಳ ಹಿಡಿಯುತ।

ಪುಡಿ ಪುಡಿ ಮಾಡುತ ಕಡಿಯಲು ಕ್ರೋಧದಿ ।
ಘುಡಿ ಘುಡಿಸುತ ನಿಜ ಮಡದಿಯ ಶರಗನು ।

ಪಿಡಿದನ ರಕುತವ ಮುಡಿದ ಕುರುಪತಿಯು ।
ತೊಡೆಗಳ ಶೀಳುತ ಕೆಡಹಿ ಶತ್ರುವ ।
ಪೊಡವಿಯೊಳಣ್ಣಗ ಕೊಡುತ ವಿಜಯ ಸುಧೆ ।

ಉಡುಪ ಕೀರ್ತಿಯು ಪಡೆದ ಲಕುಮಿಯು ಪಡೆದ ನರೇಂದ್ರಾ ||೪||
ಗುರು ಮಧ್ವಾಖ್ಯದಿ ಧರೆಯೊಳು ನೀನವತರಿಸಿ ನಿಗಮಗಳ |
ವರ ಶಾಸ್ತ್ರಂಗಳ ಪರಿಶೋಧಿಸಿ ಕೇಸರಿ ಕರಿ ವೃಂದಗಳ್ |
ಭರದಿಂದೋಡಿಪ ತೆರದಿಂಕುಮತರ ಪರಿದೋಡಿಸಿ ಸ |
ತ್ಪುರುಷ ಕುಮುದ ಹಿಮಕರ ನಗೆನಿಗಮ ಸುರಧೇನಿವಿನೋಲ್ |
ಹರಿಸರ್ವೋತ್ತಮನೆಂಬುವ ಮಾತ್ಪಾಲಕರೆದು ಶಿಷ್ಯರೀ |
ಗೆರದು ಕುವಾದಿಕುಪುರುಷ ಕಮಲ ಹಿಮಕರ ನಗೆಮೊರದ್ಯೋ |
ನರಹರಿ ರಘುಪತಿ ಭಕುತನೆ ಗುರುಯತಿರಾಯನೆ || ೫ ||

(ಈ ಪದ ಆರದೆಂಬುದು ವಿಚಾರಾಂಶವದೆ)

ಪದ (೪) ●ೀಹರಿ ರಾಗ

ಹರಿಯೆ ಇದು ಸರಿಯೆ |
ಚರಣ ಸೇವಕನಲಿ ಕರುಣ ಬಾರದ್ಯಾಕೆ ||ಪಲ್ಲ||
ಪತಿತನೆಂದು ಶ್ರೀಪತಿ ರಕ್ಷಿಸದಿರೆ |
ವಿತತವಾಹದೆ ನಿನ್ನ ಪತಿತಪಾವನ ಕೀರ್ತಿ || ೧ ||
ಶಕ್ತ ನೀನಾಗಿದ್ದು ಭಕ್ತನುಪೇಕ್ಷಿಸೆ |
ಭಕ್ತವತ್ಸಲನಾಮ ವ್ಯರ್ಥವಾಗದೆ || ೨ ||
ದಿಗಿಲಿಲ್ಲದೆ ಒದ್ದ ಭೃಗುವ ಪಾಲಿಸಿದೆ |
ನಗಧರ ಎನ್ನ ಬಿಡುವಬಗೆ ಏನಿದು || ೩ ||
ಹೇಯ ಅಜಾಮಿಳನ ಕಾಯಲಿಲ್ಲವೆ | ಸ್ವ
ಕೀಯನೆ ನಾ ಪರಕೀಯನೆ ನಿನಗೆ || ೪ ||
ಉಂಟು ಹಿರಣ್ಯಕನ ಕಂಟಕ ಬಿಡಿಸಿದ್ದು |
ನೆಂಟನೆ ನಿನಗೆ ಭಂಟನಾನಲ್ಲವೆ || ೫ ||
ಕೆಟ್ಟ ಅಹಲ್ಯೆಯು ಧಿಟ್ಟ ಪಾಲಿಸಿದ |
ಕೊಟ್ಟಳು ಅವಳೇನ(ನ್) ಬಿಟ್ಟದ್ದು ನಾನೇನ (ನ್) || ೬ ||
ದೊರೆ ನಿನ ಮನಸ್ಸಿಗೆ ಸರಿಬಂದಂತೆ ಮಾಡು |
ನೊರೆ ಹೊಕ್ಕೆನು ನಾ ನರಹರಿ ಪೂರ್ಣನೆ || ೭ ||

ಶ್ರೀಪಾದ ರಾಜರ ಸುಳಾದಿಗಳು

ರಂಗವಿಠಲರು

ಶ್ರೀಕೃಷ್ಣ ಚಾರಿತ್ರ, ಗೋಪಿಕಾ ವಿರಹ

ಸುಳಾದಿ (೧)

ರಾಗ ಧ್ರುವ ತಾಳ

ಈ ವನದೆಡೆಗಳು ಈ ನದಿಪುಲಿನಗಳೀ ।
ಶಶಿ ಶಿಲೆಗಳು ಈ ಸುರ ತರುವಿನ ನೆಳಲು ।
ಈ ತರು ಲತೆಗಳು ಈ ಶುಕ ಪಿಕ ಗಣ ।
ಯಾಕೆ ಮಾಧವನ ಮರೆಯಲೀಯವೆ ಕೆಳದಿ ।
ಆ ಮುಗುಳು ನಗೆಯು ಆ ಸೊಬಗಾ ।
ಆ ಸುರತರು ನೆಳಲಲ್ಲಿ ರತಿಯು ।
ಈ ಸುರತವ ನರುಹಿದಾ (ಅ) ಬಲಿಯರಿಗೆ ।
ಈ ಸುಗುಣ ಮಯರಂಗ ವಿಟ್ಠಲನೆ ಕೆಳದಿ ॥ ೧ ॥

ಮಟ್ಟತಾಳ

ಇನ್ನು ರಂಗನ ಸಂಗವ ಇನ್ನೆತ್ತಣದು ಗೋಪಿಯರಿಗೆ ।
ಮಧುರಾಪುರಿಯ ಮಾನಿನಿಯರ ಬಲಿಗೆ ಕೃಷ್ಣನೆ
ಸಿಲುಕಿದನಾಗಿ ।
ರತಿ ವಿದಗ್ಧರಾದ ವಧುಗಳು ।
ರಸಿಕ ನಮ್ಮ ರಂಗ ವಿಟ್ಠಲಾ ॥ ೨ ॥

ರೂಪಕ ತಾಳ

ಬಿಡುವಾರು ಅಧಮರರಾ ಗಣಿಕಾ ಸ್ತ್ರೀಯರು ನರೆ ।
ಬಿಡುವವು ವೀತ ಫಲ ತರುಲತೆ ದ್ವಿಜಗಣ ।
ಬಿಡುವವು ಮೃಗದಾ ದಳ್ಳುರಿಯು ಕಂಡಡವಿಯು ।
ಬಿಡುವಾನೆ ಜಾರ ಪರಸತಿಯರ ನೆರದಿನ್ನು । ಈ ಪರಿ
ಕಂಡೆವು ನಮ್ಮವಲ್ಲಭನಲ್ಲಿ ।
ಅಕ್ಕಟ ರಂಗ ವಿಟ್ಠಲ ಕರುಣಿಯೆ ॥ ೩ ॥

ಝಂಪೆ ತಾಳ

ಹೆತ್ತ ತಾಯಿ ತಂದೆಯರಾ ನೋಡಲೆಂದು ।
ಇತ್ತಲಟ್ಟಿದನೆ ಉದ್ಧವ ನಿನ್ನ ಗೋವಳಾ ।
ಮತ್ತಾರು ಉಂಟು ವ್ರಜದೊಳು ತನಗೆನೆನವರು ।
ಹತ್ತಿರಿಕೆ ತನ್ನೀವರಲ್ಲಿ ತಾ ಬಿಡುವನೆ ।
ಅರ್ಥಕೃತ ಸ್ನೇಹ ನಮ್ಮೊಡನೆ ಮಾಡಿದ ಕೃಷ್ಣ ।
ಮತ್ತಾಳಿಗೆ ಕುಸುಮ ದಾನೆ ಹಾದಂತೆ।
ರಕ್ತೀ ಎಮ್ಮೊಳಗುಂಟು ರಂಗವಿಟ್ಠಲಗೆ ॥ ೪ ॥

ತ್ರಿವಿಡಿತಾಳ

ಇನ್ನ್ಯಾತಕೆ ರಂಗ ಇಲ್ಲಿಗೆ ಬಾಹಾ ।
ಮಧುಪುರಿಯರ ಅರಸನಾದಾ ।
ಮಲ್ಲರಕೊಂದು ಮಾವನ್ನ ಮರ್ದಿಸಿ ।
ಮಧುರಾಪುರಿಗೆ ರಂಗ ಅರಸನಾದಾ ।
ಅವನ ನೆನಹೆ ಸಾಕುರಂಗವಿಟ್ಠಲನಾ । ॥ ೫ ॥

ಧ್ರುವತಾಳ

ಕುಂದುಕುಸುಮ ಶಶಾಂಕ ರಂಜಿತ ।
ವೃಂದಾವನದಲ್ಲಿಹಾ ।
ಮಂದಮಾರುತ ಬರಲು ನಲುವ ನರ ।
ವಿಂದನಯನ ಹಾ ।
ಕಂದಿದೆವು ಕುಂದಿದೆವು ನಾವು ।
ಕಂದರ್ಪನ ಶರ ದಟ್ಟ್ಯಾಳಿಗೆ ।
ಇಂದು ಮುಖಿಯರ ವೃಂದದೊಡನೆ ಕೃಷ್ಣ ।
ಅಂದು ನಮ್ಮೊಡನಾಡಿದ ಪರಿಯನು ತಾನು ।
ಇಂದೊಮ್ಮೆಯಾದರು ನೆನವನೆಹಾ ॥ ೬ ॥

ರೂಪಕತಾಳ

ಪೊಂಪೇರು ಎಲ್ಲಿಂದ ಬಂದಿದೆ ವ್ರಜದಲ್ಲಿ ।
ಅಂಥ ನಕ್ರೂರ ತಾ ನುರಳಿ ।

ಬಂದನು ನಮ್ಮ ಕರದೊಯ್ಯ ಬೇಕೆನುತ ।
ಕೊಂದುಕೊಳ್ಳಲಿ ತಮ್ಮ ಹಿರಿಯರನು ಹರಲಿಗೆ ।
ಅಂದೆಮ್ಮನಗಲಿಸಿದ ರಂಗ ವಿಟ್ಠಲಾ ।
ಅಂದೆಮ್ಮ ಕೊಂದಾ ಇಂದ್ಯಾಕೆ ಕೊಲ್ಲಲಿ ಬಂದಾ ॥ ೭ ॥

ಅಟ್ಟತಾಳ

ಪರಮ ಸುಖದಾಸೆಯು ಬೇರೆಯಿಲ್ಲವೆಂದು ।
ಪರದಳು ಪಿಂಗಳೆ ಜನರಿಗೆ ಹಿತವನು ।
ಪರಮ ಸುಖದಾಸೆ ಈತನ ಸೇವೆ ಎಲ್ಲವೆ ।
ಅರಿದರಿದು ಬಿಡುವ ನಾವು ನರ ಪಶುಗಳಲ್ಲವೆ ।
ಸಿರಿರಮಣಿ ಬಿಡಲು ನಮ್ಮ ರಂಗ ವಿಟ್ಠಲನಾ ॥ ೮ ॥

ಏಕತಾಳ

ಎಮ್ಮ ತನುಮನ ತನ್ನಾಧೀನ ಮೇಲೆ ।
ಅನ್ಯವರಿಯುವು ತಾನರಿದಂತೆ ಮಾಡಲಿ ।
ನಮ್ಮ ರಂಗ ವಿಟ್ಠಲರೇಯಗೆ ನಾವು ।
ಇನ್ನು ಸತಿ ಮರಹುವದೆ ಕೆಳದಿ ॥ ೯ ॥

ಜತೆ

ಅವನ ಹಂಬಲವೆನಗೆ ಜೀವನವವ್ವಾ ।
ಭುವನಮೋಹನ ರಂಗ ವಿಟ್ಠಲದೇವರದೇವ ॥ ೧೦ ॥

ರಂಗ ವಿಠಲರು

ಸುಳಾದಿಗಳು ೨

ರಾಗ ಪಂತುರಾವಳಿ ಧ್ರುವತಾಳ

ಅನಂತ ಕಾಲದಲ್ಲಿ ನಿನ್ನ ನಾ ನರಿಯದೆ ಭವಗಳಲ್ಲಿ ಬಂದೆನೊ ।
ಅನಂತ ಕಾಲದಲ್ಲಿ ನಿನ್ನನೆ ನೆನಿಸದೆ ಮೂರುಖ ನಾದೆನೊ ।
ಅನಂತ ಕಾಲದಲ್ಲಿ ನಿನ್ನ ಚರಣ ರತಿ ಇಲ್ಲದೆ ನೊಂದೆನೊ ।
ಅನಂತ ಕಾಲದಲ್ಲಿ ದಾವ ಪುಣ್ಯದಿಂದ ಬಂದು ಇಂದೂ ।
ನಿನ್ನವ ನೆನಿಸಿದೆ ಆವ ಪುಣ್ಯವೆನ್ನಮನ ।

ನಿನ್ನಲ್ಲೆರಗಿತು ನೋಯುದಂತೆ ಎನ್ನ ಪೊರೆದು ಪಾಲಿಸೊ ।
ದೀನ ನಾಥ ಸಿರಿರಂಗ ವಿಟ್ಠಲಾ ॥ ೧ ॥

ಮಟ್ಟತಾಳ

ಅನ್ನಕೆ ಪ್ರದ್ರಾವಣ ದೇಹ ನಿವಿತ್ಯ? ।
ಅನ್ನಕೆ ಶೋಕಾಸಿ ಎನೆ ಮಾಡಿ ।
ಅನ್ನದ ಲೋಭೆ ಅಶುಭದ ಲಾಭ ।
ಅನ್ನಕೆ ನನ್ನದು ನಾನೆಂಬ ಹಮ್ಮು ।
ಅನ್ನಕೆ ಯಾವನ್ನಕ ।
ನಿನ್ನ ಚರಣರತಿ ದೊರಕೊಳ್ಳದೊ ।
ಉನ್ನತ ಗುಣ ಪರಿಪೂರ್ಣರಂಗ ವಿಟ್ಠಲಾ ॥ ೨ ॥

ರೂಪಕತಾಳ

ತೊಳಲಿ ಸಂಸಾರ ಚಕ್ರದಲಿ ಸಿಕ್ಕೀ (ಸಿಲುಕಿ) ।
ಬಳಲಿದ ಜೀವಗಣಕೆ ಸಂತತ ।
ನಳಿನನಾಭ ನಿನ್ನ ಪಾದಾಂಬುಜ ।
ನೆಳಲು ನೆಮುಗೆ (ಆಧಾರ) ಎಲ್ಲವೆ ।
ಉಳವೆ ಜಗದೊಳು ಪರಮ ಸುಖಂಗಳ ।
ಕಳವಳಿಸುವರಾರು ರಂಗವಿಟ್ಠಲ ।
ನಳಿನನಾಭ ನಿನ್ನ ಪಾದಾಂಬುಜ ॥ ೩ ॥

ಝಂಪಿತಾಳ

ನೀ ಕರುಣಿ ಎಂದು ನಿನ್ನನೆ ನಾನು ನಂಬಿದೆನೊ ।
ನೀ ಕರಿಸದೆ ಎನ್ನ ಶ್ರೀಕಾಂತ ಕಾಯಯ್ಯ ।
ನಿನ್ನವ ನೆಂಬೆನಾನು ಮ ।
ತ್ತನ್ಯ ಪರಿಯೇನೊ ಇಂದಿರೇಶಾ ।
ಕಂದರ್ಪ ನೆಂದೆಂದು ಕಾಣದಂತೆ ಮಾಡೊ ।
ವೃಂದಾರಕಾಧೀಶರಂಗ ವಿಟ್ಠಲ ನಿನ್ನವ ನೆಂಬೆ ನಾನು ॥ ೪ ॥

ತ್ರಿವಿಡ ತಾಳ

ವ್ರತ ಜಪ ತಪ ಹೋಮ ಮಾಡುವೆನೆಂದು ।

ತಪ್ಪದೆ ಮನೆ ಮನೆ ತಿರುಗಿ ಬಳಲುವೆ ।
ಬೆಲೆಗೆ ಹೋಗದು ಸಂಕು ಸುಡಲಿದವ್ಯೆಯ್ಯಾ ।
ಹರಿಯೆ ಕೊಂಬುವರಿಲ್ಲ ಬೆಲೆ ಹೋಗದು ।
ಸಂಕು ಸಡಲದಂತೆ ಕಡೆಗೆ ತೆಗೆದು ನಿನ್ನ ।
ಚರಣ ದಡಿಯಲಿಟ್ಟು ಕಾಯೊ ರಂಗ ವಿಟ್ಠಲಾ || ೫ ||

ಅಟ್ಟತಾಳ

ಎನ್ನ ಮನ ಹರಿ ನಿನ್ನ ಚರಣದೊಳೊಮ್ಮೆ ಎರಗದು ।
ದುರಿತ ದುಷ್ಕೃತ ಎಂತು ಸೈರಿಪೆನೊ ।
ನಂದ ನಂದನ ಮುಕುಂದ ನಾನೆಂತು ।
ಎನ್ನ ಮನ ಹರಿ ನಿನ್ನ ಚರಣ ದೊ ।
ಳೊಮ್ಮೆ ಎಂಗಿಸು ರಂಗ ವಿಟ್ಠಲಯ್ಯಾ । ಎಂತು || ೬ ||

ಆದಿತಾಳ

ಭವವೆಂಬ ಟವಿಯಲ್ಲಿ ಭಯ ಕೊಳದಲಿ ಸಿಕ್ಕಿ ।
ತಾಪತ್ರಯ ವೆಂಬುದು ದಾವಾ ನತಿ ।
ತಪ್ಪೆನವರಿಗೆ ಹರಿ ನಿನ್ನ ನಾಮತ್ರಯವಲ್ಲದೆ ಮತ್ತುಂಟೆ ।
ಅಮಿ (ಪ) ರಮಿತ ವಾದ ಪಾದ ಪದುಮ ಮನೆ ।
ನೆಳಲಲಿ ನಿಲಿಸೆನ್ನ ರಂಗ ವಿಟ್ಠಲಾ || ೭ ||

ಜತೆ

ಬೆಂದಾ ಸಂಸಾರದಿ ಬಂದು ಬಂದು ನೊಂದೆನಯ್ಯಾ ।
ನಂದ ನಂದನ ಕಾಯೊ ರಂಗ ವಿಟ್ಠಲರೇಯಾ || ೮ ||

ರಂಗ ವಿಠಲರು

ಸುಳಾದಿ ೨

ರಾಗ ಸಾರಂಗ ಧ್ರುವ ತಾಳ

ನಿನ್ನಾಧೀನ ಶರೀರ ಕರಣ ಚೇಷ್ಟೆಗಳೆಲ್ಲ ।
ನಿನ್ನಾಧೀನ ಬಂಧ ಮೋಕ್ಷ ನಿರಯಗಳು ।
ನಿನ್ನಾಧೀನ ಯೋಗ್ಯತೆ ಸಾಧನ ಸಾಧ್ಯಗಳೆಲ್ಲ ।

ನಿನ್ನಾಧೀನ ಸುಕೃತ ದುಷ್ಕೃತ ಫಲವೋ ।
ನಿನ್ನಾಧೀನ ವಿಷಯಾತ್ಮಕ ಬುದ್ಧಿಗಳೆಲ್ಲ ।
ನಿನ್ನಾಧೀನ ಚರಾಚರ ವೆಂದು ಶ್ರುತಿಸಾರುತಿದೆ ।
ಎಂತು ಪುಣ್ಯಪಾಪಂಗಳು ನಿನ್ನ ಲೇಪಿಸವೊ ದೇವ ।
ಇಂತು ಜೀವರನ ನೋಡಿ ಪಾಪಂಗಳುಣಿಸುವೆ ।
ಅಂತರಾತ್ಮನೆ ನಿನ್ನ ಮಹಿಮೆಗೆ ನಮೊನಮೊ ।
ಎಂತು ಚಿತ್ರವೊ ನೀನೆಂತು ಪಾಲಿಸುವಿಯೊ ರಂಗ ವಿಟ್ಠಲ ॥೧॥

ಮಟ್ಟತಾಳ

ಮುನ್ನ ನಿನ್ನ ಚರಣ ಕಮಲವ ।
ನೆನೆಯದೆ ಭವಗಳಲ್ಲಿಬಂದೆನೊ ।
ಪನ್ನಗ ಶಯನ ಶ್ರೀಹರಿ ।
ಎನ್ನ ಗುಣದೋಷವರಸದೇ ।
ಇನ್ನು ಕಾಯೋ ರಂಗವಿಟ್ಠಲ ॥ ೨ ॥

ತ್ರಿವಿಡಿತಾಳ

ಕರಣಗಳು ಬಿಡದೇ ತಮ್ಮ ತಮ್ಮ ವಿಷಯಂಗಳಿಗೆ
ಎಳವುತಲಿವೆ ಎನ್ನನು ।
ಹರಣ ನಿನ್ನದೊ ಕರುಣಾಕರನೆ ।
ಕರುಣಿ ನಿನ್ನ ಭಕತರಿಗೆ ಶರಣನೆಂದೆ ಎನ್ನನು ।
ಪೊರೆವದು ಬಿರಿದುಚಿತ ।
ಕರುಣಾಕರನೆ ರಂಗವಿಠಲರೇಯಾ ।
ಪೊರೆವದು ಬಿರಿದುಚಿತ ॥ ೩ ॥

ಅಟ್ಟತಾಳ

ಬಂದು ಬಂದು ನಾನಾಭವದಲ್ಲಿ ನೊಂದೆನು ।
ನಂದನ ಕಂದ ಇಂದಿರಾನಂದ ।
ಕುಂದ ಶುದ್ಧ ಧವಳದಂತೆ ಮಂದಹಾಸ ।
ನಂದನಕಂದ ಇಂದಿರಾನಂದ ।
ಇಂದೆನ್ನ ಸಲಹಯ್ಯಾ ರಂಗ ವಿಟ್ಠಲ ॥ ೪ ॥

ಆದಿತಾಳ

ಹರಿಯೆ ನಿನ್ನ ಒಮ್ಮೆ ನೆನೆದವ ನರಕವ ಹೊಗನಂತೆ ।
ನಾ ನಿನ್ನೊಮ್ಮೆ ೧ ಇಮ್ಮನೆ ನೆನೆವೆ । ಕರುಣಿಸಿ ಕಾಯೋ ರಂಗ
ವಿಟ್ಠಲ ॥ ೫ ॥

ಜತೆ

ಮಂಗಳ ಮಹಿಮ ಭುಜಂಗ ಶಯನ ನಮೊ ।
ಜಂಗುಳಿ ದೈವದ ಗಂಡ ರಂಗ ವಿಟ್ಠಲ ॥ ೬ ॥

— ಶ್ರೀ ಮಧ್ವೇಶ ಕೃಷ್ಣಾರ್ಪಿತವು. —

ಶ್ರೀ ವ್ಯಾಸರಾಜರ ಸುಳಾದಿಗಳು

ಶ್ರೀ ಕೃಷ್ಣ

ಸುಳಾದಿ ೧

ರಾಗ ನಾಟಿ ಧ್ರುವತಾಳ

ನೀಲ ಮೇಘ ಶ್ಯಾಮ ಕೋಮಲಾಂಗದ ಮೇಲೆ ಶಿರದಲ್ಲಿ
ರಂಜಿಪ ।
ಬಾಲ ಸೂರ್ಯಕೋಟಿತೇಜ ರತುನ ಮುಕುಟ ।
ಫಾಳದೊಳರಳೆಲೆ ಕಿವಿಗಳಲಿ ಮಾಗಾಯಿಗಳ ಕಮಲನೇತ್ರದ ।
ಮೂ ಲೋಕವ ಮೋಹಿಸುವ ನಾಶಿಕದ ಕಮಲವದನ ವಿ ।
ಶಾಲೋರ ಸ್ಥಳದ ಸಿರಿ ಸಿರಿ ಗಂಧ ಕೌಸ್ತುಭ ವೈಜಯಂತಿ ।
ಮಾಲೆಯಂನಳಿ ತೋಳು ನಡುವಿನ ಪೀತಾಂಬರದ ಮೌಕ್ತಿಕ ।
ಜಾಲಧಲ್ಲಿನ ಖಡೆಯ ಪೆಂಡೆಯು ಪದಕಗಳೆಸೆಯೇ ।
ನೀಲ ಮೇಘಶ್ಯಾಮಾ ಆ ಆ ಆ ನತಜನ ।
ಪಾಲಕನವತಾರವಾದ ಬಾಲಲೀಲಾ ಲೋಲಾ ಅಂಬೆ ।
ಗಾಲು ಕೃಷ್ಣ ನಿನ್ನ ದಿವ್ಯ ಮೂರುತಿಯ ಎನ್ನ ಹೃದಯ ।
ಆಲಯದೊಳಗಿರಿಸೊ ಪರಮಾನಂದ ಶರಧಿಯಲಿ ಬಿಡ ।
ದೋಲಾಡುವಂತೆನ್ನ ಮಾಡು ನೀಲ ಮೇಘಶ್ಯಾಮ ॥ ೧ ॥

---

೧ ಪವಿಯಾದ ಬಗೆಯಲ್ಲಿ

ಮಟ್ಟತಾಳ

ಶುಕ ಶೌನಕ ಸವಕ ಸನಂದನ ಸನತ್ಕುಮಾ ।
ರಕ ಪ್ರಲ್ಹಾದಂಬರೀಷ ನಾರದ ।
ರುಕುಮಾಂಗದ ನಗಸ್ತ್ಯ ದುರ್ವಾಸಾದಿಗಳು ।
ಭಕುತಿಯಿಂದ ಸಕಲ ಸುಖವ ಪಡದರರಿಯೆಂದಯ್ಯಯ್ಯಾ ।
ಭಕುತಿಯಿಂದ ಸಕಲ ಸುಖವ ಪಡದರು ।
ರುಕುಮಿಣಿ ಪತಿ ಸಿರಿ ಅಂಬೆಗಾಲು ಕೃಷ್ಣ ನಿನ್ನ ।
ಭಕುತಿಯು ಕೃಪೆ ಮಾಡೊದಮ್ಮಯ್ಯಾ ॥ ೨ ॥

ರೂಪಕತಾಳ

ಸತಿಸುತರೊಳಗುಳ್ಳ ಸ್ನೇಹವ ನಿನ್ನೊಳುಳ್ಳಡೆ
ಬದಕುವೆನಿಹ ಪರದಲಿ ಶ್ರೀ।
ಪತಿಯೆ ಗತಿ ಪತಿ ನಿನ್ನಿಂದೆಂಬ ।
ಮತಿ ಮನದೊಳ ಗುಳ್ಳಡೆ ಬದಕುವೆನಿಹ ಪರದಲಿ ಶ್ರೀ ।
ಪತಿಯೇ ರತಿಪತಿ ಪಿತ ಸಿರಿ ಅಂಬೆಗಾಲು ಕೃಷ್ಣ
ಶ್ರೀ ಪತಿಯೇ ॥ ೩ ॥

ಝಂಪೆತಾಳ

ಅರುಹುದೆಮ್ಮರುಹುವೆಮ್ಮೊಮ್ಮ ಎಚ್ಚಕನ್ನ ।
ರರುವೇ ಅಜ್ಞಾನ ತತ್ವದಿಂ ಮತ್ತರುಗೆನಾದೆ ।
ಆರೆ ನಾರಿ ಸಂಸಾರ ದುಪಟಳಕೆ ಆ ಆ ಆ ।
ಆರೆ ನಾರಿ ಸಂಸಾರ ದುಪಟಳಕ್ಕೆ ।
ಆರೆ ನಯ್ಯಾ ಅಂಬೆಗಾಲು ಕೃಷ್ಣಯ್ಯಾ ॥ ೪ ॥

ತ್ರಿಪುಟತಾಳ

ಮಾಯೆಯು ಭ್ರಾಂತಿಯಿಂದ ವೃಥಾನೊಂದೆನೊ ।
ಕಾಯೋ ಯಾದವರಾಯನೇ ಮುನಿಜನ ।
ಧ್ಯೇಯ ನತಜನ ಪ್ರೀಯುವರ್ಯನಯ್ಯಾ ।
ಕಾಯೋ ಯಾದವರಾಯನೆ ಅಂಬೆಗಾಲು ಕೃಷ್ಣಯ್ಯ ।
ಕಾಯೋ ಯಾದವರಾಯ ॥ ೫ ॥

ಅಟ್ಟತಾಳ

ನಿನ್ನ ದೊಂದೊಂದು ಮಾಯಾನಟನೆಗಳಿಂದ ಜಗಂ
ಗಳ ಮೋಹಿಸುತಿದೆ ಇ।
ದೇನೆಂತು ತಿಳಿಯಬಾರದಜ ಭವಾದಿಗಳಿಗೆ ಇಂದಿರೇರಮಣ।
ನಿನ್ನ ಕಂದ ನೆಂದೆನ್ನುವಮನ್ನಿಸಿ ಸಲಹಯ್ಯಾ।
ಇಂದಿರೇಯರಮಣ ಕೃಪಾಸಿಂಧು ಸಿರಿ ಅಂಬೆಗಾಲು
ಕೃಷ್ಣಯ್ಯಾ ॥ ೬ ॥

ಏಕತಾಳ

ಸನ್ನುತ ನನುಪಮ ಮಹ ಮಹಿಮ್ನಾ।
ನಿನ್ನ ಮನದಲಿ ನೆನವರ ನೆನೆವ।
ಇನ್ನಿತು ಬೇಡುವೆ ಕೊಡು ಮಹಾಮಹಿಮ।
ಮಾನಿನಿ ಸಿರಿ ಅಂಬೆಗಾಲು ಕೃಷ್ಣಯ್ಯಾ।
ನಿನ್ನ ಮನದಲಿ ನೆನೆವರ ನೆನೆವ ॥ ೭ ॥

ಜತೆ

ಅಂಬೆಗಾಲು ಕೃಷ್ಣನ ನಂಬಿ ಬದುಕಿ ಕು।
ಟುಂಬಿಯ ಮಾಡುವೆ ತನ್ನ ಪಕ್ಕದೊಳಿಟ್ಟು ಅಂಬೆಗಾಲು ಕೃಷ್ಣ
॥ ೮ ॥

ಸುಷುಪ್ತಿ ಸುಳಾದಿ ೩

ರಾಗ ಧ್ರುವತಾಳ

ಆಲದೆಲೆಯಲ್ಲಿ ಮಲಗಿದಂದು ನಿನ್ನ।
ಲಾಲಿ ಎಂದು ಲಾಲಿಸಿದರಾರ್‍ಯೈ ಮತ್ತೆ ಕ್ಷೀರಾಬ್ಧಿ।
ಯಲ್ಲೊರಗಿದಂದು ನಿನ್ನ ತೃಪ್ತಿಯಿಂದು ತೂಗಿದರಾರ್‍ಯೈ ಆ।
ಜಲಧಿ ದರ್ಭಶಯನದಲ್ಲಿ ನಿನ್ನ ಜೋಜೋ ಎಂದು ಪಾಡಿದರಾರ್‍ಯೈ।
ಆ ರಮೆ ಸ್ತುತಿ ಮಾಡಿ ಪೊಗಳುವಂತೆ।
ಶ್ರೀರಮಣ ನಿನ್ನ ಪಾಡ ಬಲ್ಲೇನೇ।
ನಾರದ ಮಹತಿಯ ಮೀಟುವಂತೆ ಸ।
ಷೀರಜ ಸ್ವರವೆತ್ತಿ ಪಾಡುವಂತೆ।

ಶ್ರೀರಮಣ ನಿನ್ನ ಪೊಗಳಬಲ್ಲೆನೆ ನಾನು ।
ಕಣ್ಣ ಮುಚ್ಚು ಪಾಲೂಡುವೆನೆಂತೆನೆ ಗೋಪಿ ।
ಕಣ್ಣು ಮುಚ್ಚಿ ಕೃಷ್ಣ ಕಿವಿಯಾಂತು ನಗುತಿದ್ದ ॥ ೧ ॥

ಮಟ್ಟತಾಳ

ತನ್ನುರದ ಮೋಹದರಸಿಯಾ ।
ಚನ್ನ ಚಲುವ ಸರಸಗಳಿಂದ ।
ಇನ್ನು ನಿದ್ರೆ ಬಾರದೆ ನಿನ್ನ ಪೊಕ್ಕಳ ಬೊಮ್ಮನ ನಾಲ್ಕು ವ ।
ದನದ ವೇದ ಘೋಷಣಗಳಿಂದ ಇನ್ನು ನಿದ್ರೆ ಬಾರದೆ ।
ನಿನ್ನುದರದ ಜಗದುರುಪಿನಿಂದ ಇನ್ನು ನಿದ್ರೆಬಾರದೆ ।
ನಿನ್ನ ಭಕುತರು ಕರೆವ ಚೀರಾಟದಿಂದ ಇನ್ನು ನಿದ್ರೆಬಾರದೆ ।
ಇನ್ನಿತೆಂಬ ಗೋಪಿದೇವಿಯ ಮಾತಿಗೆ ಕೃಷ್ಣನಾಚಿ
ಕಣ್ಣು ಮುಚ್ಚಿದ ॥ ೨ ॥

ರೂಪಕ ತಾಳ

ಶುಭಗುಣಂಗಳ ಕಣಿಯೆ ಜೋ ಜೋ ।
ಜೋ ಭಕುತರ ಚಿಂತಾಮಣಿಯೆ ಜೋ ಜೋ ।
ಮುನಿ ಹೃದಯಾಂಬುಜ ಹಂಸ ಜೋ ಜೋ ।
ಸರ್ವ ದೇವೋತ್ತಂಸನೆ ಜೋ ಜೋ ।
ಮುಕುತಿ ಕಾರಣ ಪುಣ್ಯನಾಮಗೆ ಜೋ ಜೋ ।
ಶ್ರೀ ಕೃಷ್ಣ ವೈಕುಂಠ ಧಾಮನೆ ಜೋ ಜೋ ॥ ೩ ॥

ಝಂಪೆತಾಳ

ಪೊರ ಬೊಮ್ಮನೆ ಎನ್ನ ತಮ್ಮ ಬಾ ಎಂಬ ।
ಆಜನ ತಂದೆ ಎನ್ನ ಅಪ್ಪ ಬಾ ಎಂಬೆ ।
ಹಿರಿಯ ನೋಡೆಲೊ ಎನ್ನ ಮರಿಯೆ ಮುದ್ದು ಎಂಬ ।
ಗೋಪಿ ದೇವಿಯ ನೋಂಪು ತಾನೆಂತೊ ಇದಕೆ ।
ಬಂದಪ್ಪಿ ಮುದ್ದಿಸಿ ಪೊಲಿವ ಮುದ್ದು ವೈಯ್ಯ ಕೃಷ್ಣ ।
ನಿನ್ನ ದಯ ತಾನೆಂತೆಂತೊ ॥ ೪ ॥

ತ್ರಿವಿಡಿತಾಳ

ಶ್ರೀ ಲೋಲುಪಲಾಲಿ । ಗೋಪಾಲಕ ಜಾರಲಾಲಿ ।
ಮೂಲ ಕಾರಣ ಮುಕ್ತರೊಡಿಯನೆ ಲಾಲಿ ।
ಗೋಪಾಲ ಬಾಲ ಶ್ರೀ ಕೃಷ್ಣಯ್ಯನೆ ಲಾಲಿ ॥ ೫ ॥

ಅಟ್ಟತಾಳ

ಒಮ್ಮೆ ನೆನೆವವರ ಋಣದ ಚಿಂತೆ ।
ಆವಾಗ ಭಕುತರು ಕರೆದಾರೆಂಬ ಚಿಂತೆ ।
ನಿರುಪಾಧಿಕ ಭಕ್ತರ ಹಂಗಿನ ಚಿಂತೆ ।
ತನ್ನ ನಿಜವೆಲ್ಲಿ ಅರಿವರೊ ಎಂಬ ಚಿಂತೆ ।
ಇನ್ನಿತು ಚಿಂತೆಯುಳ್ಳ ನಿನಗೀ ನಿದ್ರೆ ।
ಇನ್ನು ಬಾರದೆ ಎಂದರೆ ಕೃಷ್ಣನಗುವ ॥ ೬ ॥

ಏಕ ತಾಳ

ಬಾಲ ಲೀಲೆಯು ಬೇಕಾದರೆ।
ಮೂಲೋಕ ಬಾಯೊಳು ತೋರುವನೆ।
ಮಕ್ಕಳಾಟಕೆ ಬಲ್ಲಿದ ನಾದಡೆ ।
ರಕ್ಕಸರಿಗೆಲ್ಲ ಕಕ್ಕಸ ನಪ್ಪನೆ।
ಚಿಕ್ಕತನವು ನಿನಗಳವಡುವದೆ ಎನ್ನ ।
ದಿಕ್ಕುದೆಶೆಯು ಶ್ರೀಕೃಷ್ಣ ರಕ್ಷಿಸೊ ತಂದೆ ॥ ೭ ॥

ಜತೆ

ಚನ್ನ ಕೃಷ್ಣನ ಮುದ್ದಿಗೆ ಗೋಪ ।
ಕನ್ನೆಯರೆಲ್ಲರು ತನ್ಮಯವಾಗಿಪ್ಪರು ॥ ೮ ॥

ಪ್ರಮೇಯ, ವ್ಯಾಪ್ತಿ

ಸುಳಾದಿ ೩

ರಾಗ ಧ್ರುವತಾಳ

ತಂದೆಯಾಗಿ ತಾಯಿಯಾಗಿ ।
ಇಂದಿರೇಶನೆ ಎನಗೆ ಬಂಧುವಾಗಿ ಬಳಗವಾಗಿ ।

ಸೇವ್ಯನಾಗಿ ತಮ್ಮ ತಮ್ಮ ಧರ್ಮಗಳಿಂದ ।
ಸರ್ವ ಈ ಲೋಕಕ್ಕೆ ಶ್ರೀಹರಿ ।
ಶ್ರೀ ಕೃಷ್ಣನೋರ್ವನು ಸರ್ವ ವ್ಯಾಪಕನಾಗಿ ।
ತಾಯಿ ಈ ಲೋಕಕ್ಕೆ ಶ್ರೀಹರಿ ॥ ೧ ॥

ಮಟ್ಟ ತಾಳ

ಪತಿ ಎಂದು ಪಾಸ್ಯಪಯೋಧಿ ಸುತೆಗೆ ।
ಪಿತನೆಂದುಪಾಸ್ಯ ಪದುಮಜಂಗೆ ।
ಶ್ವಶುರನೆಂದು ಪಾಸ್ಯ ಸರಸ್ವತಿಗೆ ।
ಪಿತಾಮಹನೆಂದು ಪಾಸ್ಯ ಪಿನಾಕ ಧರಗೆ ।
ಸ್ವಾಮಿ ಎಂದು ಪಾಸ್ಯ ಸರ್ವರಿಗೆ ।
ಶ್ರೀ ಕೃಷ್ಣ ಆ ಮಹಾತ್ಮರುಪಾಸ್ಯ ಉಗ್ರಸೇನ ಗಡಾ ॥ ೨ ॥

ರೂಪಕತಾಳ

ಸರಸಿಜಾಕ್ಷನು ವಿರಿಂಚಿಗೆ ಗುರು ।
ಪುರಹರನಿಗೆ ಪರಮ ಗುರು ।
ಮಿಕ್ಕಸುರತತಿಗೆಲ್ಲ ಆದಿ ಗುರು ।
ನರೋತ್ತಮರಿಗೆಲ್ಲ ಮೂಲ ಗುರು ।
ಪರದೈವ ಶ್ರೀ ಕೃಷ್ಣಗೆ ಗುರುವಾದಾ ಸಾಂದೀಪಗಡಾ ॥ ೩ ॥

ಝಂಪೆ ತಾಳ

ಶೋಕಾದಿ ದೋಷ ಅತಿದೂರನೆಂಬಾ ಜ್ಞಾ । (ಸುತು)
ನೈಕ ರಸ ದಿವ್ಯ ಮೂರುತಿ ಎಂಬಾ । (ಚಿತು)
ಲೌಕಿಕಾನಂದಾಮಂದ ಸಾಂದ್ರವೆಂಬಾ । (ಆನಂದಾ)
ಸಾಕುವದೀ ಎನ್ನ ಸ್ವಾಮಿ ಎಂದೆಂಬಾ ! (ಆತ್ಮ)
ಈ ನಾಲ್ಕು ವಿಧದ ಉಪಾಸ್ಯವಿಲ್ಲದವಗೆ ।
ಶ್ರೀ ಕೃಷ್ಣ ತನ್ನ ಮೂರುತಿಯ ತೋರ ॥ ೪ ॥

ಏಕತಾಳ

ಎಡರುಗಳೆಲ್ಲವು ಆಡಸಿದಡಂ । ಪತ್ತುಗಳೆಲ್ಲವು ಓಡಿದಡಂ ।
ವ್ಯಾಧಿಗಳೆಲ್ಲವು ಬಾಧಿಸಿದಡಂ । ಶೋಕಗಳೆಲ್ಲವು
ಮುಖಗಟ್ಟಿದೊಡಂ ।

ಶ್ರೀಕೃಷ್ಣಪೂರ್ಣಗುಣ ಸ್ವಾಮಿ ಎಂಬ ಏಕಾಂತ
ಉಪಾಸ್ಯ ಮರಿಯದಿರೆ || ೫ ||

ಜತೆ

ಶ್ರವಣಾದಿಗಳೊಂದು ಕ್ಷಣವ ಬಿಡದೆ ಮಾಡು |
ಭವರೋಗ ವೈದ್ಯ ಶ್ರೀ ಕೃಷ್ಣನ ಚಿತ್ತವ ಪಡೆವರೆ || ೬ ||

ಉದಯಾದ್ರಿ ಶ್ರೀಕೃಷ್ಣ ಸುಳಾದಿ ೫

ರಾಗ ಧ್ರುವ

ಅಂತರಂಗದಿ ಬ್ರಹ್ಮಾನಂದನಾಗಿ ನೀನಿರಲು |
ಅಂತಕನ ಭಯವೇನಯ್ಯಾ ಶ್ರೀಹರಿಯೆ |
ಪಂಥದಿ ದನುಜನು ಬಾಧಿಸಲು ಸುತನ |
ಚಿಂತೆ ಯಾರಿಗೋ ಎಂದಿರದೆ ಸಾಕಿದೆ ಉದಯಾದ್ರಿ ಶ್ರೀಕೃಷ್ಣ
|| ೧ ||

ಮಟ್ಟತಾಳ

ಮುರಹರಿ ನರಹರಿ ಸಿರಿವರ ಗಿರಿಧರಯೆಂದು |
ಕರೆಯಲು ಕರುಣದಿ ಬಂದು |
ಕರಿಯ ಕಾಯಿದೆ ಸಂತೋಷದಿ ಕಾಯಿದೆ |
ನರಕಾಂತಕ ಉದಯಾದ್ರಿ ಶ್ರೀ ಕೃಷ್ಣ || ೨ ||

ತ್ರಿಪುಟತಾಳ

ತನ್ನ ತಾನರಿಯಾದೆ ತಗುಲಿದ ಕಾಳಿಯನು |
ನಿನ್ನ ಪರಾಕ್ರಮ ತೋರಿ ಕಾಯಿದೆ ಶ್ರೀಹರಿಯೆ |
ಮುನ್ನ ನಾ ನಿನ್ನ ಡಿಂಗರಿಗ ನಾದೆನಯ್ಯಾ |
ಪನ್ನಗಾಸನ ತುರಗ ಪಾಲಿಸು ಉದಯಾದ್ರಿ ಶ್ರೀ ಕೃಷ್ಣ || ೩ ||

ಅಟ್ಟತಾಳ

ನಿನ್ನಮೃದು ಪಾದವ ನೋಯದಂತೆ |
ಎನ್ನ ಶಿರಸ್ಸಿನಲ್ಲಿಡೋ |
ರನ್ನ ಕಾಲಿಂದಿಗೆ ಗೆಜ್ಜೆಯ ನಾದದಿಂ |

ದಿನ್ನು ಧಿಂ ಧಿಮಿಕೆಂದು ಕುಣಿಸುವೆ ಉದಯಾದ್ರಿ ಶ್ರೀ ಕೃಷ್ಣ ।
॥ ೪ ॥

ಏಕತಾಳ

ಎನ್ನ ದೃಢವ ನೀ ಕಂಡೆ ಯಾದವ ಕೃಷ್ಣ ।
ನಿನ್ನ ದೃಢವ ನಾ ಕಾಣೆ ।
ಎನ್ನ ದೃಢ ನಿನ್ನ ದೃಢ ವೆರಡನು ಕಂಡರೆ ।
ದಿನ್ನು ಧಿಂ ಧಿಮಿಕೆಂದು ಕುಣಿಸುವೆ ಉದಯಾದ್ರಿ ಶ್ರೀಕೃಷ್ಣ
॥ ೫ ॥

ತ್ರಿಪುಟತಾಳ

ಎನ್ನ ಗುಣದೋಷಗಳ ನೆಣಿಸುವರೇನೋ ಶ್ರೀಹರಿ ।
ನಿನ್ನ ಬಿರುದಾ ಪನ್ನ ರಕ್ಷಕನೆಂದು ವಿಭೀ ।
ಪಣನು ಕೀರ್ತಿಸಲಿ ಆ ಆ ಆ ।
ಅನ್ಯಥಾ ಶರಣಂ ನಾಸ್ತಿ ಅನಾಥನಾಥನೆ ಆರ್ತಬಂಧುವೆ ।
ನಿನ್ನ ಚರಣವನ್ನು ನಂಬಿದೆನೊ ಸಾಕ್ಷಿ ಉದಯಾದ್ರಿ ಶ್ರೀಕೃಷ್ಣ
॥ ೬ ॥

ರೂಪಕತಾಳ

ಶರಣಾಗತ ಜನ ಪರಿಪಾಲನೆಂಬ ।
ಬಿರುದೆ ನಿಷ್ಕಾರಣ ಫಲದಾಯಕವೆನುತ ।
ವರಣಿಸುತಿಹ ಕುಚೇಲನುದಿನ ।
ಕರ.ಣಾಕರ ಎನ್ನಕಾಯೋ ಉದಯಾದ್ರಿ ಶ್ರೀಕೃಷ್ಣ ॥ ೭ ॥

ಜತೆ

ಎಂಥಾ ಸುಲಭನೊ ನೀನು ಉದಯಾದ್ರಿ ಶ್ರೀಕೃಷ್ಣ ।
ಚಿಂತೆ ಮಾಡುವರಿಗೆಲ್ಲ ಉದಯಾದ್ರಿ ಶ್ರೀಕೃಷ್ಣ ॥ ೮ ॥

ಪ್ರಾರ್ಥನಾ ಸುಳಾದಿ ೬

ರಾಗ ಧ್ರುವತಾಳ

ಶ್ರೀ ದೇವಿಯ ಶ್ರೀಮಂತಸಿಂಧೂರಗಳಂ ಅತಿ ಅತಿರಂಜಿತವಾದ ।
ಶ್ರೀ ದೇವಿಯು ಕಸ್ತೂರಿ ತಿಲಕದಿಂ ಅತಿ ಅತಿ ವಾಸಿತವಾದ ।

ಶ್ರೀ ಕುಚಕುಂಭ ಕುಂಕುಮದಿಂ ಅತಿ ಅತಿ ಶೋಭಿತವಾದ ।
ಶ್ರೀ ದೇವಿಯ ಕರಕಂಜ ಸುರೇಖೆಗಳಿಂದ ಅತಿ ಅತಿ
ಅಂಕಿತವಾದ ।
ಶ್ರೀ ವನಜಭವಾದಿ ಹೃತ್ಸರೋವರದಿಂ ಸರಸಿಜದಂತೆ ನಿಲಿಸಿಪ್ಪ ।
ಸನಕಾದಿ ಹೃದಯಾಂಬುಜದಿಂ ಹಂಸೆಯಂತೆ ನಲಿಯುತಿಪ್ಪ ।
ಮನುಜೋತ್ತಮರ ಹೃದಯಾಂಬರದಿಂ ಮಿಂಚಿನಂತೆ
ಹೊಳೆಹೊಳೆವ ।
ಸಿರಿಕೃಷ್ಣನ ಚರಣ ಕಮಲ ಶರಣು ಎನಗೆಂದೆಂದು ॥ ೧ ॥

ಮಟ್ಟತಾಳ

ನಿಧಿಯ ಮೇಲೆ ಇದ್ದು ನಿಧಿಯ ನರಿಯದಂತೆ ।
ತನ್ನ ಕಂಠ ಮಣಿಯ ತಾ ಮರೆದಂತೆ ।
ಕಣ್ದೆರೆಯದ ಹಸುಳೆ ತಾಯನರಿಯದಂತೆ ।
ಎನ್ನಲ್ಲಿ ಹೊಂದಿಪ್ಪ ನಿನ್ನರಿಯದಂತೆ ।
ನಿನ್ನ ತೋರಿದರೆನಗೆ ನಿನ್ನ ದಾಸರು ಸಿರಿಕೃಷ್ಣ ॥ ೨ ॥

ರೂಪಕತಾಳ

ಜನನ ಮರಣ ಮಾರ್ಗದಲ್ಲಿ ತೊಳಲಿ ಬಳಲಿ ಸ್ವರ್ಗ ।
ನರಕಕ್ಕೇರಿ ಮಮತೆಯೆಂಬ ಭಾರವ ಪೊತ್ತು ।
ಬಳಲಿ ತಾಪತ್ರಯದ ತಾಪದಿಂ ಬೆಂದೆನಾಗಿ ।
ನಖ ಚಂದ್ರಿಕೆ ಗಂಗಾಶೀತಕರದಿಂ ತಂಪಾದ ।
ಸಿರಿಕೃಷ್ಣನ ಚರಣ ನೆಳಲು ನೆಲೆಮನೆಯಾಯಿತು ॥ ೩ ॥

ತ್ರಿವಿಡಿತಾಳ

ಕಾಮಿತ ಫಲವೀವ ಬಹುಶಾಖೆಗಳಿಂ ।
ಕೋಮಲ ಕರ ಚರಣ ಯುಗಳಪಲ್ಲವದಿಂ ।
ಹೊಸ ಕುಸುಮ ದಿಂದಾದ ಮಕರಂದದಿಂ ।
ಶ್ರೀ ಸತಿ ಕಲ್ಪಲತಾ ವಿಲಾಸಗಳಿಂ ।
ಶುಕ ಮುಖ್ಯ ದ್ವಿಜಗಣದಿಂದ ಸೊಗಸಿಪ್ಪ ।
ಸಿರಿಕೃಷ್ಣ ಕಲ್ಪತರುವ ಸಾರಿದೆವಯ್ಯಾ ॥ ೪ ॥

ಅಟ್ಟತಾಳ

ಕರುಣಾಜಲದಿಂ ಚರಣಾಬ್ಜಗಾಳಿಯಿಂ ।
ವರನಾಭಿ ಸುಳಿಯಿಂ ಪರಮಹಂ(ಹಾ)ಸಕೂಲದಿಂ ।
ಮೆರೆವ ಅಗಾಧ ಶ್ರೀ ಕೃಷ್ಣನ ಸರೋ ।
ವರದಿ ಮುಳಗಿ ಕಳದೆನೊ ಭವತಾಪವ ॥ ೫ ॥

ಆದಿತಾಳ

ಜಿಜ್ಞಾಸುವಿಗೆ ಜ್ಞಾನ ಕಾರಣಾ ।
ಜ್ಞಾನಿಗೆ ಅಪರೋಕ್ಷ ಜ್ಞಾನಸಾಧನ ।
ಅಪರೋಕ್ಷಿಗೆ ಅಧಿಕಾನಂದ ಜನಕ ।
ಮುಕ್ತಿಗೆ ತಾನೇ ಫಲರೂಪ ।
ಸಿರಿಕೃಷ್ಣನ ಪಾದಸೇವೆ ಇದರ ತೂಕಕ್ಕೆ ಸಾಕೆ ಕೈವಲ್ಯ ॥ ೬ ॥

ಏಕತಾಳ

ಪಾಪಾಟವಿಗೆ ದಾವಾನಲ ಕಾಮಾನಿಲ ಕಾಲಾಂಬುದ ।
ಮೋಹಾಂಬುದ ಝುಂಝಾನಿಲ ।
ಕೋಪಾನಿಲ ಭುಜಂಗಮು ।
ಸಿರಿಕೃಷ್ಣನ ಪದಸೇವೆ ಭವಭುಜಂಗಗರುಡಾ ॥ ೭ ॥

ಜತೆ

ಸಿರಿಕೃಷ್ಣ ನಿನ್ನ ಪಾದ ನಖ ಚಂದ್ರಿಕೆಯಲ್ಲಿ ।
ಸಾಕೆನ್ನ ಚಿತ್ತ ಚಕೋರವಾದ ಧರ್ಮ ॥ ೮ ॥

ಈ ಸುಳಾದಿ ೧-೧ ತಾಳದಲ್ಲಿಯೂ ಅಲಂಕಾರಮಯವಾಗಿದೆ. ಅರಿದವರು ಬರೆವುದು ಹರಿದಾಸರಲ್ಲಿ ಇಂಥಅಲಂಕಾರದ ಸೊಬಗೆಷ್ಟೋ ?

ಸುಳಾದಿ ೭

ರಾಗ ಧ್ರುವತಾಳ

ತಾಯಿ ಎಂಬೆನೆ ನಿನ್ನ ಧ್ರುವನ ತಾಯಿ ನಿನ್ನಂತೆ ಕಾಯ್ದಳೆ ।
ತಂದೆ ಎಂಬೆನೆ ನಿನ್ನ ಪ್ರಲ್ಹಾದನ ತಂದೆ ನಿನ್ನಂತೆ ಕಾಯ್ದನೆ ।
ಭ್ರಾತೃ ಎಂಬೆನೆ ನಿನ್ನ ವಿಭೀಷಣನ ಭ್ರಾತೃ ನಿನ್ನಂತೆ ಕಾಯ್ದನೆ ।

ಭರ್ತೃ ಎಂಬೆನೆ ನಿನ್ನ ಪಾಂಚಾಲಿಯ ಭರ್ತರು ನಿನ್ನಂತೆ
ಕಾಯ್ದರೆ ।
ಪುತ್ರ ನೆಂಬೆನೆ ನಿನ್ನ ಉಗ್ರಸೇನನ ಪುತ್ರ ನಿನ್ನಂತೆ ಕಾಯ್ದನೆ ।
ಮಿತ್ರ ನೆಂಬೆನೆ ನಿನ್ನ ಗಜೇಂದ್ರನ ಮಿತ್ರರು ನಿನ್ನಂತೆ ಕಾದರೆ ।
ಆವ ಅನಿಮಿತ್ತ ಬಂಧುವೊ ಮೋಹಾವ ನೀನಾವ ಕರುಣಾ
ಸಿಂಧುವೋ ।
ಸಿರಿಪತಿ ಸಿರಿಕೃಷ್ಣ ನಿನ್ನ ಭಕುತರಲಿ ನೆಂಟತನ ಹೊಸಪರಿ-
ಯಾಯಿತಯ್ಯಾ ॥ ೧ ॥

ಮಟ್ಟತಾಳ

ದಾನಿಗಳರಸಂಗೆ ದೈನ್ಯಬಲಿ ।
ಲಕ್ಷುಮಿ ಪತಿಗೈದೆ ಯಜ್ಞ ಭಿಕ್ಷತೆ ತಿರುಪೆ ।
ಕೈವಲ್ಯ ಪತಿಗೆ ದಾ (ಆ) ವಿನ ಬಂಧನ ।
ಲೋಕ ಗುರುವಿಂಗೆ ಪೊಕ್ಕಾಟವೆ ಗೋಪೆರಲ್ಲಿ ।
ಈಸು ವಿನೋದವು ನಿನ್ನ ಭಕುತರಿಗಾಗಿಯೇ ।
ಶ್ರೀಪತಿ ಸಿರಿಕೃಷ್ಣ ನಿನ್ನ ದಾಸರಿಗಾಗಿಯೇ ॥ ೨ ॥

ರೂಪಕತಾಳ

ಹಿಂದೆ ಪೊಂಗೊಳಲೂದೊಂದೊಂದು ।
ಧಂದಾ ಗೋಪಾಲ ಮೂರುತಿಯ ಎಂದು ।
ಒಂದು ಬಾರಿ ನೆನೆದ ಕುಬುಜಿಗೆ ಮುಕುತಿಯ ನಿ ।
ತ್ತಂದಡೆ ನಾ ನಿನ್ನ ನೆನವುದ ಬಿಡೆ ಶ್ರೀಕೃಷ್ಣ ಎಂದೆಂದಿಗೂ
ಬಿಡೆ ॥೩॥

ಝುಂಪೆತಾಳ

ಆಳು ನಾ ನಿನ್ನಾಳು ನಿನ್ನಾಳು ನಾನು ।
ನೀನು ತಂದೆ ನಿನ್ನ ಕಂದ ನಾನು ।
ಶರಣ್ಯ ನಾ (ನೀ) ನಿನ್ನ ಶರಣಾಗತ ನಾನು ।
ಓವ ನೋವಿತ್ತಿಂತು ಕಾವರ್ಯಾರಿನ್ನು ।
ಶ್ರೀಪತಿ ಸಿರಿಕೃಷ್ಣ ನೀ ಎನ್ನ ಸಲಹಬಹುದೊ ॥ ೪ ॥

ತ್ರಿವಿಡಿತಾಳ

ಕಂಸಾರಿ ಎಂದು ಸಂಸಾರ ದಾಟುವೆನೊ ।
ಸಿರಿಪತಿ ಎಂದು ಪಾಪಂಗಳಟ್ಟುವೆನೊ ।
ಕಂಜನಾಭ ಎಂದಂಜಿಸುವೆ ಜವನವರ ।
ಸಿರಿಪತಿ ಸಿರಿಕೃಷ್ಣ ನಿನ್ನ ದಾಸರ ದಾಸನಾನು ॥ ೫ ॥

ಅಟ್ಟತಾಳ

ಹಿಂದೆ ಅಸುರರ ಬಲಿದೆ ಬಳಲಿಸಿದೆ ।
ವೃಂದಾರಕರಿಂಗೆಲ್ಲ ನೀಸುಧಿಯುನೆರದೆ ।
ಆವಾವ ಪರಿಯಲ್ಲಿ ಅಸುರರ ಬಳಲಿಸಿದೆ ।
ದೇವರೆಲ್ಲರ ನೋವೆ ಕಾಯ್ದೆ ।
ಆಗನೋಕ್ತದ ದೇವಂಗಳಿಗೆಲ್ಲ ।
ನೀನೊಬ್ಬನೆ ತೆತ್ತಿಗನಲ್ಲವೆ ಶ್ರೀಕೃಷ್ಣ ಆವಾಗ ॥ ೬ ॥

ಏಕತಾಳ

ಆವಾ ಕಾಲದಲಿ ಆವ ದೇಶದಲಿ ಶ್ರೀಕೃಷ್ಣ ಕಾವಂತೆ ।
ಬಂಧು ಜನ ಕಾಯ ಬಲ್ಲುದೆ ಸಿರಿಪತಿ ಸಿರಿಕೃಷ್ಣ ಆವಾವ
ಕಾಲದಲಿ ॥ ೭ ॥

ಜತೆ

ಅನಿಮಿತ್ತ ಬಂಧು ಈ ನಮ್ಮ ಶ್ರೀ ಕೃಷ್ಣ ।
ಎಂದೆಂದಿಗೂ ಶತ್ರು ಅಸುರರಿಗೆ ॥ ೮ ॥

ಸುಳಾದಿ ೮

ರಾಗ ಧ್ರುವತಾಳ

ನಾನಾ ಯಜ್ಞದ ಹವಿರ್ಗಳಿಂದ ಕದ್ದಾ ಬೆಣ್ಣೆಯು ಮಿಗಿಲೆ
(ಲೇಸೆ) ।
ಜ್ಞಾನಿಗಳಿತ್ತಾ ಉಪಹಾರಗಳಿಂದಂ ವಪ್ಪಿಡಿ ಅವಲೊಳಿತೆ ।
ಶ್ರೀನಾರಿ ಮಾಡುವ ಸೇವೆಗಳಿಂದಂ ।
ಯಜ್ಞ ಪತ್ನೀರ ತಿರಿಕೆ ಭಿಕ್ಷೆಯು ಬೇಕೆ ।

ಏನನ್ನೆ ಬಾರದ ನಿನ್ನಾನಂದಕೆ ಏದು ।
ರ ನೌತುನ ವಿಗಿಲೆ (ಲೇಸೆ) ಬೇಕೆ ಆಯ್ಯಾ ।
ಮಾನಸ ವಚನ ಕಗೋಚರವಾದ ಆನಂಪ ನೀನಲ್ಲವೆ ।
ಏನಯ್ಯಾ ನಿನ್ನ ಭಕುತ ವಾತ್ಸಲ್ಯಕಸವೊ ಎಲೆ ಎಲೆ ಕೃಷ್ಣಯ್ಯಾ।
ನೀನೇವೆ ಬೇಡಿ ಕಾಡಿ ಯಶೋದೇಯು ಕಯ್ಯಾ ಉ ।
ಘಾನೆರಸಿಕೊಂಡು ನಲಿದೇ ಆಯ್ಯಾ ॥ ೧ ॥

ಮಟ್ಟತಾಳ

ಶ್ರೀವರ ಪರಾಕು ಚಿತ್ರವ ಧಾರಿ ಎಂದು ನಿನ್ನ ।
ಆವಗ ಅಜ ಭವಾದಿ ದೇವರೊಲ್ಗ್ಯಸುತಿರೆ ।
ದೇವ ಸಾರ್ವಭೌಮ ನೀನುಗ್ರಶೇನಂಗೆ ।
ದೇವ ಜೀಯ್ಯಸಾಸ ಮುಖವೆಂದೆಂಬದು ।
ಆವ ಲೀಲೆಯು ನಿನಗೆ ಭಕುತ ವತ್ಸಲ ಸಿರಿಕೃಷ್ಣ ॥ ೨ ॥

ತ್ರಿವಿಡಿ ತಾಳ

ಮುನಿ ಮನಂಗಳಲ್ಲಿ ನೆನೆದು ಕಾಣಾದು ।
ಆನಂತ ವೇದಗಳುಆರಸಿ ಕಾಣವು ।
ಚಿನ್ಮಯನೆ ನೀನು ಕುಬಜೆಯ ।
ಮನ್ನೆಯಾ (ಯ) ರಸಿ ಕೊಂಡ್ಯಾಕೆ ಪೋಗೆ ।
ವನ್ನತೆ ಸಿರಿ ಎಂಬೊ ಘನ್ನತೆ ಮೆರೆಯಲು ।
ನಿನ್ನವರಲ್ಲಿ ಅಳುಕಂದಿ ತನವೇನೋ ।
ಘನವಲ್ಲವೊ ನಿನಗೇವೆ ಎಲೆ ಕೃಷ್ಣಯ್ಯಾ ॥ ೩ ॥

ಅಟ್ಟ ತಾಳ

ನನ್ನ ಮೂರುತಿ ಒಮ್ಮೆ ನೆನದಡಂ ನೋಡಿದಡಂ ।
ನಿನ್ನ ನಾಮವನೊಮ್ಮೆ ಪಾಡಿದಡಂ ।
ಘನ್ನ ಭವಬಂಧ ಪರಿವದೊ ಇಂ ।
ತೆನ್ನ ಕಟ್ಟಿದಳೆಂತು ಯಶೋದೆ ।
ನಿನ್ನ ನೆಲೆ ಗೋಪಿ ಘನ್ನಚನ್ನ ಕೃಷ್ಣ ವಿನೋದಿಗಳರಸನೆ ॥ ೪ ॥

ಆದಿ ತಾಳ.

ದಹರಾಕಾಶದಿ ತತ್ತ್ವ ದ್ವಾರದಿ ।
ದ್ರುಹಿಣಾದ್ಯರು ನಿನ್ನ ವಾಲ್ಗೈಸುತಿರಲು ।
ಪ್ರಹರಿಯೆ ಕಾಯಿದೆಂತೊ ।
ಮಹಂ ಮಹಿಮನೆ ಯೆತ್ತಿರವುತ ಪರಿಕ್ಷಿತುವಿಗೆ ಈ ।
ಮಹ ಮಹಿಮ ಭಕುತರ ಆರಭಾರ ।
ಮೊಹಿಸುವ ಅಕ್ಕರಕ್ಕೆ ನವೊ ನವೊ ಸಿರಿ ಕೃಷ್ಣ ॥ ೫ ॥

ಜತೆ

ಚಕ್ರವರ್ತಿಯು ತನ್ನ ಶಿಶವುಗಳಿಗೆಯುಂತೊ ।
ಭಕುತರ್ಗೆ ಅತಿ ಸುಲಭ ನಮ್ಮ ಸಿರಿ ಕೃಷ್ಣ ॥ ೬ ॥

ಸುಳಾದಿ ೯

ಅಹೋಬಲ ನರಸಿಂಹ ದೇವರ ಪ್ರಾರ್ಥನಾ

ರಾಗ ಭೂಪಾಳಿ ಧ್ರುವತಾಳ

ಶ್ರೀ ಪತಿ ಸಲಹೆಂದು ನೆನೆವಂಥ ಮನುಜರ ।
ತಾಪತ್ರಯವ ನೂಕಿ ಮುಕ್ತಿಯ ನೀವಕೃಷ್ಣ ।
ಅಕಳಂಕ ಚರಿತ ಆಶ್ರಿತ ಜನ ಪ್ರಿಯನ ।
ಭಕ್ತ ವತ್ಸಲ ಸುರಧೇನು ಶ್ರೀಯರಸನು ।
ಭಕ್ತ ಜನರ ದುಷ್ಕೃತಗಳ ಪರಿಹರ ಭುಜಗಶಯನ ಪ್ರಲ್ಹಾದ ವಂದಿತನು ।
ಶ್ರೀ ಪತಿ ಸಲಹೆಮ್ಮ ಸುರರು ಘಮ್ಮನದಿ ಪೂಮಳೆಗರೆಯಲು ।
ಪರಮ ಪುರುಷವಿತ್ತು ಸಲಹುವ ಹರಿಯೆಂದು ನಿನ್ನ ।
ನೆರೆ ನಂಬದೆನೊ ಲೀಲಾವತಾರ ಪ್ರಸನ್ನ ಮೂರುತಿ ಅಹೋಬಲ।
ನರಹರಿ ಕೃಷ್ಣ ಶ್ರೀಪತಿ ಸಲಹೆಂದು ॥ ೧ ॥

ಮಟ್ಟತಾಳ

ನಾರದಾದಿ ಅಂಬರೀಷ ಗೋವಾರ ಗಂಧ ।
ರ್ವ ವಂದಿತ ಶ್ರೀ ರಮಣ ಸರ್ವ ಪೂಜಿತಾ ಗಂ ।

ಭೀರ ಪುರುಷ ಲಕ್ಷ್ಮೀವಲ್ಲಭ ಶ್ರೀ ರಮಣ ಪೂಜಿತ ।
ಕಾರುಣ್ಯ ಮೂರುತಿ ಕಾಯೋ ಕರುಣದಲಿ ದಾಸರ ।
ನರಹರಿ ಕೃಷ್ಣರಾಯಾ ಶ್ರೀ ರಮಣ ॥ ೨ ॥

ರೂಪಕತಾಳ

ದಾಸನಾಗಿಹೆನಯ್ಯಾ ದೋಷರಹಿತ ಕೃಷ್ಣ ।
ಶೇಷ ಶಯನ ಈಶಾ ಈಶವಂದಿತ ಸ್ವಾಮಿ ।
ಪೂಶರನಯ್ಯಾನೇ ಪುಣ್ಯಚಾರಿತ್ರ ಕೇಶವ ದೈತ್ಯ ।
ಕಂಸಾಸುರ ಭಂಜನ ವೇಷಧಾರಿಯೆ ಹರಿ ವೈಷ್ಣವ ಪ್ರಿಯನೆ ।
ಪೂ ಶರನಯ್ಯನೆ ಪುಣ್ಯ ಚರಿತನೆ ।
ದೇಶಾಧಿಪತಿ ವೀರ ನರಹರಿ ಕೃಷ್ಣ ನಿನ್ನ ।
ದಾಸನಾಗಿಹೆನಯ್ಯಾ ॥ ೩ ॥

ಅಟ್ಟತಾಳ

ಅಜಮಿಳ ಧ್ರುವ ಪ್ರಲ್ಹಾದ ನಾರದರಿಗೆ ।
ಸುಜನರೊಡಿಯು ಸ್ಥಿರ ಪದವಿಯು ನಿತ್ತು ಸಲಹಿದೆ ।
ಕುಜನ ಕೌರವ ಪೌಂಡ್ರಕ ಜರಾಸಂಧಗೆ ।
ವೃಜಿನ ಗತಿಯು ನಿತ್ತು ಕೋಟಲೆಗೊಳಿಸದೇ ।
ಭಜಕಜನ ರಕ್ಷಕ ಭಾನುಕೋಟಿತೇಜಾ ।
ವಿಜಯ ಸಿರಿದೇವಿಯುರಸ ನರಹರಿ ಕೃಷ್ಣ ।
ಸುಜನರೊಡೆಯು ಸ್ಥಿರ ಪದವಿಯುನಿತ್ತು ಸಲಹುವೆ ॥ ೪ ॥

ಏಕತಾಳ

ಉಟ್ಟ ಪೀತಾಂಬರ ದುಡಿಗೆಯು ಹರಿ ।
ಇಟ್ಟ ಕಿರೀಟದ ಪ್ರಭೆ ಎಸೆಯುಲು ।
ಕೋಟಿ ಶಂಖ ಚಕ್ರಧರನೆ ಮುಕ್ತ ಭಜಿಪರ್ಗೆ ಮುದವಿತ್ತು
ಸಲಹುವೆ ।
ಸೃಷ್ಟಿಗೆ ಆಹೋಬಲ ನರಹರಿ ಕೃಷ್ಣ ।
ಇಷ್ಟಾರ್ಥವ ಕೊಟ್ಟು ರಕ್ಷಿಸುಸ್ವಾಮಿ ॥ ೫ ॥

ಜತೆ

ಬಿಡದೆ ಕಂಡೆನು ನಿನ್ನಯ ದಿವ್ಯ ಪಾದವ ಎನ್ನ
ಮಂಡೆ(ಮುಡಿ) ಯೊಳಗಿತ್ತು ಸಲಹೋ ನರಹರಿ ಕೃಷ್ಣ ಕಂಡೆನು
ನಿನ್ನಯ ದಿವ್ಯಪಾದವ ॥ ೬ ॥

ಸುಳಾದಿ ೧೦

ರಾಗ ನಾಟಿ ಧ್ರುವತಾಳ

ಎನ್ನ ಮಹದೋಷಂಗಳು ಅನಂತವಾದರು ಅಂಜೆನಾ ।
ನಿನ್ನ ಕಲ್ಯಾಣ ಗುಣಗಳು ಅನಂತನಂತವಾಗಿರೆ ।
ಎನ್ನ ಅನ್ಯಥ ತಪ್ಪುಗಳು ಇನ್ನನಂತವಾದರೆ ಅಂಜೆನಾ ।
ನಿನ್ನಪಾರ ಕರುಣಾ ಅನಂತನಂತವಾಗಿರೆ ಬಾ ।
ವನ್ನ ಸಾರಿದ ಬೇಂವು ತಾ ಬಾವನ್ನ ವಲ್ಲದೆ ಬೇವಹದೆ ।
ತನ್ನ ಶಿಶು ಮಾಡಿದ ತಪ್ಪಿಗೆ ಆ ಜನನಿ ಕೈ ಬಿಡುವಳೆ ।
ನಿನ್ನವರನೆಂಬೊದಂದೆ ಸಾಲದೆ ಎನ್ನಜನುಮ ಜನುಮಕೆ
ಸಿರಿಕೃಷ್ಣ ॥ ೧ ॥

ಮಟ್ಟ ತಾಳ

ಹಿಂದಣ ಇಂದಣ ಮುಂದಣ ಚಂದಾ ।
ಚಂದದ ಕರ್ಮನಂತ ಒಂದಾ ।
ನೊಂದು ಕರ್ಮಾನುಂಬ ಕಾಲದೊಳಗೆ ಮ ।
ತ್ತೊಂದು ಕರ್ಮಾ ಬಂದೊದಗುತಲಿದೆ ।
ಎಂದು ತೀರುವದಯ್ಯಾ ಎಂದು ತೀರುವದಯ್ಯಾ ।
ತಂದೆ ಕೃಷ್ಣ ನಿನ್ನ ಸಂದರುಶನವಿಲ್ಲದೀ ।
ದಂದುಗಾ ನೀಗುವಾ ಬಗೆ ಬೇರಿಲ್ಲಾ ॥ ೨ ॥

ತ್ರಿವಿಡಿ ತಾಳ

ಶ್ರುತಿ ಸ್ಮೃತಿ ಸಂತತಿಗಳು ತುತಿಸಿ ಬಣ್ಣಿಸಿ ನೆಲೆಯುಗಾಣವು ।
ದಿತಿ ಸುತಾವೇಶ ದಿಂದಲಿ ।
ಅತಿ ಬೈದ ಶಿಶುಪಾಲಗೆ ಸ ।
ದ್ಗತಿಯ ನೀನಿತ್ತ ದಯದಿ ಸಿರಿಕೃಷ್ಣ । ॥ ೩ ॥

ಅಟ್ಟತಾಳ

ಆದ್ಯಪರಾಧ ಮಿಥ್ಯಾಜ್ಞಾನ ।
ದ್ವಿತಿಯು ಹರಿಯು ವಿಸ್ಮರಣೆ ।
ತ್ರಿತಿಯು ನಿಷೇಧ ಕರ್ಮ ಕರಣ। ವಿಹಿತಾಕರಣ।
ಚತುರ್ಥ ಅಯೋಗ್ಯರಲ್ಲುಪದೇಶ ।
ಈಯುಪರಾಧಕ್ಕೆಲವೊ ನಾನೆ? ಸಿರಿಕೃಷ್ಣ ॥ ೪ ॥

ಏಕತಾಳ

ಭಕುತಿ ಎಂಬ ಪ್ರಸುಕುತಿಎನಗಿಲ್ಲ ।
ಜ್ಞಾನ ವೆಂಬುದು ಕಾಣೆನೋ ।
ಆಚಾರದಾ ವಿಚಾರವಿನಿತಿಲ್ಲ ।
ಜ್ಞಾನವೆಂಬುದು ಕಾಣೆನೋ ।
ವೈರಾಗ್ಯದ ವಾರುತಿ ದೊರಕೊಳ್ಳದು ।
ಜ್ಞಾನವೆಂಬುದು ಕಾಣೆನೋ ।
ಆ ನೊಬ್ಬನೆ ನಿನ್ನವರೊಳು ಸಿರಿಕೃಷ್ಣ ।
ಮಾನುಷ ಪಶುವಿನ ದಯದಿಂದ ನೋಡೊ ॥ ೫ ॥

ಜತೆ

ನೆಚ್ಚಿದೆನಯ್ಯಾ ಕೃಷ್ಣ ಅಚ್ಚಾ ಕರುಣಿ ಎಂದು ।
ಎಚ್ಚಂಗೆದೆಯಾ ಲೊದ್ದಂಗೆ ಮುಕುತಿ ಇತ್ತೆ ॥ ೬ ॥

ವೈರಾಗ್ಯ ಸುಳಾದಿ ೧೧

ರಾಗ ಪಂತುರಾವಳಿ ಧ್ರುವತಾಳ

ದೇಹ ಜೀರಣ ವಾಯಿತೊ ಧನ ।
ನೇಹ ಜೀರಣವಾಗದೊ ಕಣ್ಣು ಕಿವಿ ಮಂದಾದವೊ ಹೆಣ್ಣು ।
ಮಣ್ಣಿನಾಶೆ ಮಂದಾಗದು ।
ಕಾಲು ಕೈ ಜವ ಗುಂದಿದವು ಭೋಗ।
ಲೋಲತೆಯು ಜವಗುಂದದೋ ।
ಪಾಪ ಕೋಟಿಗಳು ಮಾಡಿದೆ ಅನು ।

ತಾಪ ಮನದೊಳಿನಿತಿಲ್ಲ ಜರೆನರೆಯಿಂದ ।
ನೆರೆಹೊರೆ ಹೇಸಿತು ಶರೀರದೊಳು ಹೇಯವಿನಿತ್ತಿಲ್ಲ ।
ಸಂದುಹೋಯಿತು ಕಾಲವೆಲ್ಲವು ।
ಮುಂದಣಗತಿಗೆ ದಾರಿ ದೂರದು ।
ಅನಾದಿಯಿಂದ ನಾ ನಿನ್ನವ ನೆನಿಸಿದೆ ।
ಎನ್ನ ಕೇಡು ನಿನ್ನದಲ್ಲವೆ ।
ಇನ್ನಾದರು ದಯದಿಂದ ನೋಡಿ
ನಿನ್ನ ಭಕ್ತಿಯ ನಿತ್ತು ಮನ್ನಿಸಬೇಕಯ್ಯ ಎನ್ನನ್ನು ಶ್ರೀ ಕೃಷ್ಣ
॥ ೧ ॥

ಮಟ್ಟತಾಳ

ಹರಿನಾಮ ಹರಿಪಾದ ತೀರಥವಿರಲು ।
ದುರಿತದ ಭಯವ್ಯಾಕೆ ನರಕದ ಭೀತ್ಯಾಕೆ ।
ಹರಿದಿನ ಹರಿದಾಸರ ಪದರಜವಿರಲು ।
ದುರಿತದ ಭಯವ್ಯಾಕೆ ನರಕದ ಭೀತೀಕೆ ।
ಹರಿಯ ಪಕ್ಕದೊಳಿದ್ದಂಗೆ ಕರಿಯ ಭಯಉಂಟೆ ।
ಸಿರಿಪತಿ ಶ್ರೀ ಕೃಷ್ಣನ ದಾಸರ ಸಂಗವಿರಲು ।
ದುರಿತ ತಿಮಿರಕ್ಕೆ ತರಣಿತಾನಲ್ಲವೆ ॥ ೨ ॥

ತ್ರಿವಿಡಿತಾಳ

ಯಮ ಪಟ್ಟಣದ ಬಟ್ಟೆ ಕಷ್ಟವಾದಡೆ ಏನು ।
ಯಮಯಾತನೆ ಅತಿ ಘೋರವಾದಡೆ ಏನು ।
ಯಮಕಿಂಕರು ಭಯಂಕರರಾದಡೆ ಏನು ।
ಕಮಲನಾಭನ ದಾಸರಿಗೆ ಅಂಜಿಕೆಉಂಟೆ ।
ನಮೋ ನಮೋ ಸಿರಿಕೃಷ್ಣ ಎಂದ ರೋಡುವರಯ್ಯಾ ।
ಯಮ ಭಟರು ತಮ್ಮಾಳ್ದನಾಜ್ಞೆಯ ನೆನೆನೆನೆದು ॥ ೩ ॥

ಅಟ್ಟತಾಳ

ಆವನ್ನ ಚಿತ್ತವು ಅಚುತನ್ನ ಮೆಚ್ಚದು ।
ಆವನ್ನ ನಾಲಿಗೆ ಶ್ರೀಲೋಲ ನೆನ್ನದು ।

ಆವನ ಶಿರ ಬಲಿ ಬಂಧನಗೆರಗದು ।
ಆವ ಜನುಮದಲ್ಲಿ ಮಱದು ನೆನೆಯದಿರೆ ।
ಆವನೆ ನರಾಧಮ ನರಕ ಪಾಥೀಕನು ।
ಸಿರಿಕೃಷ್ಣನವರು ವೈಕುಂಠಪಥಿಕರು ॥ ೪ ॥

ಆದಿತಾಳ

ಸಾಂಕೇತವಾಗಲಿ ಪಾರಿಹಾಸ್ಯವಾಗಲಿ ।
ಆಣಕದಿಂದಾಗಲಿ ಡಂಭ ದಿಂದಾಗಲಿ ।
ಒಮ್ಮೆ ಬಿದ್ದಾಗಲಿ ಮತ್ತೆ ಎದ್ದಾಗಲಿ ನಮೊ ।
ತಾಕಿದಾಗ ಮತ್ತಾವಾಗಲಾಗಲಿ ।
ನಮೋ ನಮೋ ಸಿರಿಕೃಷ್ಣ ಎಂಬಘೋಷ ।
ಮುಕುತಿ ಕನ್ನಿಕಿಯ ಮದುವಿ ವಾದ್ಯಘೋಷ ॥ ೫ ॥

ಜತೆ

ಸಂತತದಲಿ ನಿನ್ನ ನಾಮ ನಾಲಿಗೆಯಲಿ ।
ಅಂತಿ ಕಾಲದಲಿ ವಿಶೇಷವಾಗಲಿ ಶ್ರೀಕೃಷ್ಣ ॥ ೬ ॥

ಅಧ್ಯಾತ್ಮ ಸುಳಾದಿ ೧೨

ರಾಗ ನಾಟ ಧ್ರುವತಾಳ

ಕಾಮವೆಂಬ ಹೆಚ್ಚಿನ ಕಾಡುಗಿಚ್ಚೊಂದುಕಡೆಯಲ್ಲೆನ್ನ ಸುಡುತಲಿದೆ ।
ಕ್ರೋಧವೆಂಬ ಹೆಬ್ಬುಲಿ ಹಸಿದು ಒಂದು ಕಡೆಯಲೆನ್ನ ತಿನ್ನುತಲಿದೆ ।
ಲೋಭವೆಂಬ ಮಹ ರಕ್ಕಸನೊಂದು ಕಡೆಯಲೆನ್ನ ಹೀರುತೈಧಾನೆ ।
ಮೋಹವೆಂಬ ಕಗ್ಗತ್ತಲೆಯು ಕವಿದು ದಿಕ್ಕುದೆಸೆ ಏನು ತಿಳಿಯದು ।
ಮದವೆಂಬ ಸೊಕ್ಕಿದ ಕಾಡಾನೆ ಒಂದು ಕಡೆಎನ್ನ ಸೀಳುತಿದೆ ।
ಮತ್ಸರವೆಂಬ ಮಹವಿಷದ ಚೋಳೊಂದು ಕಡೆಯಲೆನ್ನ ಊರುತಿದೆ ॥
ಈ ಪರಿಯ ಭವವೆಂಬಡವಿಯಲಿ ನಾನಾ ಪರಿಶತ್ರುಗಳಿಗೊಳಗಾದೆ ।
ಶ್ರೀಪತಿ ಪರಮದಯಾನಿಧೆ ದೀನನಾಥನೆನ್ನೊಡಿಯ ರಕ್ಷಿಸೊ ಶ್ರೀಕೃಷ್ಣ ॥ ೧ ॥

ಮಟ್ಟತಾಳ

ಆಗದ ಹೋಗದ ಮನೆ ವಾರುತೆ ಬೇರೊಬ್ಬ (ಭಾರವ) ।
ಲೋಗರಿಗಾಗಿ ಹೊತ್ತು ಭವಾಟವಿಯಲ್ಲಿ ।
ರಾಗವೆಂಬ ಘನ ತೃಷಿಯಿಂದ ಬಾಯೊಣಗಿ ।
ಭೋಗವೆಂಬ ಬಯಲ ಮೃಗ ತೃಷ್ಣೆಗೋಡುತ ।
ಬೇಗೆಯಿಂದ ಬಿದ್ದೆನೊ ನರಕ ಕೂಪದಲಿ ।
ನಾಗಶಯನ ಎನ್ನನುದ್ಧರಿಸೊ ಸಿರಿಕೃಷ್ಣ ॥ ೨ ॥

ರೂಪಕತಾಳ

ಇಂದ್ರಿಯಂಗಳೆಂಬ ಕಳ್ಳರೈವರು ।
ಬಂಧಿಸಿ ತಮ್ಮ ವಿಷಯಕ್ಕೊಯ್ದೆನ್ನ ।
ಕಂದಿಸಿ ಜ್ಞಾನವೆಂಬ ದೃಷ್ಟಿಯು ।
ಎಂದೆಂದಿನ ಧರ್ಮಧನವ ನೊಯ್ವರು ಬಂಧಿಸಿ ।
ಇಂದಿರೇಶ ಲೋಕಪತಿ ಶ್ರೀ ಕೃಷ್ಣ ಎನ್ನತಂದೆ ।
ವಿಚಾರಿಸಯೆ (ಲೊ) ಲ್ಲದ್ಯಾಕೆ ಬಾಧಿಪೆ ॥ ೩ ॥

ಝಂಪಿತಾಳ

ನಾನಾ ಗರ್ಭವೆಂಬ ಕಂಪಿಲೊಮ್ಮೊಮ್ಮೆ ।
ಹೀನೋಚ್ಚ ಜನ್ಮವೆಂಬ ತಗ್ಗು ಮಿಟ್ಟೆಯಲೊಮ್ಮೆ ।
ಸ್ವರ್ಗವೆಂಬ ಪರ್ವತಾಗ್ರದಲೊಮ್ಮೊಮ್ಮೆ
ದುರ್ಗತಿ ಎಂಬ ಕಮರಿಯಲಿ ತಾನೊಮ್ಮೆ ।
ಬಂದೆ ಭವಾಟವಿಯಲಿ ನಿನ್ನ ಪಾದಾರ ।
ವಿಂದದ ನೆರಳಲರಿಸೆನ್ನ ಸಿರಿಕೃಷ್ಣ ॥ ೪ ॥

ತ್ರಿಪುಟತಾಳ

ಹರಿದಾಸರಾರೆಂಬ ನೆರವಿಲ್ಲದೆ ಹರಿಸೇವೆ ಎಂಬ ಪಥವ ಕಾಣದೆ।
ಹರಿಪದವೆಂಬ ಜನುಮ ಭೂಮಿಯ ।
ಪರಿದು ದೂರದಲ್ಲಿ ತಪ್ಪೀಗ ಕಾಣದಲೆ ।
ಮರುಳಾದೆ ಭವಾಟವಿಯಲ್ಲಿ ।
ಸಿರಿಪತಿ ನಿನ್ನ ಸೇರಿಸೊ ಸಿರಿಕೃಷ್ಣ ॥ ೫ ॥

ಅಟ್ಟತಾಳ

ಮಾಯ ಎಂಬ ದುಷ್ಟರಾಯ ।
ಮಾನವೆಂಬ ಬಿನಗು ಮಂತ್ರಿ ।
ಇಂದ್ರಿಯಗಳೆಂಬ ತಿಂದೋಡುವ ಪರಿವಾರ ।
ಬಿಗಿದು ಕಟ್ಟಿ ಎನ್ನ ಹಗೆಗಳಿಗಿತ್ತರು ।
ಬಾಧೆಗೆ ಶ್ರೀ ಮಾಧವ ಎನ್ನಕಾಮಾದಿ ಹಗೆಗಳ ಶಿಕ್ಷಿಸಿ ।
ರಕ್ಷಿಸೆನ್ನ ಸ್ವಾಮಿ ಸಿರಿ ಕೃಷ್ಣ ॥ ೬ ॥

ಆದಿ ತಾಳ

ತಾಪತ್ರಯವೆಂಬ ದಾವಾ ನಲದಿಂದ ।
ಪಾಪಾತ್ಮರ ಸಂಗವೆಂಬ ವಿಷವೃಕ್ಷದಿಂದ ।
ಕಾಪಥವೆಂಬ ಬಹು ತಪ್ಪು ಗತಿಗಳಿಂದ ।
ಕೋಪವೆಂಬಟ್ಟುವ ಕಾಳೋರಗದಿಂದ ।
ಈ ಪರಿಯಲಿ ನೊಂದೆ ಭವಾಟವಿಯಲಿ ।
ನೀಪಾಲಿಸಲು ಬೇಕೆನ್ನನು ಸಿರಿಕೃಷ್ಣ ॥ ೭ ॥

ಜತೆ

ಅತ್ತಿತ್ತ ಸುತ್ತಿ ಭವಾಟವಿಯಲಿ ನೊಂದೆ ।
ಇತ್ತಬಾರೆಂದು ನಿನ್ನಹತ್ತಿಲಿರಿಸೊ ಸಿರಿಕೃಷ್ಣ ॥ ೮ ॥

ಸುಳಾದಿ ೧೩

ರಾಗ ಸಾರಾಂಗ ಧ್ರುವ ತಾಳ

ಹರಿ ಚರಿತೆ ಶ್ರವಣ ದುರಿತ ಕುಚ್ಚ್ಯಾಟನಂ ।
ಹರಿನಾಮ ಕೀರ್ತನೆ ಭವರೋಗಕ್ಕೆ ಸಿದ್ಧೌಷಧಂ ।
ಹರಿ ಚರಣ ಸ್ಮರಣ ಮುಕ್ತರೊಳಗರ್ಪಣಂ ।
ಇಂತು ಹರಿಪಾದ ಸೇವೆ ಅನಂತ ಫಲಸಾಧನ ।
ಇಂತೆಂಬದೊಂದು ಪೇರ್ಮೆಗೆ ಹರಿಸೇವೆ ಫಲರೂಪ ।
ಶ್ರವಣವೆ ಶುಭದ ಬೆಳಸು ಕೀರ್ತನೆಯ ಲೇಸಿನ ಹೆಚ್ಚಿಗೆ ।
ಸ್ಮರಣವಚ್ಛಸುಖವೆಂಬ ತೊಟ್ಟಲು ಎಂಬವದನುಭದಸಿದ್ಧಾ ।
ಸಿರಿಕೃಷ್ಣನ್ನಪಾದಸೇವೆ ಎಲ್ಲದಿಲ್ಲಪಾದಮುಕ್ತಿಕನ್ನಿಕೆಸೇರುವೆ॥೧॥

ಮಟ್ಟತಾಳ

ನೆನಹಿನ ಲೇಶಮಾತುರದಿಂದ ಮಹಾ ।
ಘನಸುಖಮಯನಾಗಿ ಇಪ್ಪೇನಾವಾಗ ।
ತನು ಭಾವವಳಿದು ಮೌನಿಗಳಂತೆ ವೈಮರೆದು ಕಃ ।
ಜನಾಚಾರವಳಿದು ಸಲೆ ನಿನ ನನವರತ ।
ನೆನೆವ ಭಕುತರ ಸುಖವಿನ್ನೆಂತೊ ಸಿರಿಕೃಷ್ಣ || ೨ ||

ತ್ರಿವಿಡ ತಾಳ

ಪುತ್ರ ಮಿತ್ರ ಕಳತ್ರ ವರ್ಗದಿಂದ ।
ದೇಹ ಕರ್ಮಜ್ಞಾನೇಂದ್ರಿಯಗಳಿಂದ ।
ಚಿತ್ತ ಬುದ್ಧಿ ಮನೋ ಹಮ್ಮುಗಳಿಂದ ।
ಪ್ರಾಣದಿಂದ ತನ್ನಾತ್ಮದಿಂದ ।
ನೀನೆ ಪ್ರಿಯನಾಗಿಹೆ ಶ್ರೀ ಕೃಷ್ಣ ।
ನಿನ್ನ ನೆನಹಿಗಿಂತ ಬೇರೆ ಪರಮಸುಖ ಉಂಟೆ || ೩ ||

ಅಟ್ಟತಾಳ

ಆ ನಿನ್ನು ಧನ್ಯನಲ್ಲ ಮತ್ತೇನು ಕೊಂಡೆನು ಕೊಂ ।
ಡೆನಗೆ (ಕಾರಣ ಕೊಂಡೆನು) ಆರೇನು ಕಾರಣವಯ್ಯಾ ।
ನಾನಾದುರಿತ ತನ್ನಿಂತಾನೆ ನೆನವಿಗೆ ಬಂದನಾಗಿ ।
ಶ್ರೀನಾಥಾ ಸಿರಿಕೃಷ್ಣ ತಾನೆ ನೆನವಿಗೆ ಬಂದನಾಗಿ ।
ನಾನಾ ದುರಿತ ತನ್ನಿಂತಾನೆ ಬೆಂದುದಲ್ಲಾ || ೪ ||

ಆದಿತಾಳ

ಮರಹೆ ಎಡರು ಮರಹೆ ಬಡತನ ।
ಮರಹೆ ಅವಮಾನವು ಮರಹೆ ನಷ್ಟ ।
ಮರಹೆ ಮೋಸ ಮರಹೆ ಹೆಮ್ಮಾರಿ ।
ಮರಹೆ ಅಹಂಕಾರ ಮರಹೆ ನರಕ ।
ಮರಹೆ ಶತ್ರು ಮರಹೆ ಮೃತ್ಯು ।
ಮರಿಯದೆ ನಿನ್ನ ನೆನವಂತೆ ಮಾಡೋ ಸಿರಿಕೃಷ್ಣ || ೫ ||

ಜತೆ

ಸಿರಿಕೃಷ್ಣ ನೆನಹಿನ ಸುಖವು ಲವಬೇಕೆಂಬವನೆ (ಸಾರಿ ಬೆಳೆವ ಸುಖಬೇಕೆಂಬುವನೆ ।
ಮುಕುತಿಯ ಸುಖವನೆಂತೇನು (ಮುಕ್ತಿ ಸುಖವನಾಂತವನು) ।೬।।

— ಶ್ರೀಗುರು ಮಧ್ವೇಶ ಕೃಷ್ಣಾರ್ಪಣಮಸ್ತು —

ಪದ್ಯವಿಭಾಗ ೧

ಶ್ರೀ ಸ್ವಾಮಿ ಗುರುರಾಜರ ಸುಳಾದಿಗಳು

(ವಾದಿರಾಜರು) ಶ್ರೀ ಹಯವದನರ

ಸುಳಾದಿ ೧. ಸೃಷ್ಟಿ ಪ್ರಕರಣ

ರಾಗ ಸಾವೇರಿ — ಧ್ರುವತಾಳ

ಅನಿಮಿಷಯ ನಾರಿಯರ ಸ್ತುತಿಯ ಬಂಧದಿಂದ।
ಹರಿ ಶ್ರೀಭೂಮಿ ದುರ್ಗೆಯರೊಡನೆ
ತನ ಉದರದಲ್ಲಿ ಲಿಂಗದೇಹ ವಿಶಿಷ್ಟರಾದ।
ನಿಖಿಳ ಜೀವರ ಹಿಡಿ ಸಂಜಾ ಕೊಂಡು।
ತನ್ನಮಾನ ನೂರು ವರುಷ ಪರಿಯಂತದಿ।
ಸಾಗರ ಕ್ಷೀರ ವಟ ಪತ್ರ ಶಯನನಾಗಿ।
ಮನದಲ್ಲಿ ತನು ತತ್ವಗತಿಗೆ ತಕ್ಕನಾ।
ಘನರ ಸಾಧಿಸಿಕೊಳ್ಳಲೆಂದು ಕರುಣಾ
ಪುನರಪಿ ಸೃಷ್ಟಿಯ ಮಾಡುವೆನೆಂದು ಅನಾ
ಎಸಗಿ ಪ್ರಕೃತಿಯು ಮಮತೆಯುತ್ತ।
ಗುಣ ತ್ರಯಾತ್ಮಕ ಸೂಕ್ಷ್ಮ ತತ್ವರಾಶಿಯ ಜೀವ।
ದನು ಸೃಜಿಸಿದ ಹಯವದನ ಪ್ರಭು ೧

ಮಟ್ಟತಾಳ

ಮಹತ್ತತ್ವವ ಸೃಜಿಸಿ ಮಹತ ಬ್ರಹ್ಮರಿಟ್ಟ।
ಅಹಂಕಾರದಿ ಗರುಡ ಶೇಷ ರುದ್ರರಿಟ್ಟಾ।
ಅಹಂಕೃತಿ ತ್ರಿತಿಯ ಭಾಗವನೆ ಮಾಡಿ।
ಶ್ರೀ ಹಯವದನ ಭೂತೇಂದ್ರಿಯಗಳ ಮಾಡಿದಾ ೨

ರೂಪಕತಾಳ

ತಾಮಸದಿಂದ ಪಂಚಭೂತಂಗಳ ಸೃಜಿಸಿ।
ವ್ಯೋಮವಾದಂತರದಿ ದಂತ ದೇವರ ಕೂಡಿಸಿ।
ಆ ಮನಸ್ಸು ಶ್ರವಣ ನಾಸಿಕ ದಶೇಂದ್ರಿಯ।
ನೋಡು ಸೂತ್ರಾದಿ ದೇವತೆಗಳನೇ ನಿಲಿಸಿ।
ಶ್ರೀಮನೋಹರ ಜನಾರ್ದನ ಪ್ರೇರಕರಿ।
ಆ ಮನದ ದೇವತೆಗಳ ತನ್ನ [illegible]

ತ್ರಿಪುಟ ತಾಳ

[illegible]
[illegible]
[illegible]
[illegible]

[illegible]

"[illegible]
[illegible]
[illegible]
[illegible]"
[illegible]
[illegible]

ಅಟ್ಟತಾಳ

ಅದರಿಂದ ತತ್ವ ದೇವತೆಗಳೆಲ್ಲರು ಕೂಡಿ।
ಮುದದಿ ಬ್ರಹ್ಮಾಂಡ ಮಾಡಲರಿಯದೆ ಪೋಗಿ।
ಪದುಮನಾಭನ ತುತಿಸಲು ಅವರೊಳು ಪೊಕ್ಕು।
ಆದು ಭೂತ ಬ್ರಹ್ಮಾಂಡವನು ರಚಿಸಿದನು।
ಆದರೊಳು ಬಂದು ಬಹುಕಾಲ ಪರಿಯಂತರ।
ಉದಕ ಶಾಯಿಯಾದ ಮುದದಿ ಹಯವದನಾ

ಆದಿತಾಳ

ಶಿಷ್ಟರನ್ನು ಶುಭಪಥಕೆ ನಡಿಸಿ ಉ-
ತ್ಕೃಷ್ಟ ಸುಗತಿಯನು ಕೊಡುವನ್ನೀಶನು।
ದುಷ್ಟರನ್ನು ದುಷ್ಟಪಥಕೆ ನಡಿಸಿ।
ಕಷ್ಟಗತಿಯ ಕೊಡುವನ್ನೀಶನು।
ಸೃಷ್ಟಿ ಮೊದಲಾದ [illegible]
[illegible] [illegible]

ಜತೆ

[illegible]
[illegible]

[illegible]

[illegible]

ರಾಗ [illegible] [illegible] ತಾಳ

[illegible]
[illegible]
[illegible]
[illegible]
[illegible]
ಸ್ಥಿರ ಚರಾಚರದ [illegible] ಭಿನ್ನ।
[illegible] ಸುರರೆಲ್ಲ [illegible]
ತರ ತಮ್ಯಭಾವ ಜೀವ ರೊಳಿಪ್ಪದು।
ಪರಮ ಮೋಕ್ಷ ವೆಂಬೋದು ವೈಕುಂಠಾದಿಲೋಕ।
ಪರಪಂಚ ಭೇದ ಪಂಚಕಾ ಭರಿತಾ।
ಪರಮಾರ್ಥ ಸತ್ಯವಿದೆಲ್ಲ ಪುಶಿ ಅಲ್ಲವೆಂದು।
ಕರುಣಾಕರ ಹಯ ವದನ ಬಲ್ಲಾ।
ಹರಿ ಸ್ವಾತಂತ್ರ ಸರ್ವೇಶಾ ೧

ಮಟ್ಟತಾಳ

ತ್ರಿವಿಧ ಜೀವರಿಹರು ಜಗದೊಳು।
ಭವ ನಿವೃೋಕ್ಷ ತಮ ವವರಗತಿ।
ತ್ರಿ ವಿಧ ಸಾಧನಂಗಳಿಹವು ವಿಷ್ಣು।
ಶ್ರವಣ ಮನನ ನಿಜ ಧ್ಯಾಸನಾ।
ಭವಕೆ ವಿಪ್ರಕರ್ಮ ತಮಕೆ ಹ।
ಯವದನನ ದ್ವೇಷ ಕಾರಣ

ರೂಪಕ

ನಾನಾವ ತಾರಗಳು ಜ್ಞಾನಾ ನಂದಾತ್ಮಕ।
ಶೋಣಿತ ಶುಕ್ಲ ವಿಕಾರತೀ ದೂರ।
ಆ ನಂದ ಸುತ ಮೂಲ ರೂಪದಿಬಂದ।
ಕಾಣಳೆ ಮಗನ ಬಾಯೊಳು ತಾಯಿ ಜಗವ।
ಆ ನಂದಸುತ ಮೂಲರೂಪದಿ ಬಂದಾ।
ಶ್ರೀ ನಾರಸಿಂಹ ಹಯವದನಾದಿರೂಪಾ ಸಿ।
ದಾಸಿಸಿ ನೋಡೊ ಸಂಶಯ ಸೀಡ್ಯಾಡೊ।
ಆನಂದ ಸುತ ಮೂಲ ರೂಪದಿ ಬಂದಾ

ಝಂಪೆ ತಾಳ

ಲೀಲಾವ ತಾರದಲಿ ತದನು ಗುಣ ಕ್ರಿಯಗಳು।
ಕೈಲಾಸ ಯಾತ್ರಿ ಧರ್ಮಜ ಯಾತ್ರಿಯಂತೆ ತಿಳಿ।
ಮೂಲ ರೂಪದಿ ತೀರ್ಥವೌಳಿ ಎನಿಸಿದ ಶಿವನು।
ತ್ರೀಲೋಲ ಏನು ಮಾಡಿದ ಪೇಳೊ ಮನುಜ।
ಬಾಲಕತ್ವವ ಬಿಟ್ಟು ಹಯ ವದನ ಹರಿ ಜಗ।
ತ್ಪಾಲಕನೆಂದು ನಂಬೊ ನರ ನಟನೆ ಡಂಬೋ

ತ್ರಿವಿಡ ತಾಳ

ಪ್ರತ್ಯಕ್ಷ ಅನುಮಾನ ಆಗಮ ಗಳಿಂದು।
ಶ್ರುತ್ಯರ್ಥವು ಸಮ ವೇದವೆ ಪೇಳಿತು।

ಶ್ರುತ್ಯರ್ಥ ಪುರಾಣಗಳು ತ್ರಿವಿಧವೆಂದು।
ಸತ್ಯವತಿ ಸೂನು ತಾನೆ ಪೇಳಿದನಾಗಿ।
ಶ್ರುತ್ಯರ್ಥ ಪುರಾಣಗಳು ತ್ರಿವಿಧವೆಂದು।
ತತ್ತ್ವಾಮೃತವ ಬಿಟ್ಟು ಶ್ರೀ ಹಯ: ವದನ ಸ।
ರ್ವೋತ್ತಮ ನೆಂಬೊ ಮತವನೆ ನೆರೆನಂಬೊ ೫

ಧ್ರುವ ತಾಳ

ಭೃಗು ಮುನಿಪನು ವಿಚಾರಿಸಿ ಕೃ।
ಷ್ಣಗೆ ಸಮಾಧಿಕರಿಲ್ಲ ವೆಂದು।
ನಿಗ ಮಾರ್ಥಕೋವಿದ ಋಷಿಗಳಿಗೆ ಪೇಳ್ದ ತಾನಂದು।
ಮುಗಿದ ಕರಗಳ ಬಾಷ್ಪಗಳ ತಂದು।
ತೆಗಿ ಸಂದೇಹವ ಹಯುವದನ ಪಾದಗಳ ನೆರೆನಂಬೊ।
ಮುಕ್ತಿ ಸುಖಕ್ಕಿಂಬೊ ೬

ಅಟ್ಟತಾಳ

ಸತ್ಯಂಭಿದಾ ಶ್ರುತಿ ಮುಕ್ತಾನಾಂ ಪರಮಾಂಗತಿ ಎಂಬ ಸ್ಮೃತಿ।
ಮುಕ್ತಿ ಸಂಸಾರದೊಳು ಭೇದ ಪೇಳಿತು ಸರ್ವ।
ಮಿಥ್ಯ ಐಕ್ಯವೆಂಬ ಮಾತು ಎಲ್ಲಿಹದೋ।
ಉಕ್ತಿ ವಿಚಾರಿಸಿ ಯುಕ್ತಿಯಿಂದಲಿ ಹರಿ।
ಭಕ್ತರ ಕೇಳೊ ತಿಳಿಯುದಿದ್ದರೆ।
ಮತ್ತ ನಾಗದೆ ಹಯುವದನನ ಭಜಿಸಿಸೀ।
ಮುಕ್ತನಾಗೋ ಭವ ಸಾಗರದಿಂದಲೀ

ಆದಿತಾಳ

ಅಪ್ರಾಕೃತ ಹರಿ ದಶೇಂದ್ರಿಯಂಗಳು।
ಅಪ್ರಾಕೃತ ವಾತನ ದಿವ್ಯದೇಹ!
ಅಪ್ರಾಕೃತ ವಾತನ ಸುಗುಣಂಗಳು।
ಅಪ್ರಾಕೃತ ವಾತನ ದಿವ್ಯಲೀಲೆ।
ಅಪ್ರಾಕೃತ ವಾತನ ಮೂರು ಮನೆಗಳು:

ಅಪ್ರಾಕೃತ ವಾತನ ಅರ್ಧಾಂಗಿ।
ಅಪ್ರಾಕೃತ ಹಯವದನನ ಕರುಣದಿಂದ।
ಅಪ್ರಾಕೃತ ರಹರು ಮುಕ್ತಿಯೋಗ್ಯರು।
ಅಪ್ರಾಕೃತವಾತನ ಅರ್ಧಾಂಗಿ

ಜತೆ

ಇಂತು ಈ ಪರಿಜ್ಞಾನ ಉಳ್ಳ ಮಹತ್ಮರ।
ಸಂತತ ಪೊರೆವ ಶ್ರೀಕಾಂತ ಹಯವದನಾ

ಸುಳಾದಿ ೩.

ಅಧ್ಯಾತ್ಮ ಪ್ರಮೇಯ

ರಾಗ ಪಂತುವರಾಳಿ — ಧ್ರುವತಾಳ

ಒಪ್ಪುವ ಮಾನಿಸ ದೇಹಂಗಳೆಲ್ಲ ಬ್ರಹ್ಮಪುರಕೊಂಭತ್ತು ದ್ವಾರಗಳ
ಎಪ್ಪತ್ತೆರಡು ಸಾವಿರ ನಾಡಿಯೊಳು।
ಒಪ್ಪುವು ಗಡಾ ಬೀದಿ ಬೀದಿಯಂತೆ।
ಅಪ್ರತಿ ಮುಷ್ಟ್ಯೈಕ ನಾಮ ರಾಜ ಬಾಳುವ।
ಒಪ್ಪಿಪ್ಪ ಮನೆಗಳು ಬಗೆ ಬಗೆಯು।
ಸರ್ಪ ಶಯನನ ಸೋಪಾನ ಪಂಕ್ತಿಗಳು [illegible]
ಸಪ್ತ ಋಷಿ ಪಂಜು ಬೆಳಕು ಗಡಾ।
ತಪ್ಪದೆ ನಾಮವೆಂಬೊ ಸಕ್ಕರೆ ಹೇರು।
ಒಪ್ಪುವು ಗಡಾ ಗವಾ ದ್ವಾರದಲ್ಲಿ।
ಅಪ್ರತಿ ಮೊದಲಾದ ದೇವಕ್ಕಳೆಲ್ಲ ಬ್ರ।
ಹ್ಮಪಾಲಕರಾದರು ಪಟ್ಟಣ ಸ್ವಾಮಿಗೆ।
ಅರ್ಪಿಸುವರು ಗಡಾ ಹಯವದನನಿಗೆ ಅವ।
ನಪ್ಪನೆಯಲ್ಲಿ ತವುಗಲ್ಪ ಗಡಾ।
ಅಪ್ರಿಯವಾದ ದುಃಖಗಳೆಂಬುಳ್ಳಿಯ ಹೇರು।
ಅಲ್ಪಸಾರ ಜೀವದಂಗಡಿಯಲ್ಲಿ ಗಡಾ

ಮಟ್ಟತಾಳ

ಬೀದಿ ಬೀದಿಯಲ್ಲಿ ಇರಳು ಹಗಲು।
ಕಾದು ಕೊಂಡಿಹರು ತಳವಾರ ಭೃವರು।
ಮಾಧವಗತಿ ಪ್ರೀಯುಳವರೆಂದೆಂದು।
ಹಾದಿಯ ಕೊಡರು ಭೃತ್ಯಜೋರರಿಗೆ।
ಅಧಿಕಾರಿಕ ಮಂದಲಕ್ಕಗ್ರೇಸರರು।
ಈ ಪರಿಯೊಳು ಹಯವದನ ನಾಳುಗಳು।
ಮಾಧವ ಗತಿ ಪ್ರೀಯುಳವರೆಂದೆಂದು ೩

ರೂಪಕ ತಾಳ

ಚಕ್ರಾಂಕ ಮೊದಲಾದ ಎಲ್ಲ ಪಟ್ಟಣದೊಳು।
ಪ್ರಾಕಾರ ಜೋಡುವರು ಬೀದಿ ಬೀದಿಯಲ್ಲಿ।
ಅಕ್ಕಟಾ ಈ ಜೀವ ಒಂದು ನಾಡಿನಾಶಾ।
ರಕ್ಷಿಸಿ ಕೊಂಬುವದಲ್ಲದೆ ಮೂಪರು।
ಪತ್ರಿ ನಾಶನಗಲ್ಲದೀ ದೇಹ ಘೋರಿತನ।
ನಾಯಿ ಜೀವಂಗೆಂತಪ್ಪದೊ ಹಯವದನಾ ೨

ಝಂಪೆತಾಳ

ಇಂತಿ ಪಟ್ಟಣನಾಡಿ ಪಂಪೆ ಎಂಬ।
ಭ್ರಾಂತಸಂಖ್ಯ ನಾಡೀ ಪರಿಯು ಮನೆಯೊಳು।
ಅಂತ ಇಲ್ಲದ ಜೀವರಾಶಿಯಲ್ಲಿ ಪೊಗಿಸಿ।
ಚಿಂತೆಗೊಳಗು ಮಾಡಿ ಕರ್ಮಪಾಶದಿಕಟ್ಟಿ।
ಸಂತತ ಸಾಕುತಿಹ ಹರಿಪುರವಿದು।
ಸಂತೆ ಜೀವರಿಗೆ ಎಂತೊಪ್ಪೋದೆ ಹಯವದನಾ ೪

ತ್ರಿಪುಡಿ ತಾಳ

ತಾಯಿ ಪೊಟ್ಟೆಯೊಳಿರಲು ದೇಹವಾರಿಚ್ಛೆ।
ಬಾಯಿ ಬಿಟ್ಟಳುವಾಗ ದೇಹವಾರಿಚ್ಛೆ।
ಕಾಯ ತನ್ನಗಲುತಿಹ ದೇಹವಾರಿಚ್ಛೆ।

ರಾಯ ಬಿಟ್ಟು ಹಿಡಿಯೆ ದೇಹವಾರಿಚ್ಛೆ।
ಪಾಯಿಸವ ಸುರಿವಾಗ ಹೇಯವಾರಿಚ್ಛೆ।
ಶ್ರೀಯರಸ ಹಯವದನ ಹಂಪುರದರಸು

ಧ್ರುವತಾಳ

ಅನಿಲಾನು ಅನಳಾನು ಅಣು ತೃಣವೆಂದು ಮುನ್ನ।
ಕಣಕಲಾರದೆ ದುರ್ಮದದಿ ತಿರುಗಿದರೇನು।
ಇನಿತು ತತ್ವದ ಜೀವರನು ಮುನ್ನೆ ಹರಿ ತಾನು।
ಅನೇಕ ರೂಪದಿ ಪೊಕ್ಕು ನಡೆಸಿ ಕೊಂಜೆ ನೆನಲು।
ಅನಿಮಿಷರಿಗಲ್ಲದೆ ಘನತೆ ನರರಿಗುಂಟೆ।
ಗುಣನಿಧಿ ಹಯವದನ ನಾಧೀನ ಜಗವೆಲ್ಲ

ಅಟ್ಟತಾಳ

ದೇಹ ಬಂಧನವ ಬಿಡಿಸುವರೆ ಹರಿಯಾಕೆ।
ದೇಹದಾತ ನೀನಾದಡೆ ಮರುಳೆ।
ದೇಹಕೆ ಕ್ಲೇಶ ಸಂಕಟ ವಿದ್ಯಾತಕೆ।
ದೇಹದಾತ ಶ್ರೀ ಹಯವದನನೆ।
ದೇಹಿಗೆ ದೇಹಾ ದೇಹದ ಯೋಗ ವಿಯೋಗಕಧಿಪತಿಯೆ

ಆದಿತಾಳ

ನಿನ್ನದಂತಿಹ ಇಂದ್ರಿಯ।
ನಿನ್ನದಂತಿಂದ್ರಿಯ ಪರಸುಗಳಿರಲು।
ನಿನ್ನದಂತಸುಗಳ ವಾರ್ತನೆ।
ನಿನ್ನದಂತೆ ದೇಹ ವಿಚಾರ ತನು ವಿದಾರವು।
ನಿನ್ನದಂತೆ ದೇಹ ನೀ ನಿದ್ರೆಗೈಯಲು।
ಮನ್ನದಿ ನಂಬು ಜೀವಸಿರಿ ಹಯವದನಾ

ಜತೆ

ದೇಹಿ ಅರಸು ನೀನೆ ದೇಹದರಸು ನೀನೆ।
ಶ್ರೀ ಹಯವದನನೆ ಸರ್ವರರಸು ನೀನೆ.

ಸುಳಾದಿ ೪

ಹರಿಯೆ ಸರ್ವೋತ್ತಮನೆಂಬ ಪ್ರಮೇಯ ಸಾಧನ ವಿಷಯ

ರಾಗ ಪಂತುರಾವಳಿ **ಧ್ರುವತಾಳ**

ಅಂಬಿಕಾಪತಿ ಉಮಾಪತಿ ಎಂದು ವೇದ ತ್ರಿ।
ಯಂಬಕನ ಗೌರಿಯರಸನ ತುತಿಸು ತಿಪಕೋ।
ಸಾಂಬ ಶಿವನೆಂಬವನು ಇವನೆ ಆದಡೆ ಜಡೆಯ।
ಸಂಭ್ರಮದಿಂವ ಗಂಗೆ ಗರ್ವಿಸಲೀಸಳು।
"ಡಂಭ ಏಕೋ ರುದ್ರನ ದ್ವಿತೀಯವತಸ್ತೆ"
ಎಂಬ ಶ್ರುತಿ ಇನ್ನೊಬ್ಬ ಶಿವನಿಗವ ಸಖನುವ।
ಡಂಬಡದು ವಿಷ್ಣುನೆಂಬವತಾರ ಮೂಲರೂಪ।
ಇಂಭವಿಪ ಬ್ರಹ್ಮರುದ್ರರ ಸೃಷ್ಟಿಗೆ।
ಇಂಬು ಸಲ್ಲುವದು "ತ್ರಿಸ್ವಧಿಕೇಷುಕೊ ಮಹಾನ್।"
ಎಂಬ ಹಿರಿಯರ ಮತವ ಸುಮತವೆಂದು।
ನಂಬು ಮನುಜ ಸ್ತಂಭ ಸಂಭವರು ತ್ರಿಶೀರ್ಷೇಕನುಸೂಪುರಗಡ।
ಅಂಬುಜಾಕ್ಷ ಹಯವದನ ಅಖಿಳರೊಡಿಯಾ ೧

ಮಟ್ಟತಾಳ

ಆರು ಪುರಾಣ ಗೌರಿಯ ಗಂಡನವು ಮ।
ನುತ್ತಾರು ಪುರಾಣ ಚತುರ ಮುಖನವು।
ಆರು ಪುರಾಣ ಹಯವದನನವು।
ತೋರೋ ಸಾಂಬಶಿವನ ಪುರಾಣವ।
ಭಾರತ ಪುರಾಣದೊಳಗಿಲ್ಲದ ಕಾರಣ ಶಶಶೃಂಗ ನಿನ್ನ ಶಿವಾ ೨

ತ್ರಿವಿಡಿತಾಳ

ಕೈಲಾಸ ರುದ್ರನದು ವೈಕುಂಠ ಲೋಕ ನಮ್ಮ।
ಶ್ರೀಲೋಲನಿಹ ಲೋಕ ಜಲಜ ಸಂಭವನಿಗೆ।
ಮೂಲೋಕವಲ್ಲವೆ ಮೇಲಿನ ಸತ್ಯಲೋಕ।
ಪೇಳೊ ನಿನ್ನ ಸಾಂಬಶಿವನ ಲೋಕ।

ಖೂಳಜನ ರೊಡನಾಡದಿರು ದುರುಕ್ತಿಯು ಬಿಡು।
ಸಾರೂ ಸಜ್ಜನ ಕುಲದೈವಹಯವದನನ್ನ।
ಆಳಾಗಿ ಬದುಕು ಶ್ರೀಹರಿ ಸರ್ವೋತ್ತಮನೆಂಬ।
ಸಾರ ಮತವನು ಸೇವಿಸು ಮನುಜ

ರೂಪಕತಾಳ

ಶ್ರುತಿ ಪುರಾಣದೊಳಿಲ್ಲದ ಕ್ಷಿತಿಯೊಳರ್ಚನೆಗಲ್ಲದ
ಪತಿಜ ದೇವಕ್ಕಳೊಲ್ಲದ ಮತಿವಂತರ ಮುಂದೆ ನಿಲ್ಲದ।
ಮತ ವಿದ್ಯಾತ್ಯತಕೋ ಸಲ್ಲದ ನಮ್ಮ।
ಕೃತಿಪಯುವದನ ಬಲ್ಲಿದಾ

ಝಂಪೆತಾಳ

ಪರಶಿವ ನಿರಾಕಾರನಾದಡೆ ನಿರ್ಗುಣಬೊಮ್ಮ।
ಹರ ಶಿವಾದಿ ಪೆಸರುಪಂಚಮುಖನಿಗಲ್ಲದೆ ಸಲ್ಲ।
ಶರೀರ ವೆರಸಿದಡೆ ಜನ್ಮ ಮರಣಗಳು ಬಿಡವು ನಿನ್ನ।
ಮರುತ್ಸುತ ಬರೆದ ಪ್ರೋಯುತೊ ಪರಶಿವ।
ಪರ ದೇವನೆಂದು ವಾಸುದೇವಗೆ ಸಾ।
ಸಿರನಾಮ ಪೊಳಿದ್ದ ಕಾರಣ ಪರಶಿವನವನೆ।
ನೆರತೊಬ್ಬ ಶಿವನಿಲ್ಲ ಪರಾತ್ಪರ ನಮ್ಮ।
ಸಿರಿದೇವಿ ಯರಸ ಹಯವದನ ಕಾಣೋ

ರೂಪಕ ತಾಳ

"ತ್ರಯ ತ್ರಿಂಶದ್ವೈ ದೇವಾ ಸೋಮಪಾ" ಎಂದು।
ಪ್ರಿಯಾ ಸ್ತ್ರಯಾಧಾನಾ" ಮೂವರು ದೇವರು, ನಿ।
ಶ್ಚಯಿಸಿ ಪೇಳಿದ ಕಾರಣದಿ ಇನ್ನೊಂದು ಪೆಸ್ಸೈವ ಮತ್ತಿಲ್ಲಿಹದು
ನ್ಯಾಯಾ ವೆಲ್ಲಿಹದೊ ಪೇಳೆಲೊ ಕುವಾದಿ।
ನ್ಯಾಯಾ ಕೋವಿದರೊಳು ಶ್ರೀ।
ಹಯ ವದನ ಬೊಮ್ಮ ಶಿವರೆಂಬ ಈ।
ನ್ಯಾಯವ ತಪ್ಪದು ಇನ್ನೊಬ್ಬರೊಪ್ಪರೊ

ತಾಳ ವಿಳಂಬಟ್ಟ

"ನಾಮಾನಿ ಸರ್ವಾಣಿ ಯಮಸಾ ವಿಶಂತಿ ತಂವೈ ವಿಷ್ಣೋ"।
ಎಂದು ಶ್ರುತಿಯಲ್ಲಿ ಸು ಪ್ರಸಿದ್ಧಾ।
ನಾಮಗಳು ಹರಿಯಲ್ಲಿ ಪ್ರವೇಶಿಸಿದ ಕಾರಣ।
ಆಮ್ನಯಾಂಬದಂತೆ ಬಹದೂ।
ಭ್ರಾಮಕ ಶ್ರುತಿ ಸ್ಮೃತಿ ವಿರೋಧ ಬಳಿಸಿಕೊಳ್ಳಲಾರದೆ।
ತಾಮತ್ತೆ ಕೆಡುವೆನೆಂದು।
ಧೀಮಂತರೆಲ್ಲರು ಬಲ್ಲರು।
ನೀ ಮರುಳಾಗಿ ಶ್ರೀ ಹಯವದನನ ಜರಿದು।
ತಾಮಸ ರೋಗಿಷ್ಟ್ಯಕೆ ಕೂಡದಿ ೭

ಅಟ್ಟತಾಳ

ಆದರಿಂದ ಹರಿಸರ್ವೋತ್ತಮನೆಂಬ ಶ್ರುತಿ ಸಮ್ಮತ।
ಮಧುಸೂದನನ ಕೊಂಡಾಡುವದು ಸಂದೇಹವಿಲ್ಲ।
ವಿಧಿಗಳ ಮತದಲ್ಲಿ ಹರಿ ಸರ್ವೋತ್ತಮನೆಂದು।
ಚತುರರೆಲ್ಲರು ಬಲ್ಲರು ಉದಕ ಮಾತ್ರ ಕೊಡಲಿಸ್ಕೊಂಬವೇನನ।
ಹೃದಯ ಕಮಲದೊಳು ನೆಲಿಹಯವದನನ್ನ।
ಸದ ಸ[illegible] ಚೇತನ ಸಮಗುಣ ಭರಿತನ।
[illegible] ಕೀರ್ತಿಯ [illegible]ವಹಿತನಾ ೮

ಆದಿತಾಳ

ಸತ್ತ್ವಾಂ[illegible] ದ್ರವ್ಯದ ಭಜನೆಯು ಬಿಡು ಸ್ಥಿರು।
ಸೋತ್ತಮ ಸಂಸ್ಥಿತಿಯು ಯುಜಿಸು ಭವಕತಾರ।
ಹತ್ತಿಲಿ ಸೇರಿ ವಿರಕ್ತಿಯು ಬಿಡದಿರು।
ಭಕ್ತಿಯು ಮಾಡುತಿರು ಹತ್ತವತಾರದ ಹರಿಯ ಚರಿತ್ರೆಯು।
ಸುತ್ತಲಿ ಸುತ್ತುತ ಕೀರ್ತಿಸುತಿರು ಸರ್ವ।
ಕರ್ತಹಯವದನ ನತ್ತ ಮನವ ಮಾಡು ದುಸ್ತರ್ಕಗಳ ಬಿಡು ೯

ಜತೆ

ಹಯ ವದನನೆ ಗತಿ ಹಯವದನನೆ ಪತಿ।
ಹಯವದನನೆ ಸುರ ಪತಿ ಸುರರುಗಳಿಗೆ ೧೦

ಸುಳಾದಿ ೫

ಶ್ರೀ ವೆಂಕಟೇಶನು ಸ್ವಪ್ನದಲ್ಲಿ ತೋರಿದ ಮಹಾತ್ಮೆ

ರಾಗ ನೀಲಾಂಬರಿ ಧ್ರುವತಾಳ

ಅರಳಿವ ಕೆಂದಾವರಿಯ ಇರವ ಧಿಕ್ಕರಿಸುವ।
ಗಿರಿಯ ತಿಮ್ಮರಾಯನ ಚರಣಗಳ ಕಂಡೆನಾ।
ಅರುಣ ತಳದಲ್ಲಿಪ್ಪ ಅಂಕುಶ ಧ್ವಜ ವಜ್ರದಿಂ।
ಸುರುಚಿರ ರೇಖೆಗಳ ಸೊಬಗು ಕಂಡೆನಾ
ಬೆರಳು ಸಾಲ್ಗಳ ಮೇಲೆ ಜೇರಿ ತೋರುವ ಭಾ।
ಸುರುನಖ ಮಣಿ ಗಳಿಸಿವ ಕಿರಣಗಳ ಕಂಡೆನಾ।
ಕಿರಿಗೆಜ್ಜೆ ಕಡೆಯ ಪೆಂಡೆಯ ಪ್ರಭೆಯ ಕಂಡೆ।
ಎರಡು ರನ್ನದ ಕನ್ನಡಿಯ ತೆತ್ತಿಸಿದ ಪೋಲು।
ಮುರಹರನ ಮೋಹನದ ಜಾನು ದ್ವಯವ ಕಂಡೆನಾ।
ಕರಿಯ ದಂತವ ಪೋಲ್ವ ಜಂಘೆಗಳ ಕಂಡೆನಾ
ಉರುಟು ಕದಳಿಯ ಕಂಭದಂತೆ ಉರುತರವಾದ ನತ್ತಾಲು।
ಹರಿಯ ಊರು ಪೀವರ ಕಂಡೆ ಕನಸಿನಲಿ
ವರ ಪೀತಾಂಬರ ಕಾಂಚಿ ಕಿಂಕಿಣಿ।
ಜಾಲಗಳಿಂದ ದಾಮ ಉಡಗಿ ಮೆರೆವ।
ಕರುಣಿ ವೆಂಕಟೇಶ್ವರನ ಕಟಿಯನ್ನು ಕಂಡೆನಾ।
ಕೀಡೊಳ್ಳಿನುದರದಿಂ ನಾಭಿ ತ್ರಿವಳಿ ರೇಖೆಯ ಇಂ।
ದಿರೆ ಅಪ್ಪಿಕೊಂಬ ಮಧ್ಯ ವಲ್ಲಿಕೆಯ ಕಂಡೆನಾ।
ಸರಿದೇವಿ ಸಿರಿವತ್ಸ ಕೊರಳ ಕೌಸ್ತುಭಹಾರ।
ಸರಸದಿಂದೋಲುವ ವಿಶಾಲುರುಸ್ಥಳವ ಕಂಡೆನಾ।
ಭರದಿ ಮಿಂಚುವ ಉರು ಸ್ಥಳವ ಕಂಡೆನಾ।

ಕರ ಚತುಷ್ಟದಲಿಪ್ಪ ಶಂಖ ಚಕ್ರಗದೆ ಪದ್ಮ।
ವರ ಅಭಯಗಳ ಕಂಡೆ ಕರ್ಣಕುಂಡಲ ಪ್ರಭೆಯ।
ತ್ರಿರೇಖಗಳಿಂದೊಪ್ಪುವ ಕಂಠ ಶಂಖದಂದದಿ।
ವರ ವೆಂಕಟೇಶ್ವರನ ಕಂಧರವ ಕಂಡೆನಾ।
ಉರಳುಗೂದಲು ಫಣೆಸಿಂಗಾಡಿಯಂತಿರ್ಪಪುಬ್ಬು
ಸರಸಿಜ ನಯನಸುಕಪೋಲಕರ್ಣನಂದದಿಗಲ್ಲಕುಂದ
ಫಲ್ಗಳು ಬಿಂಬಾ।
ಘನ ಮಂದಸ್ಮಿತವದನ ಚಂಪಕ ನಾಸಕ।
ಸ್ಫುರಿ ನಾಮಗಳಿಂದೆಸೆವ।
ಸಿರಿ ಮೊಗವ ಕಂಡೆನಾ ಸಿರಿಹಯವದನಾ।
ಸಿರಿಶೇಷಗಿರಿ ಅರಸನ ಕಿರೀಟವನೆ ಕಂಡು ಕೃತಾರ್ಥನಾದೆ। ೧

ಮಟ್ಟ ತಾಳ

ಇಂದಿನಾ ಶುಭದಿನಾ ಗೋವಿಂದನ ಕಂಡ ಕಾರಣಾ।
ಹಿಂದಣ ಪಾಪವು ಬೆಂದು ಹೋಯಿತ್ತೈ।
ತಂದೆ ಹಯವದನನ ಒಲಿಮೆಯಿಂದ ಇಂದಿನಾ ಶುಭದಿನಾ। ೨

ತ್ರಿವಿಡತಾಳ

ಪಾಪಕಂಜೆನೋನಾ ಸಂತಾಪಕಂಜೆನೋ ನಾನು।
ಆಪತ್ತಿಗಂಜೆ ಯಮನ ಬಾಧೆಗಂಜೆ।
ಶ್ರೀಪತಿ ಹಯವದನನ ಪಾದ ಪದುಮದ ನೆನವೆ ಇದ್ದರೆ ಸಾಕು।
ಆಪತ್ತಿಗಂಜೆ ಯಮನ ಬಾಧಿಗಂಜೆ ೩

ರೂಪಕ ತಾಳ

ಗುರು ಭಕ್ತಿ ಬೇಕು ಹಿರಿಯರ ಕರುಣವಿರಬೇಕು।
ಹರಿ ಕಥೆಗಳ ನಿತ್ಯ ಕೇಳುತಲೆ ಇರಬೇಕು।
ವಿರಕುತಿ ಬೇಕು ವಿಷ್ಣುನಾರಾಧನೆ ಬೇಕು।
ವರ ಮಂತ್ರ ಜಪಬೇಕು ತಪಬೇಕು ವರಕ್ತಿ ಸಾಧನಕೆ।
ಪರಿಪರಿಯ ವ್ರತ ಬೇಕು ಸಿರಿಹಯವದನನ್ನ।
ಪರಮಾನುಗ್ರಹಬೇಕು ವಿಷಯ ನಿಗ್ರಹಬೇಕು। ೪

ಝುಂಪತಾಳ

ಹರಿಸುಗುಣ ಸಾಕಾರ ಸಕಲ ಸುರರೊಡೆಯ ನಿ।
ಜರರೆಲ್ಲ ಹರಿಯ ಕಿಂಕರರೆಂದರಿಯಬೇಕು।
ಮರಣ ಜನನಾದಿದೋಷಕತಿದೂರನೆಂಬ ಈ।
ಸ್ಮರಣೆ ಸಂತತವೇಕು ದುರಾಚಾರ ಬಿಡಬೇಕು।
ಸಿರಿ ಹಯವದನ ಶ್ರೀ ಶೇಷಗಿರಿಯರಸನಾ।
ಸ್ಮರನೆ ಇದ್ದವನೆ ಸಂಸಾರಭಯ ಉತ್ತರಿಸುವ ೫

ಅಟ್ಟತಾಳ

ಗಾತ್ರವ ಬಳಲಿಸಿ ತೀರ್ಥಯಾತ್ರಾದಿ ಕೇಳುತ।
ಯಾತ್ರೆಯ ಮಾಡು ವೆಂಕಟಪತಿ ಮೂರ್ತಿಯ।
ನೇತ್ರದಿ ನೋಡು ರಾಮತೀರ್ಥನ ಕೊಡುವನ ನ।
ಭಕ್ತರ ಕಂಡು ಸರ್ವೋತ್ತಮನ ನಂಬಿ।
ಪೃಥ್ವಿ ಪೌಂಡ್ರಕನ ಪಾದವ ಮುಟ್ಟಿ ಕೆಡಬೇಡ।
ಚಿತ್ರವಿಚಿತ್ರ ಮಯಮಾನನ್ನು ನೀ ಪಾಲಿಸಿದರೆ ಸ್ತೂಲಿಸಿಕೊಳ।
ಯಾತ್ರೆಯ ಮಾಡು ವೆಂಕಟ ಮೂರ್ತಿಯ ೬

ತ್ರಿವಿಡಿತಾಳ

ಶ್ರೀನಾಥ ಪ್ರಭುವೆತ್ತ ಹೀನ ಯೋನಿಗಳೆಲ್ಲಿ।
ನಾನಾ ಕ್ಲೇಶಗಳುಂಬೋ ಹೀನ ಜೀವನವೆತ್ತ।
ಭಾನು ಮಂಡಲವೆತ್ತ ಶ್ವಾನಸ್ಫುರನೆತ್ತ।
ಮಾನವ ಹರಿಯು ತಾನೆಂಬೋದೆತ್ತ।
ದಾನವ ಕುಲ ವೈರಿ ಸಿರಿಹಯವದನನ್ನ।
ಶ್ರೀನಿವಾಸನ ದಾಸದಾಸನೆಂದೆನಿಸೋ ೭

ರೂಪಕತಾಳ

ಹನುಮಂತನ ನೋಡು ತನ ತನು।
ಮನಧನ ಹರಿಗೊಪ್ಪಿಸಿ।
ನೆನೆವ ಪ್ರಲ್ಹಾದನ್ನ ನೋಡು ತಪ ಮಾಡುವ।

ಮುನಿ ಜನರ ಕಂಡು ನಿನ್ನ ಯಮನದ ಭ್ರಾಂತಿಯ ಬಿಡು।
ಚಿನುಮಯ ಮೂರುತಿ ಹಯವದನನ ಪಾದ।
ವನಜ ಯುಗ್ಮವ ನಂಬೊ ಸಕಲ ಸುಖಕ್ಕೆಂಬೊ ೮

ಆದಿತಾಳ

ಕಲ್ಯಾಣವೀವ ನಮ್ಮ ಶ್ರೀ ವಲ್ಲಭನ ಸೇವಿಸಿ ಸಾ।
ವಿಲ್ಲದ ಮುಕ್ತಿಯ ಬೇಡಿಕೊಳ್ಳಿರೋ ಜನದಿಂದ ನೋ।
ವಿಲ್ಲದತಿ ಸುಖಿಸಲು ಬಲ್ಲಂಥ ಕೋವಿದರು ಸಿ।
ಲ್ಲಿ ಕ್ಷ್ಮಾಪನ ಬಿಟ್ಟು ದಾಸಿಗೆ ಪೋಗಲೇಕೆ।
ದಿಲ್ಲಿ ರಾಯನ ಕಂಡು ಪಲ್ಲಸು ಬೇಡುವದೇನೊ।
ವಲ್ಲಿಯೂ ತಪಸ್ಸು ಇದ್ದಲ್ಲಿ ಸಾಧಿಸಿಕೊಳ್ಳಿರೊ।
ಸೊಲ್ಲು ಕಲ್ಲು ಜಲ್ಲಿ ಸುದ್ದು ಬಾಂಧವರ ಕೋಟಿ ಲಕ್ಷ್ಮೀ।
ವಲ್ಲಭನಲ್ಲದೆ ಜೀವಿ ಪ್ರಕಾಶಿಸ್ಸಲು ಸ್ವಾ।
ಗೊಲ್ಲನರ್ಯಾ ಪೆಂಡೀರ ಚರಣ ವನೋದನ ಪಾದ।
ಪಲ್ಲವ ಸಂಪೊ ದಂಬಗೆ ಹೃದಯ ಶರಣೆಂಬುದಿ ಮು।
ತ್ತಲ್ಲಿಲ್ಲೇನು ಫಲವಿಲ್ಲ ೯

ಜತೆ

ತಿರುಮಲ ರಾಯನ ತ್ರಿವಿಕ್ರಮರಾಯನ।
ಸಿರಿ ಹಯವದನನ್ನ ಬರಬೇಗ ನೆನೆಯನ್ನ ೧೦

ಸುಳಾದಿ ೬

ಐತಿಹಾಸಿಕ ರಾಮಾಯಣ ಸಂಗ್ರಹಕಥಾ, ಶ್ರೀರಾಮ ಮಹಿಮಾ

ರಾಗ ಕಲ್ಯಾಣ ಧ್ರುವತಾಳ

ದಶರಥ ನಂದನ ಋಷಿಯಾಗ ಸಂರಕ್ಷಣ।
ಶಶಿ ಮುಖಿ ಶಾಪ ವಿಮೋಚನ।
ಪಶು ಪತಿ ಧನು ಭಂಜನ।
ಬಿಸಿಜನೇತ್ರ ಜಾನಕಿ ಕುಶಲ ಮನೋರಂಜನ ಪ।

ರುಶರಾಮ ಗರ್ವನಾಶ ಅಸುರ ಸಂಹಾರಕ।
ದಶರಥಾಜ್ಞಾಧಾಂಕ ದಶ ಶಿರೋಭಗಿನಿ ಶಿಕ್ಷಕ।
ರಸಿಕ ಸುಗ್ರೀವ ಪೋಷಣ ರೌದ್ರವತಿ ನಿಗ್ರಹಣ।
ಅಸಮ ಸೇತು ಬಂಧನ ಅರಿಮದ ಖಂಡನ।
ಶಶಿಸಿಕರ ಲಾವಣ್ಯ ಶ್ರೀಮುದ್ದು ಹಯವದನ ೧

ಮಟ್ಟತಾಳ

ಲಂಕಾನಗರ ಪರಿಸ್ತರಣ ವಾಲಸ್ಯಗ್ರ್ಯಯದೆ ಮಾಡಿದ ಹನುಮ।
ಪುಂಕರಿಪ ಕುಂಭಕರ್ನನ ಹೊಡೆದು ಕೆಡುಹಿದಂಥ ಜಾಣ ಸಿ।
ಶ್ಂಕ ಮುದ್ದು ಹಯವದನ ಶರಣುಹೊಕ್ಕೆ ಕಾಯೊ ಎನ್ನ ೨

ತ್ರಿವಿಡಿತಾಳ

ದಶ ಶಿರ ಛೇದನ ಧರಣಿ ಭಯ ಹರಣ।
ಕುಶಲಗಂಧಿನಿ ಗ್ರಹಣ ಕೋಪಿದ ಭರತ ಪ್ರಾಣ।
ನಿಶಿಚರ ವಿಭೀಷಣಾರಿಷ್ಟ ಪರಿಹರಣ।
ಶಶಿ ಮಂಡಲ ಭೂಷಣ ಶ್ರೀಮುದ್ದು ಹಯವದನ ೩

ಅಟ್ಟತಾಳ

ಅಯೋಧ್ಯಪುರಿಗಾಗತ ಅನುಜ ಮುನಿಸ್ತೋಮ ಗೀತ।
ಪ್ರಿಯ ಪಟ್ಟಾಭಿಷೇಕಿತ ಪತಿ ಸೀತಾ ಸಮೇತ।
ಶ್ರೀ ಪವನಸುತಪಾಲ ಶ್ರೀವೇದಗೀತ ಲೋಲ।
ಭಯಹರ ಹಯವದನ ಭಕ್ತ ಜನಮೋಹನ ೪

ಆದಿತಾಳ

ಭೂದೇವ ಮನೋಹರ ಭೂಷಿತ ಪ್ರಿಯಕರ
ಸಾಧು ಬೋಧಾನಂದ ಸಜ್ಜನಾನಂದ।
ವಾದಿ ರಾಜಗೊಲಿದ ಸೋಮನಿಸ್ಸೀಮ।
ಮೋದಿತ ಬುಧ ಜನ ಮುದ್ದು ಹಯವದನ ೫

ಜತೆ

ಮುದ್ದು ಹಯವದನದೇವ ಮಾಮವ ಸರ್ವಾ।
ರಾಧ್ಯ ಶ್ರೀರಾಘವ ರಾಜಾಧಿರಾಜ ೬

ಸುಳಾದಿ ೭ ಸ್ತೋತ್ರ ಭಾಗ

ರಾಗ ಧ್ರುವತಾಳ

ಕಲ್ಕಿಯಾಗಿ ತುರಗವನೇರಿ। ಖಳರ ಕಟಕವನ್ನೊಕ್ಕು ಹಿಂಭಾಗದ
ಮೂರ್ಖರ ಶಿಕ್ಷಿಪೆನೆಂದು। ಸೊಕ್ಕು ಮುರಿವದಕ್ಕೆ ಭೂಚಕ್ರಗಳು॥
ವಕ್ರದಿಂದ ಲೆಖ್ಖವಿಲ್ಲದೆ ಗಣವ। ಲೆಕ್ಕಿಸದವನ ಜೀವ।
ಐಕ್ಯವ ಪೇಳ್ವವನ್ನ ತಮುಕ್ಕ ನೂಕಬೇಕೆಂದು।
ಉಕ್ಕು ತಗ್ಗಿಸುವದಕ್ಕೆ ಚಿನ್ನಾದ್ಯರೊಡನೆ ಜಯುವ।
ಇಕ್ಕೆಲದಲ್ಲಿಟ್ಟುಕೊಂಡ ರಕ್ಕಸ ರಕ್ಕಸಾ ವೈರಿ ಲಕ್ಷ್ಮೀಪ್ರಿಯ।
ರಕ್ಷೆಯಾಗಿ ಪಶ್ಯಮುದನಾ ಜಯುವ ಪಕ್ಕದಿ।
ಸಕ್ಕಿಸಿದ ಪರಾಕ್ರಮ ಸಿರಿ ಹಯುವದನ ೧

ಮಟ್ಟ ತಾಳ

ಕಟ್ಟಿದ ಹೊನ್ನ ಕಠಾರಿಯ ನೋಡು।
ಮೆಟ್ಟಿದರನ್ನ ಧಾವಿಗೆ ನೋಡು।
ತೊಟ್ಟಿಹ ಕನಕ ಕವಚವ ನೋಡು ಹತ್ತಿ।
ಲಿಟ್ಟಿಹ ಖರಾ ಚೂರಿಯ ಕಾಂತಿಯ ನೋಡು।
ದುಷ್ಟರ ತರಿವಾತ ನಿಷ್ಟರ ಪೊರೆವ ಜಗ।
ಜಟ್ಟಿಯು ನಮ್ಮ ಧಿಟ್ಟಹಯುವದನಾ ೨

ರೂಪಕ ತಾಳ

ಹಂಸರನೊಹಿಸಿದ ಹಂಸಾಡಿಬಿಕರ।
ಹಿಂಶೆಯ ಮಾಡುವನಿವ ವೈರಿ ಕೋಲಾ(ಹಲಾ)ವರಾಲಾ।
ಅಂಶಿ ಅಂಶನ್ನ ಜರಾಸಂಧ ತಂದ ವಿ।
ಕ್ಷಾಂಸ ವಿನೋದಿ ಸುರ ನಿಃಶಂಕ ಹಂಸವಾದಿನ್ನ ಗುರು।
ಹಯುವದನಖಳ।
ರಂಶ ಕುಠಾರಿ ಎಂಬೊ ಬಿರಿದು ಮೆರದಾ। ೩

ಝುಂಪೆ ತಾಳ

ಆವನ್ನ ಪೊಟ್ಟೆಲೋರ ಮಯನೆಂಬೊ।
ಜೀವನ್ನಗುಟ್ಲು ಕೆಡಿಸಿತು ನೋಡಾ ಆ।
ಭವನಟ್ಲ ಬಂದ ಭಸ್ಮಾಸುರನ್ನ।
ಜೀವವೆ ಕೊಂದಿತು ಇವನ ಮುದ್ದು ನೋಡಾ।
ಆವನ್ನ ಬೆರಳುಗಳ ವೃಷ್ಟಾನ್ನವನಿತ್ತು।
ಆವನಂಘ್ರಿಯ ರೇಣು ಶಿಲಿಯನ್ನ ಬಾಲಿಯ ಮಾಡಿತು।
ಆವನುದರುದ್ದ ದೊಪರಗಳಿವ ಮುಂದವು।
ಆವನೆದೆ ಭಗದತ್ತನ್ನ ಆಯುಧವ ತಾಳಿತು।
ಆವ ಸಿರಿ ಹಯವದನ ಶ್ರೀಕೃಷ್ಣನ್ನ ಪು।
ಟ್ಟವದನವೆ ಪೂಥಣಿಯ ಕೊಂದಿತು. ೬

ತ್ರಿವಿಡಿ ತಾಳ

ಒಂದು ಕರವು ಮಧುವ ಮರ್ದಿಸಿತು ಮ।
ತ್ತೊಂದು ಕರವು ಕೈಟಭನ್ನ
ಚಂದದಿ ಪಿರ್ಮೊಡೆಯಲ್ಲಿಟ್ಟು ಪುಡಿಪುಡಿ ಮಾಡಿಕೊಂಡಿತು।
ಒಂದು ಕರವು ಕಂಸನ್ನ ಕೇಶಿಕೊಂದು ಗಜವ ಕೆಡಹಿತು ಮ।
ತ್ತೊಂದು ಕರವು ಕಲ್ಪತರುವ ಕಿತ್ತಿಪುರಕೆ ತಂದಿತು।
ಒಂದು ಪಾದ ಶಕಟನೆಂಬ ದೈತ್ಯನೊದಯಿತು ಮ।
ತ್ತೊಂದು ಪಾದ ತಾಳೆ ಮರಗಳಖಳರ ಸೊಕ್ಕು ಮುರುಹಿತು।
ಒಂದು ಪಾದ ವಾದಿರಾಜರ ಚಂದದಲ್ಲಿದ್ದು ಪದವಿಯ।
ದೊಂದುಗ ನುಣಿಸುವ ಭೂತವೃಂದ ಶಕ್ತಿಯ ಕುಂದಿಸಿತು।
ಒಂದೊಂದು ರೋಮಗಳು ಕೂಪಲೋಕಂಗಳು ಬೆಳಗಿಸಿಕೊಂಡಿತು
ಒಂದು ಕೂದಲು ಭೂಭಾರವನ್ನೆ ಕುಂದಿಸಿತು ಹಯವದನ। ೭

ಅಟ್ಟ ತಾಳ

ಆದಂತಿರಲು ಒಬ್ಬ ಈ ಬೆನ್ನು ಮಂದರವ ನೆತ್ತಿ।
ತ್ರಿದಶರಿಗೆ ಸುಧೆಯನುಣಿಸೆ ದಣಿಸಿತು।

ವಿಷಯ ಜೀವನ ಕೋಶ ಎನಿಪ ಬ್ರಹ್ಮಾಂಡ ಮತ್ತಾ।
ಮುದದಿಂ ದೊರಕದಿಂದ ಜೀವನ ಬೆನ್ನು।
ಮುದ್ದು ಮಯ ನಮ್ಮ ಗುರುಹಯವದನನಿಗೆ ಆ।
ಯುಧದಹಂಗುಂಟೆನೊ ವಿಚಾರಿಸಿ ನೋಡಿರೊ ೬

ಆದಿ ತಾಳ

ಕುಂಜರ ಮೊರೆ ಇಡೆ ಬಂದೊದಗಿದ ನಿವ।
ಕಂಜಾಕ್ಷಿ ಕರಿಯ ಅಕ್ಷಯಾಂಬರವ ಇತ್ತವನಿವ।
ಸಂಜೆಯ ತೋರಿಸಿ ಧನಂಜಯನ ಕಾಯ್ದವ ನಿವ।
ಅಂಜಿದ ಪ್ರಲ್ಹಾದಗ ಭಯವನಿತ್ತವನಿವ।
ನಂಜುಂಡನಾಗಿಯಿದ್ದ ಸಿರಿಹಯವದನ ಭಕ್ತವಜ್ರ।
ಪಂಜರನೆಂಬ ಬಿರಿದು ತಪ್ಪದೆ ನಂಬಿಕೊಳ್ಳಿರೊ ೭

ಏಕತಾಳ

ಆದಿಕಾಲದಲಿ ಅಬ್ಜಭವನನಿತ್ತವನಿವ।
ಮೇದಿನಿಗಾಗಿ ಬಂದಖಳರ ಕೊಂದವನಿವ।
ಕಾದಿಸಿ ಕೌರವರ ಕುಲವ ತರಿದವನಿವ।
ಆದಿವ್ಯಾಧಿಗಳ ಬಿಡಿಸಿ ಮುಕ್ತಿಯನೀವ।
ದಾರಿಯ ತೋರಿದ ಸಿರಿ ಹಯವದನ ೮

ಜತೆ

ಸಿರಿದೇವಿ ಅರಸ ಹಯವದನನೆನಬೇಕು ಬೇಕು।
ಈ ದೇವನಲ್ಲದೆ ಇನ್ನೊಂದು ದೈವವೆ ಸಾಕುಸಾಕು ೯

ಸುಳಾದಿ ೮

ಮತ್ಸ್ಯಾದಿ ದಶ-ಅನಂತಾವತಾರ ಮಹಿಮಾವರಿತು ಸಾಧನ ಮಾಡು

ರಾಗ ವರಾಳಿ **ಧ್ರುವತಾಳ**

ಹರಿ ನಿನ್ನ ಜ್ಞಾನ ಸಿರಿಗೆಣೆಗಾಣೆ ಮತ್ಸ್ಯನಾವ।
ತಾರದಿ ಶೃತಿಗಳ ವಿಧಿಗೆ ಪೇಳಿದೇಯಾಗಿ।

ಹರಿ ನಿನ್ನ ಶಕುತಿಗೆ ಎಣೆಗಾಣೆ ಜಾಂಡ ಮಂ।
ದರಗಳ ಬೆನ್ನಿಲಿ ಧರಿಸಿ ಮೆರದೆಯಾಗಿ।
ಹರಿ ನಿನ್ನ ಕರುಣಕ್ಕೆ ಎಣೆಗಾಣೆ ವರಹವ।
ತಾರದಿ ದಾಡಿಯಲ್ಲಿ ಧಾರುಣಿಯನೆಗಹಿದೆಯಾಗಿ।
ಹರಿ ನಿನ್ನ ಶೂರತ್ವಕ್ಕೆಣೆಗಾಣೆ ಹಿರಣ್ಯಕನುದರವಬಗದಿ।
ನರಹರಿ ನೀ ಮೆರದೆಯಾಗಿ।
ಹರಿ ನಿನ್ನ ಯುಕುತಿಗೆ ಎಣೆಗಾಣೆ ವಟುವಾಗಿ।
ಚರಣದಿ ಮೂಲೋಕಗಳ ಅಳದೆಯಾಗಿ।
ಹರಿ ನಿನ್ನ ಉದಾರತ್ವಕ್ಕೆಣೆಗಾಣೆ ಮಹಿಯ ವಿ
ಸ್ತರದ ದ್ವೀಪಗಳ ಭೂಸುರರಿಗೆ ಇತ್ತೆಯಾಗಿ।
ಹರಿ ನಿನ್ನ ವೈರಾಗ್ಯ ಭಾಗ್ಯಕ್ಕೆಣೆಗಾಣೆ।
ಅರಸತ್ವ ತೊರೆದು ಅರಣ್ಯಕ್ಕೆ ಪೋದೆಯಾಗಿ।
ಹರಿ ನಿನ್ನ ಲೀಲೆಗೆ ಎಣೆಗಾಣೆನೋ ಮಹಾ।
ಧುರ ದೊಳು ಕಲಿಪಾರ್ಥನ ಸಲಹಿದೆಯಾಗಿ।
ಹರಿ ನಿನ್ನ ಮಾಯಕ್ಕೆ ಎಣೆಗಾಣೆನೊ ಮು।
ಪ್ಪುರದ ಸತಿಯರ ವ್ರತವ ಕೆಡಿಸಿದೆಯಾಗಿ।
ಹರಿಹಯವದನನೆ ಕಲಿಖಂಡನೆಂಬ।
ಬಿರಿದು ತೋರಿಪೆ ಕಲ್ಕಿಯಾಗಿ ಬಲ್ಲವರಿಗೆ ೧

ಮಟ್ಟತಾಳ

ಅಸುರರ ಮುಂದೆ ಸುರರನ ಪೊರಿದೆ।
ಶಶಿಮುಖಿ ದ್ರೌಪದಿ ಗಕ್ಷಯಂಬರವನಿತ್ತು ಮೆರದೆ।
ಅಸಮ ರಕ್ಕಸಿಯ ಕಿಂವಿ ಮೂಗುತರಿದೆ।
ಸು ಶರಣರಲ್ಲದೆ ಅನ್ಯರನೊಲ್ಲೆ।
ಪೊಸ ಬಗೆಯ ಶಿರಿಹಯವದನನೆ ಇಂಥ।
ಅಸಮ ಮಹಿಮನೆಂಬ ಪೆಸರು ಧರಿಸಿಕೊಂಡೆ ೨

ತ್ರಿವಿಡಿತಾಳ

ಸುಧಿಯ ಸಾಧಿಸಿ ತ್ರಿದಶರಿಗಿತ್ತು ಪೊರೆದೆ ಮ।
ತ್ತದ ಕೊದಗಿದ ದಾನವರ ಮರ್ದಿಸಿದೆ।
ಇದೆ ಸಾಕ್ಷಿ ಯಲ್ಲವೆ ನೋಡಲು ಬುಧಜನರು।
ಕದನ ಕರ್ಕಶನೆಂಬ ಬಿರಿದು ತೋರಿದೆ ಜಗಕೆ।
ಮಧು ವೈರಿ ಸಿರಿ ಹಯವದನ ದೇವೋತ್ತಮ।
ಮದ ವಿಲ್ಲದವರ ಎಂದೆಂದು ಪೊರೆವನು।
ಮಧಾಂಧರನ ಎಂದೆಂದು ಮರ್ದಿಸುವನು ೩

ಝಂಪಿ ತಾಳ

ಸಾತ್ವಿಕರಿಗೆ ಊರ್ಧ್ವ ಲೋಕವ ಮಾಡಿದ ನೋಡಿರೊ।
ಮರ್ತ್ಯರಿಗೆ ಸ್ವರ್ಗ ಭೂನರ್ಕ ಮಾಡಿದ ನೋಡಿರೊ।
ವ್ರಾತ್ಯ ಜನರಿಗೆ ದುರ್ಗತಿಯ ಮಾಡಿದ ನೋಡಿರೊ।
ಸತ್ಯ ಸಂಕಲ್ಪ ಹಯವದನ ಎಲ್ಲರಿಗೆ ಸಮ।
ಮತ್ಯ ಸಮನೆಂತೆಂಬ ನರರಿಗೆ ನಂಬೀ ೪

ತ್ರಿವಿಡಿ ತಾಳ

ಆದರಿಂದ ದುರ್ಮಾರ್ಗದಲ್ಲಿ ನಡೆಯ ಬಾರದು।
ಮದಿರಾಕ್ಷಿಯರ ಮೆಚ್ಚಿ ಮರುಳಾಗಬಾರದು।
ಅಧಮ ದುರ್ಮತಗಳ ಮನಕೆತರಬಾರದು।
ಪದುಮನಾಭನ ಒಮ್ಮೆ ಮರೆದಿರಲಾಗದು।
ಸುದರ್ಶನ ಧರ ಸಿರಿಹಯವದನನ ಪಾದ।
ಪದುಮ ತೋರಿದ ಗುರು ಮಧ್ವರಾಯನಂಬೊ ೫

ಅಟ್ಟ ತಾಳ

ಆರಾಧನ ನೀರಾಂಜನವೆತ್ತಿ ನಮ್ಮ।
ನಾರಾಯಣಗೆ ನಾನಾ ವಿಧವಾದ।
ಭೂರಿ ನೈವೇದ್ಯಗಳಿಟ್ಟು ಪೂಜಿಸಿ ಅವ।
ನಾರೋಗಣೆಯ ಶೇಷ ಭುಂಜಿಸಿ ಸುಖಿಸು ನೀ।

ಶ್ರೀ ರಮಣ ಹಯವದನನ ಚರಿತೆಯ।
ಓರಂತೆ ತುತಿಸಿ ಹಿಗ್ಗುತಲಿರು ಮನದಲ್ಲಿ।
ತಾರತಮ್ಯವರಿತು ಸಾರು ಸುರರ ೬

ಆದಿ ತಾಳ

ಪರಮ ವೈಷ್ಣವ ಗುರುಗಳ ಪಾದಕ್ಕೆರಗು ನೀ।
ಪುರಾಣ ಶಾಸ್ತ್ರಂಗಳ ನಿರುತ ಕೇಳುತಲಿರು।
ಹರಿ ಪರ ದೇವತಿ ಎಂಬ ಜ್ಞಾನವಿಸ್ತರಿಸುತ।
ಧರಿಯೊಳು ಚರಿಸುತಲಿರು ಜೀವ।
ಪರಮ ಕರುಣಿ ಸಿರಿ ಹಯವದನ ಈ।
ಪರಿಯಲಿ ಸ್ಮರಿಸಲು ಪೊರೆವ ಸಂದೇಹವಿಲ್ಲ ೭

ಜತೆ

ಸಾಕು ಸಾಕು ಸಂಸಾರ ಸಂಕಟಗಳನೆಲ್ಲ।
ನೂಕು ನೂಕು ಹಯವದನನ ಪೊಲಿಮೆಯಿಂದ ೮

ಸುಳಾದಿ ೯ ವೈರಾಗ್ಯಭಾಗ್ಯ

ರಾಗ ಗೌಳಿ ಧ್ರುವತಾಳ

ಬಲು ಚರ್ಮ ಚೀಲಾದೊಳಗೆ ರಕ್ತ ಮಲಮೂತ್ರ।
ಯಲು ಜಂತುಗಳನು ತುಂಬಿಸಿ ತನ್ಮಧ್ಯ।
ದೊಳು ಮತ್ತು ಮಾಂಸ ಚೀಲವನೊಂದು ನಿರ್ಮಿಸಿ।
ಪೊಲೆಯ ಮೇಲಣ ಶುಕ್ಲ ಶೋಣಿತದೀ।
ಮುಳುಗಿಸಿ ತಂದಿರೆ ದಶಮಾಸ ಪರಿಯಂತ।
ಎಲೆ ಜೀವಾ ಬಹಳ ಕ್ಲೇಶಗಳನುಂಬಿ ನೀನು।
ಇಳಿಗೆ ಬಂದು ಬಾಲಕನಾಗಿ ಮತ್ತು ತೊ।
ಟ್ಟಿಲೊಳು ಪೊರಳಿ ಮಲಮೂತ್ರದಲ್ಲಿ।
ಅಳುವೆ ಹಸುತೃಷಿಯಾದರೆ ಪೇಳಲರಿಯದೆ।
ಬಳಲಿದೆ ನಾನಾ ಜನ್ಮಗಳಲ್ಲಿ ಇನಿತೊ।

ಹುಲಿ ಪಕ್ಷಿ ಶ್ವಾನ ಸೂಕರ ಯೋನಿಯಲಿ ಬಂದು।
ಕೊಲೆಗೊಳಗಾದೆ ಶ್ರೀ ಹಯವದನನ ಮರೆದೆ ೧

ಮಟ್ಟತಾಳ

ವೇದ ಶಾಸ್ತ್ರಂಗಳನೋದಿ ವಾದಿಸುವೆನೋ ವೃತ್ತಿ ಕ್ಷೇತ್ರಕ್ಕಾಗಿ।
ಕ್ರೋಧಿ ನೃಪರ ವಾಲೈಸಿ ನೊಂದೆ।
ಸ್ತ್ರೀಧನಾದಿಗಳಿಗಾಗಿ ಕೊಡುವೆ।
ಹಾದಿಯು ವಿಚಾರಿ ನಡಿವೆ।
ಕ್ರೋಧಿ ನೃಪರ ವಾಲೈಸಿ ನೊಂದೆ। ೨
ಸಾಧಿಸುವೆನೋ ಪಾಪರಾಶಿಗಳನು।
ಸಾಧು ಸೇವ್ಯ ಹಯವದನನಾನೊಲ್ಲೆ।
ಕ್ರೋಧಿ ನೃಪರ ವಾಲೈಸಿ ನೊಂದೆ ೨

ಅಟ್ಟತಾಳ

ಧರ್ಮಕರ್ಮಗಳನು ಡಂಭದಿ ಹೆಮ್ಮೆಗಾಗಿ ಮಾಡಿ ಬಳಲುವೆ।
ನಿರ್ಮಲಾತ್ಮರ ನಗುವೇ ನಿಂದಿಪೆ।
ಬೊಮ್ಮರಕ್ಕಸನಪ್ಪೆ ತುದಿಯಲಿ।
ನಿರ್ಮಲಾತ್ಮರ ಜಗುವೆನುಡುವೆ।
ಚಿನ್ಮಯ ಶ್ರೀಹಯವದನನ।
ಒಮ್ಮೆಗಾದರೊಮ್ಮೆ ನೆನಿಯೆ।
ನಿರ್ಮಲಾತ್ಮರ ನಗುವೆ ನಿಂದಿಪೇ ೩

ರೂಪಕ ತಾಳ

ನಾನಾ ನರಕಯಾತನಿಗೆ ಗುರಿಯಾದೆ।
ಹೀನಂಥ ತಮಸಿನ ಕ್ಲೇಶವ ನೆನೆದುಕೋ।
ಮಾನವ ಜನುಮವ ಬದೆ ಪೋಗಾಡವೆ।
ಶ್ವಾನಾದಿ ಸಾಧಾರಣ ದೇಹಕ್ಕಿಕ್ಕದೇ।
ಮಾನವ ಜನುಮ ಬರಿದೆ ಪೋಗಾಡದೆ।
ಶ್ರೀನಾಥ ಹಯವದನನಂಘ್ರಿ ಒಲಿಮೆಯುಂಪ

ಜ್ಞಾನನಿಧಿಯೊಳಿಪ್ಪ ಸುಜನರ ಮೊರೆಯೊಗದೆ।
ಮಾನವ ಜನುಮುವ ಬರಿದೆ ಪೋಗಾಡದೆ ೪

ಝಂಪೆ ತಾಳ

ಮದಮತ್ಸರದಿನೊಂದು ಕೆಲವು ಕಾಲವು ಕಳದೆ।
ಕುದಿವೆ ಕಾಮ ಕ್ರೋಧ ವಿಷಯ ಲಂಪಟನಾಗಿ।
ಅಧಮನಾಗಿ ಪರರ ಬೇಡಿ ಬೇಸರಿಸುವೆ।
ಸದನ ಸಂಪದವಿಗೆ ಬಳಲುವೆ ಒಮ್ಮೊಮ್ಮೆ।
ಅಧಮನಾಗಿ ಪರರ ಬೇಡಿ ಬೇಸರಿಸುವೆ।
ಆದರೊಳಗು ಬಹು ವ್ಯಾಧಿಯುಳ್ಳಿ ಸಂಕಟ ಗೊಂಬೆ।
ಪದುಮನಾಭ ಹಯವದನ ಪಾದವನಂಬಿ।
ಅಧಮನಾಗಿ ಪರರ ಬೇಡಿ ಬೇಸರಿಸುವೆ।

ವಿಳಂಬಟ್ಟಿತಾಳ (ಅಟ್ಟ)

ಅನಶನಾಶನಂಗಳ ಸರಿ ಎಂಬ ಜನರರಿಗೆ।
ದಿನದಿನದಿ ಮಾಡುವ ವ್ರತ ವೃಥಾಯಪ್ಪೋಯಿತು।
ಅನಳನು ತುಹಿನವು ಒಂದಾದದುಂಟೆ।
ಘನ ಮಹಿಮ ಮುಕುಂದ ಅಣು ಜೀವನೆಂತಾಹ।
ಅನಳನು ತುಹಿನವು ಒಂದಾದದುಂಟೆ।
ಮನದಿ ತದ್ಭೃತ್ಯಭೃತ್ಯರ ಭೃತ್ಯನೆನ್ನದೆ।
ಮನುಜಾಧಮರು ಹಯವದನ ತಾನೆಂಬರೊ

ತ್ರಿವಿಡಿತಾಳ

ಬಿಸಿಲು ಚಳಿಯಿಂ ಬೇಸರು ವೈಹಸು।
ತೃಷುಗಳಿಂದಲಿ ಹರುಷಗುಂದುವೆ।
ಯಶೋ ಹಾನಿಯ ಮಾಡುವೆ ನಿಂ।
ದಿಸುವ ಮಾನವರೊಶಕೆ ಸಿಲುಕುವೆ।
ಯಶೋ ಹಾನಿಯ ಮಾಡುವೆ।
ಆಸುರ ಭೂತಂಗಳನು ಪೂಜಿಪೆ

ಪ್ರಸನ್ನ ಹಯವದನನರ್ಚಿಸೆ।
ಯಶೋಹಾನಿಯ ಮಾಡುವೆ। ೭

ಆದಿತಾಳ

ಇಂತು ಭವವೆಂಬ ಫಣಿಸಗೆ ಮಾ।
ಹಂತರ ಸಂಗ ಜನಿತ ವೈರಾಗ್ಯವೆ
ಮಂತ್ರರಾಜ ಜಗದೊಳು ಮಂತ್ರರಾಜ।
ಸಂತರ ಚರಣ ಕಮಲ ಸೇವೆ ಔಷಧ
ಮಂತ್ರರಾಜ ಜಗದೊಳು ಮಂತ್ರ ರಾಜ।
ಸಂತತ ಗರುಡ ವಾಹನ ಶ್ರೀ ಹಯವದನ ಶ್ರೀ।
ಕಾಂತ ನಂಘ್ರಿ ಸೇವಿಯೋ ಗರುಡಾಯುಧ।
ಮಂತ್ರರಾಜ ಜಗದೊಳು ಮಂತ್ರ ರಾಜಾ ೮

ಜತೆ

ವೈರಾಗ್ಯ ಭಾಗ್ಯವೆ ಇತ್ತೆನ್ನ ಸಲಹೊ ಸ।
ರ್ವಾರಾಧ್ಯ ನಿರವದ್ಯ ಹಯವದನ ಸ್ವಾಮಿ। ೯

ಸುಳಾದಿ ೧೦

ಶ್ರೀ ಹರಿಪಾದ ನೆರೆನಂಬಿ ಬಾಳ್ವದೇ ಮುಖ್ಯ ಸಾಧನ

ರಾಗ **ಧ್ರುವ ತಾಳ**

ಹರಿಪಾದ ನೆನೆವಂಗೆ ಅರಿಗಳ ಭಯವಿಲ್ಲ।
ಹರಿಪಾದ ನೆನೆವಂಗೆ ದುರಿತ ಭಯವಿಲ್ಲ।
ಹರಿಪಾದ ನೆನೆವಂಗೆ ನರಕದ ಭಯವಿಲ್ಲ
ಹರಿಪಾದ ನೆನೆವಂಗೆ ಮಾಯಾದ ಭಯವಿಲ್ಲ
ಹರಿಪಾದ ನೆನೆವಂಗೆ ಭವದ ಭಯವಿಲ್ಲ
ಹರಿಪಾದ ನೆನೆವಂಗೆ ವಿಷಯ ಭಯವಿಲ್ಲ
ಹರಿಪಾದ ನೆನೆವಂಗೆ ಜನನ ಭಯವಿಲ್ಲ
ಹರಿಪಾದ ನೆನೆವಂಗೆ ಮರಣದ ಭಯವಿಲ್ಲ।

ಒರಿದೆ ಮಾತೇ ಇಲ್ಲ ಸಿರಿಹಯವದನನ್ನ।
ಕರದು ಮುಕ್ತಿಯ ನಿತ್ತು ಅನುಗಾಲಸಲಹುವ ೧

ಮಟ್ಟ ತಾಳ

ಆವ ಧ್ರುವನ ನೋಡಿ ಸುರಲೋಕದಲಿ।
ಭೂ ವಿಭೀಷಣನ ನೋಡಿರಯ್ಯಾ।
ಅವನಿ ಕೆಳಗೆ ಬಲಿಯುತ್ಸವ ನೋಡಿ।
ಈ ಹಯವದನನ್ನ ಭಜಕರೆ ಸಾಕ್ಷಿ ೨

ತ್ರಿವಿಡಿತಾಳ

ಹತ್ತಾವ ತೆರದಿ ಭಕುತರ ಭಯವೆಲ್ಲ।
ಕಿತ್ತಿ ಭಕುತರ ಕಾಯ್ವ ಕಥೆಯ ಕೇಳಿರಯ್ಯಾ।
ಪುತ್ತಾರು ತೋರಿರ್ಕೈ ಭೃತ್ಯರೆಂಬಸುಗಳಿಗೆ।
ಹೆತ್ತ ತಾಯಿ ಎಂಬ ವಾರುತಿ ಕೇಳಯ್ಯಾ।
ಕರ್ತು ಹಯವದನನು ಭವವೆಂಬ ಕತ್ತಲೆ।
ಬತ್ತಿಪ ರವಿಯೆಂದು ಚಿತ್ತದಲೆನೆರೆನಂಬೂ ೩

ಅಟ್ಟತಾಳ

ದ್ರೌಪದಿ ಭಯವ ಪರಿಹರಿ ಸಿದರಾರ್ಕೈ।
ಆ ಪರಿಕ್ಷಿತನ ರಕ್ಷಿಸಿದವನಾರ್ಕೈ।
ತಾಪಸ ರೊಡಿಯ ಶ್ರೀಪತಿ ಹಯವದನನು।
ತಾಪಂಗಳನು ಕಳೆದು ತರ್ಕೈಸಿಕೊಂಬ ೪

ಆದಿ ತಾಳ

ಕರಿಯ ಕಾಯ್ದವನ ಪಾದವ ನಂಬು।
ಗಿರಿಯ ಯೆತ್ತಿದವನ ಪಾದವ ನಂಬು।
ಉರಿಯ ನುಂಗಿದವನ ಪಾದವನನಂಬು।
ಪುರಹರ ನುಳುಹಿದವನ ನೆರೆ ನಂಬು ಕರಿ।
ಸಿರಿ ಹಯವದನನ್ನ ಶರಣರಿಗೆ ಭಯವಿಲ್ಲ ೫

ಜತೆ

ಶ್ರೀ ರಮಣ ಹಯವದನನ್ನ ನಂಬಿಪ!
ಸಾರಾ ಹೃದಯಾರಚರಣ ಸೇವೆ ಮಾಳ್ಪದೆ ಸಾಕ್ಷಿ ೬

ಸುಳಾದಿ ೧೧.

ರಾಗ ಧ್ರುವ ತಾಳ

ಕಾಲು ತೊಳೆದವನೊಬ್ಬ ತೊಳಸಿಕೊಂಡವನೊಬ್ಬ।
ಮೌಳಿಯ ಮೇಲಾ ಜಲವ ಸತತ ಧರಿಸಿದನೊಬ್ಬ।
ಪಾಲಿಸುವ ಪ್ರಭು ಒಬ್ಬ ಕೊಲುವ ತಳವಾರನೊಬ್ಬ।
ಮೂಲೋಕ ದೊಡೆಯ ಪುಟ್ಟಿಸಿದ ಪಿತನೊಬ್ಬ।
ಆಲೋಚನೆಯಾ ಬಲ್ಲವರಿಗೆ ಸಂಶಯ ಸಲ್ಲ।
ಮಾಲೆಯನು ಮಹಾಲಕ್ಷ್ಮಿ ಹಯವದನ ಗಿತ್ತಳಾಗಿ ೧

ಮಟ್ಟತಾಳ

ರಾವಣನ ಕೊಂದ ಪಾಪವ ಕಳೆಯಬೇಕೆಂದು।
ದೇವ ರಘುಪತಿಯು ಸದಾಶಿವನ ಪೂಜಿಸಿದಗಡ।
ಅವಿಧಿಯ ನೊಂದು ತಲೆಯನು ಕಡೆದ ಮಾತ್ರದಲಿ।
ಆವಾಗ ಕರದಲಿಹ ಕಪಾಲವ ಕಾಣಾನೆ।
ಆವರೊಳು ಪೊಗಹಳುವ ದಾವಾತ ಭಜಿಸುವನೆ।
ಜೀವರಿಗುಳ್ಳಷ್ಟು ವಿವೇಕ ಹಯವದನಿಗಿಲ್ಲವೆ ೨

ತ್ರಿವಿಡಿ ತಾಳ

ರಾಮಾಯಣದ ಕಥೆಯು ಮಹಾಪುಣ್ಯ ಕಥೆಯು ಗಡ।
ರಾಮ ರಾವಣನ ಕೊಂದದು ಮಹಾಪಾಪಗಡ।
ಆ ಮನು ಮುನಿಗಳೆಲ್ಲ ಪಾಪ ಕಂಘಟಿಸಿದರೆ।
ಸ್ವಾಮಿಗೆ ಲಯಾ ಬೊಮ್ಮನ ಮೊದಲು ಕೊಲಿಸನೆ।
ಧೀಮಂತ ಹಯವದನ ಕೊಂದ ಹಿರಣ್ಯಕ ಮುಖ್ಯ।
ತಾಮಸದಿತಿಜರೆಲ್ಲ ಕಸ್ಯಪ ಋಷಿಯ ಸುತರಲ್ಲದೆ ೩

ರೂಪಕ ತಾಳ

ಒಂದು ಕಡೆಯಲಿ ವಿಭೀಷಣನ ಪ್ರತಿಷ್ಟಿಸಿದ ವು।
ತ್ತೊಂದು ಕಡೆಯಲಿ ಸದಾಶಿವನ ಪೂಜಿಸಿದ ಇಂ।
ತೆಂದು ಪುರಾಣಗಳು ಕೂಗುತಲಿವೆ।
ತ್ರಾಸಿನೊಳು ಹೊನ್ನಿಗಿಸಿ ಸಮನೆಂದು ತೂಗಿ।
ತೋರುವಂದದಲಿ ಸಂದೇಹವಿಲ್ಲ ಹಯವದನ।
ರಘುಪತಿ ಇಬ್ಬರುಚಂದವ ಭಕುತರೆಂನುಸಲೆ ಸುಸ್ರಸಿಧ್ಧ ೪

ಝುಂಪತಾಳ

ಸ್ರುತಿ ಇವನ "ಕರ್ಮಣಾ ನೋಕನೀಯ" ಯೆಂಬ
ತುತಿಸುತಿದೆ ನಿಮ್ಮ ನಿರ್ಗುಣ ಬೊಮ್ಮಕೆ ಕರ್ಮ ಉಂಟೆ।
ಕ್ಷಿತಿಯೊಳಗೆ ರಾವಣ ವಧೆ ಮಾಡಿದ।
ಸೇತು ಪತಿಯು ಪಾವನ ನೆನಲು ಅವನ ಕೊಂದವನ।
ಪತಿತ ಪಾವನ ನೆಂಬದು ಕುತ್ಸಿತಯುಕುತಿಯು ಮಾಡದೆ।
ಸತತ ಹಯವದನ ನೊಬ್ಬನೆಯಿದ್ದ ಕಾಣಿರೊ ೫

ಧ್ರುವ ತಾಳ

ಸೇತುವೆಯು ಕಂಡ ನರರಿಗೆ ಬ್ರಹ್ಮ ಹತ್ಯ।
ಪಾತಕ ಕೆಡುವದೆಂದು ಶುತ್ರಿಯು ಮನ್ನಿಸಿತಾ।
ಖ್ಯಾತ ಬೊಮ್ಮನ ತಲೆಯು ಕಡಿಯೆ ಕರದಲಿ ಕೊಟ್ಟ ಪಾಪ।
ತಪ್ಪದೊ ಸುಕೃತಿ ಸೇತು ಮುಖದಿಂದ।
ಸೀತೆ ಯರಸನು ಶಿವನ ನಿಲಿಸಿ ಪ್ರತಿಷ್ಟಿಸಿದ ಜಗ।
ನಾಥ ಹಯವದನ ಭಕುತರ ಬಂಧು ಕಾಣಿರೊ ೬

ಮಟ್ಟತಾಳ

ವರವ ಶೋಧಿಪೆನೆಂದುಕರವ ತನ್ನ।
ಶಿರ ಮೇಲಿರಿಸ ಬಂದ ಖಳಗಂಜಿ।
ಹರ ಸಕಲ ಸುರೇಶ್ವರರ ಅರಮನೆಗಳಿಗೆ ಪೋಗಿ ಐದಿ।
ಪರಿಹಾರವ ಕಾಣದೆ ನಮ್ಮ ಶಿರಿ,, ವರದನ ಮೊರೆ ಹೊಕ್ಕು
ಪ್ರಾಣವನು ಪೊರೆದಗಡ।

ಶರಣ ರಕ್ಷಕನೆಂದು ಬಿರಿದುಳ್ಳ ಹಯವದನ।
ಪರಿಯಲ್ಲನೆ ಪಿರಿದೊಂದು ಪರದೈವವಿಲ್ಲವಯ್ಯ ೭

ರೂಪಕ ತಾಳ

ಮೂಲ ರೂಪದ ಸುರರು ದ್ವಾರಕಾಪುರಿಯ ಯಾತ್ರಿಯಲಿ।
ಪಾಲಸಾಗರ ಯಾತ್ರೆ ಗರ್ಭಯಾತ್ರೆ ಕೇಳಯ್ಯಾ।
ಶೂಲಧರ ಖಳಗಂಜಿ ಭುವನವೆಲ್ಲವ ಸುತ್ತಿ।
ಶ್ರೀಲೋಲನಿಹ ವೈಕುಂಠಯಾತ್ರೆಯಿಂದ ಬದುಕನೆ।
ಭೂ ಲೋಕದಲಿ ಪುಟ್ಟಿ ಹಯವದನ ಕೃಷ್ಣ ಮಾಡಿದ।
ಕೈಲಾಸ ಯಾತ್ರೆ ಕೈವಲ್ಯಪತಿ ಗೆಲಿಗೆ ೮

ಝಂಪ ತಾಳ

ಯಾತ್ರೆಯ ಮಾಡಿಸಿಕೊಂಡ ಹರ ಹರಿ ಯಾನಹರಾಗಿ ಯು।
ಕುತಿ ಬಾಧಕವಾಯಿತು ಹರಿ ಹರರೊಳೈಕ್ಯ।
ಚಿತ್ರ ನಿನ್ನ ಮತಕೆ ನೀನೆ ಶತ್ರುವಾದೆಯ್ಯಾ।
ಜಾತಿತ್ಯುತ್ತರವ ಪೇಳಿ ಅಪಜಯವು ಬಾರದಿಹದೆ।
ಮತ್ತೆ ನೆನೆಯೆ ಹಯವದನಗಿದು ಲೀಲೆಯಾದರೆ।
ಸತ್ವ ಹೆಚ್ಚಿತು ಸರ್ವೋತ್ತಮನೆಂಬ ಶ್ರುತಿಗೆ। ೯

ತ್ರಿಪುಟ ತಾಳ

"ವಂದವಾನಾಂ ಪಿತಾನಾಂ ಪ್ರತಿ ಪ್ರಮಾಣ"।
ವೆಂದು ರುದ್ರನ ಕೂಡೆ ಶ್ರುತಿಯು ಪೇಳಿತಾಗಿ।
ತಂದೆ ಮಕ್ಕಳ ಮನೆಗೆ ಹೋದಂತೆ ಮು।
ಕುಂದ ಬೊಮ್ಮನಿಗೆ ಹಿರಿಯತನ ಕೊಡಲೆಂದ।
ಮುಂದೆ ಜನಿಸುವ ಶ್ರೀಯ ಕುವರ ರೊಳು ತನ್ನ।
ಕಂದನನ ಸೃಜಿಸಿ ಹಯವದನ ಚತುರನಲ್ಲವೆ। ೧೦

ಧ್ರುವತಾಳ

ಕಾಶಿಯಲಿ ರಾಮ ಮಂತ್ರೋಪದೇಶವ ಮಾಳ್ಪ।
ಈಶ ತಾರಣ ಮತದಿ ಜಗಕೆ ಗುರುವೆಂತೆಂಬ।

ಆ ಶಿವನ ಮಂತ್ರ ತಾರಕ ಬೊಮ್ಮ ಯೆನಿಸಿಪ।
ವಾಸುದೇವನೆ ಜಗಕೆ ಪರದೈವ ಕಾಣಿರೊ ಎಂದು।
ಈ ಸುತತ್ವವ ಪೇಳ್ವ ಹರಗೆ ನಮ್ಮ ಹಯವದನ।
ಏಸು ಮನ್ನಣೆಯ ಮಾಡಿದರುಚಿತ ಕಾಣಿರೊ ೧೧

ಮಟ್ಟ ತಾಳ

ರಾಮ ರಾಮೇತಿ ರಾಮೆ ರಮೆ ರಾಮೆ ಎಂಬ।
ಆ ಮಹಾದೇವ ಭಗವದ್ಭಕ್ತನಲ್ಲನೇ।
ಸ್ವಾಮಿ ತನ್ನ ಭೃತ್ಯರನು ಪ್ರತಿಷ್ಠೆಯನು ಮಾಡಿಸಿದ ನಿ।
ಸ್ಸೀಮ ಕರುಣಾಂಬುಧಿ ಮಹಾಮಹಿಮ ನೆಂಬರು।
ಭ್ರಾಮಕದ ನುಡಿಗೆ ಮರುಳಾಗದಿರು ಹಯವದನ।
ರಾಯಚಂದ್ರನೆ ಕಾಶಿಯ ತಾರಕ ಬೊಮ್ಮ ಕಾಣಿರೊ ೧೨

ರೂಪಕ ತಾಳ

ರೋಮ ಕೋಟಿ ಲಿಂಗ ನೆನಿಸಿದ ಹನುಮನೊಂದೊಂದು।
ರೋಮ ರೋಮಕೆ ಕೋಟಿ ಕೋಟಿ ಶಿವರ ಮಾಡುವ ಶಕ್ತಿ ಕಾಣಿರೊ।
ಆ ಮಹಾತ್ಮನು ತನ್ನ ಆಳ ಮಾಡಿ ನಡಕೊಂಡ।
ರಾಮಚಂದ್ರನೆ ಜಗಕೆ ಪರದೈವ ಕಾಣಿರೊ।
ಸ್ವಾಮಿ ಹಯವದನ ವೇದವ ತಂದ।
ಕಮಲ ಜನಕ ಮತವನಿತ್ತನಾಗಿ ಅವನೆ ಜಗದೊಡಿಯಾ ೧೩

ಝಂಪ ತಾಳ

ನೂರು ರುದ್ರರು ಪೇಳೆ ಕಾರ್ಯವಾದರೇನವರ।
ಈರೇಳು ಜಗವ ಸಂಹರಿಸ ಲರಿಯರು ಗಡ।
ಕಾರ್ಯ ವಿಲ್ಲದ ಶಿವನ ಪೇಳೆ ಅದ್ವೈತ ಮತ।
ಹಾರಿ ಹೋಗದೆ ಬರಿದೆ ಹಲವು ಹಂಬಲಿಸದೆ।
ಶ್ರೀ ರಮಣ ಹಯವದನ ವಡಂಬಟ್ಟನಿಬ್ಬರ।
ದೂರ್ವ ಕಳಚಿದನೆಂದು ಪೂರ್ವದರ ನಂಬಿರೊ ೧೪

ತ್ರಿವಿಡಿ ತಾಳ

ಹರ ವಿರಿಂಚಿರಲ್ಲವೆಂದು ಹಿರಿಯರೆ ಮನ್ನಿಸಲಾಗಿ।
ಪರವು ಸಿದ್ಧಾಂತ ಕೋವಿದ ಬುಧರೆಲ್ಲ।
ಶಿರಿ ಹಯವದನ ನಾರು ಪುರಾಣಗಳ ನೆಲೆ ಮಾಡಿರೊ ೧೫

ಅಟ್ಟ ತಾಳ

ಒಂದು ಬೊಮ್ಮ ಜಗತ್ತು ಒಂದು ಜೀವ ಜಂತು ಇಂತೆಂದು।
ಸಂದಸ್ಯಡವರಿಗೆ ಹರಿ ಜಡನೊ।
ಮಂದಹಾಸ ಜಡನೊ ಮನಮುನಿಗಳೆಲ್ಲ ಜಡರೊ।
ಇಂಥ ಶಿವನ ವೊಹಿಸಿಕೊಂಡು ವಾದಿಸುವರ।
ಹಿಂದೆ ಮುಂದರಿಯರೆಂಬು ಹಯವದನ ನಗನೆ ೧೭

ಆದಿ ತಾಳ

ಎಂ ಬ್ರಹ್ಮಾ ವೇದಾಂ ನೆಂಬ ಶ್ರುತಿ ಬ್ರಹ್ಮನಾ ಶ್ರುತಿ।
ಶಬ್ದ ಬ್ರಹ್ಮನೆಂಬ ವೇದ ಬೋಧಿಸಿ ತಾಗಿ।
ಇಂಥ ಮನುಜರಿಗೆ ಸದ್ಭಾವನ ಪೇಳ್ವ।
ಹೊಂದಿ ಬದುಕು ಹಯವದನನ್ನ ಚರಣವ।
ಹೊಂದಿ ಬದುಕೊ ಹರಿಯೆ ನಾನೆನ್ನಬೇಡ ೧೭

ಸುಳಾದಿ ೧ (೧-೨)

ಪ್ರಸನ್ನ ಹಯವದನ

ರಾಗ ಧ್ರುವತಾಳ

ಸಲಹಯ್ಯಾ ಕರುಣಿ ಸಕಲ ದೇವರ ಸಾರ್ವಭೌಮ
ಶುಭ ವೆಂಕಟರಮಣ ಸುಜನರ ಪಾಲನ
ಬಲವಂತ ಖಳ ಕುಲ ಭಂಜನ ನಿರಂಜನ
ಜಲಜ ನಯನ ಪ್ರಸನ್ನ ಹಯವದನ ೧

ರಾಗ ದೇಶ ಮಟ್ಟ ತಾಳ

ದೇಶ ದೇಶದಿಂದ ಬಂದ ಜನರ
ಆಶೆಗಳನು ಪೂರೈಸಿ ವಾಸುದೇವ ನಿನ್ನ ಭಜಕರದಾನಿಸ...

ಭಾಸುರ ಭರಣ ಸಂಪನ್ನ.
ಶೇಷಗಿರಿವಾಸ ತಿಮ್ಮಾ ಪ್ರಸನ್ನ ಹಯವದನ ೨

ರಾಗ ಕಾಂಬೋದಿ ರೂಪಕ ತಾಳ

ಜನಾ ಜನಕರ ಕಾಯ್ವನೆಂಬೋದು ನಿನ್ನಯ ಬಿರಿದು
ದಾನಿಗಳರಸ ಗಜೇಂದ್ರ ಗೊಲಿದು
ನಾಣಾದೆ ಅವನಾರ್ತಿಯವನು ಪರಿಹರಿಸಿದೆ
ಶ್ರೀನಾಥ ಭಜಕರ ಬಂಧು ಕರುಣಾಸಿಂಧು
ಧಾನಿಗಳರಸ ವೆಂಕಟರಮಣ ನೀ ಎನ್ನ
ನಾನಾಕ್ಲೇಶ ವಳಿದು ರಕ್ಷಿಸಿಕೋ ಪ್ರಸನ್ನ ಹಯವದನ
ದೀನ ಜನರ ಕಾಯ್ವನೆಂಬುದು ನಿನ್ನ ಬಿರಿದು ೩

ರಾಗ ಭೈರವಿ ಝಂಪಾ ತಾಳ

ಮುನಿದಿಂದ್ರ ಮಳೆಗರೆಯಲು ಗೋಪಾ ಗೋಪಿಯರು
ವನಜಾಕ್ಷವೇನೆಂಬೆ ಯಾಗಲು ಗಿರಿಯನ್ನು ಧರಿಸಿ
ಘನತರ ಕಾರಣದಿಂ ಭಜಕರನು ಪೊರೆದಯ್ಯಾ
ಇನಿ ಭವ ದಟ್ಟಳಿಯನು ಬಿಡಿಸೆನ್ನ ಸೇವೆಯೊಳು
ನೆನೆವಂತೆ ಮಾಡೊ ಶೇಷಗಿರಿವಾಸ ಪ್ರ
ಸನ್ನ ಹಯವದನ ಮುನಿ ಮಳೆ ೪

ರಾಗ ಶಂಕರಾಭರಣ ತ್ರಿಪುಟ ತಾಳ

ಹಿಂದೆ ನಾನಾ ಭವದಲ್ಲಿ ಬಂದು ನೊಂದೆ ನಾನು
ಇಂದಿರಾರಮಣ ನಿನ್ನ ಬಕುತಿಯ ನೊಲಿದಿತ್ತು ಮು
ಕುಂದ ಮುನಿಜನ ಮಾನ್ಯ ಮನ್ಮಥಕೋಟಿ ಲಾವಣ್ಯ
ವೆಂಕಟಾಚಲ ನಿನ್ನ ಭಕುತಿಯ ನೊಲಿದಿತ್ತು ಪ್ರಸನ್ನಹಯವದನ ೫

ರಾಗ ತೋಡಿ, ವರಾಳಿ ಅಟ್ಟ ತಾಳ

ಅನಾಥ ಜನಪ್ರಿಯ ಅಖಿಳ ಜಗದೊಡಿಯ
ಭಾನು ಸನ್ನಿಭಕಾಯ ಶೇಷಗಿರಿ ತಿಮ್ಮರಾಯ

ಶ್ರೀನಿವಾಸ ನಿನ್ನ ಮೂರುತಿಯು ಮನದೊಳು
ನೆನೆವಂತೆ ಪ್ರಸನ್ನ ಹಯವದನ ಮೂರುತಿಯು ೬

ರಾಗ ಶಾಕವರಾಳಿ ಆದಿ ತಾಳ

ಸಾಳಂ(ರಂ)ಗ ದೇವ ನಿನ್ನ ದಿವ್ಯ ಮೂರುತಿಯು
ಕರುಣಾರ್ಣವದಿಂದೆ ತೋರಿಸೊ ಕಾಯುಜನಯ್ಯ
ಭಕುತರ ಪ್ರಿಯ ಕಾಯುಜನಯ್ಯಾ
ಇವಕಾವ ದುರಿತವ ಪರಿಹರಿಸಿದೆ
ಪ್ರಭಾವ ವೆಂಕಟಚಲ ನಿವಾಸ ಕಾಯುಜನಯ್ಯನೆ
ಭಕುತರಯ್ಯಾ ಪ್ರಸನ್ನ ಹಯವದನ ೭

ಜತೆ

ದೇನಿ ಪ್ರಸನ್ನಗಾದ್ರಿವಾಸ ಪಾಲಿಸೊ ಪರಮ ಪುರುಷ ಪರೇ
ಶನೆ ತನ್ನ ನೆನೆವರ ಹೊರವನನುದಿನಾ ಪ್ರಸನ್ನ ಹಯವದನನೆ ೮

ಈ ಸುಳಾದಿ ಶ್ರೀ ಸ್ವಾದಿ ಗುರುರಾಜರದೋ
ಅಥವಾ ಅವರ ಶಿಷ್ಯರದೋ ವಿಚಾರಾಂಶವಿದೆ.

ಸುಳಾದಿ ೧೩ ವಿಜಯೀಂದ್ರರಾಮ

ಶ್ರೀ ವಿಜಯಿಂದ್ರ ಸ್ವಾಮಿಗಳು ಮಾಡಿದ ಸುಳಾದಿ

ರಾಗ ಧ್ರುವತಾಳ

ಯಾಕೆಲ ಮನವೆ ನೀ ಎನ್ನ ಕೀಕಟ ದೇಶಕ್ಕೆ ಶಳದು ಇಂದು।
ಲೋಕೈಕನಾಥ ಹರಿಯ ಪಾದಕೆನ್ನನು ದೂರನ ಮಾಡಿ ಇಂದು ಮಾ।
ಯಕ್ಕೈಲ ಜಿಹ್ವೆ ಲೋಕ ವಾರ್ತೆಗಳ ಸೇವಿಪದು।
ಶ್ರೀಕಾಂತನ ವಾರುತಿ ನುಡಿಸಿದಂತೆ ಮಾಡಿದಯ್ಯಾ।
ಯಾಕೆಲಕಿವಿಯೆ ಪ್ರೋಕರ ಆಲಾಪಗಳ ಕೇಳಿ ಕೆಡದೀ।
ಯಾಕೆಲ ಕಣ್ಣೆ ಪರವಧುಗಳ ಆಲೋಕಿಸಿ ಎನ್ನನು ಬಯಸಿದಿ।
ಸಾಕು ಸಾಕು ನಿಮ್ಮ ಸಂಗತಿ ಎಂಬಂತೆ ನೀ ಮಾಡಿದಿ।
ಕಾಕು ಮಾಡದೆನ್ನ ಸಿರಿ ವಿಜಯಿಂದ್ರಿರಾಮನ್ನ ಅಗಲಿಸಿದಿರಿ ೧

ಮಟ್ಟತಾಳ

ಹರಿಚಿಂತನ ನಾಮ ಮೂರುತಿ ಕೀರುತಿಗಳ।
ವಿರಚಿಸಿ ಸವಿಯುದ ನೋಡದ ಕೇಳದ।
ಕರಣಗಳಿದ್ದೆಡೆ ಇಲ್ಲದಿದ್ದಡೇ ನೊ।
ಹರಿಗೆ ಸನ್ಮುಖವಾಗದ ಕಾರಣ।
ಕರಣಂಗಳ ಶಿರವಳಿವ ದೊಳಿತೊ।
ಸಿರಿ ವಿಜಯಿಂದ್ರ ರಾಮನಲ್ಲ ದನ್ಯ ವಿಷಯು।
ಕ್ಕೆರಗುವ ಕರಣಂಗಳ ಶಿರವರಿವದ್ದೊಳಿತೊ ೨

ರೂಪಕತಾಳ

ಮನುಮಥ ನಯ್ಯನಕಿಂತ ಕಡು ಚಲ್ವನಾವನೊ।
ವನಜ ಭವನ ತಂದೆಕಿಂತ ದೇವರೊಳದಾವನೊ।
ಮುನಿ ಮನಕೆ ಗೋಚರನಾಗಿ ತೋರಿ ತೋರನು ದಾವನೊ।
ಘನ ವಿಜಯಿಂದ್ರ ಶಾಮ ಪೊರೆಯಿಲಿವ್ಮನುದಿನ ೩

ಝಂಪತಾಳ

ನಿನ್ನ ಕೀರುತಿ ಕಿವಿಗೆ ನಾಮ ಎನ್ನ ನಾಲಿಗೆ।
ಎನ್ನ ಕಣ್ಣಿಗೆ ನಿನ್ನ ಮೂರ್ತಿ ದೊರೆಯಲಿೊ॥
ಎನ್ನ ಮನಕೆ ಸೇವವ ಸಿರಿ ವಿಜಯಿಂದ್ರ ರಾಮ।
ಎನ್ನ ಕಣ್ಣಿಗೆ ನೀ ನನ್ನ ಮೂರ್ತಿ ದೊರೆಯಲಿೊ ೪

ತ್ರಿವಿಡಿ ತಾಳ

ಮೂರೇಳು ಕರಣಂಗಳರೇ ನೀವು।
ಸಿರಿ ಪತಿಗೆ ದೂರರಾಗಿ ನರಕಯಾತನೆ ಗೈದದೆ।
ಹರುಷಗುಂದಲಿ ಲೇಸಾದೆ।
ಸುರೇಶ ಮೊದಲಾಗಿ ಆರ್ಚಿಪ ಪರಮ ಪಾವನಾ ಚರಣ
ಶ್ರೀ ಗರುವ ದೇವರ ದೇವನ।
ಸಿರಿ ವಿಜಯಿಂದ್ರರಾಮ ಪೊರೆಯಲಿವ್ಮನುದಿನ ೫

ಅಟ್ಟತಾಳ

ತಪ್ಪನೊಪ್ಪನರಸನು ತನ್ನ ನೆರೆ ನಂಬಿದ।
ಶ್ರೀಪತಿ ಅಜವಿಳ ಸುರಪತಿ ಮುಖರ।
ತಪ್ಪು ಮಾಡಿದವರ ತಪ್ಪು ಹಿಡಿದನೆ ಎ।
ನಪ್ಪ ಶ್ರೀ ವಿಜಯಿಂದ್ರ ರಾಮ ದಯಾನಿಧೆ ||೬||

ಆದಿತಾಳ

ನಾರಾಯಣನೆಂಬ ಮಗನ ಕರಿಯಲಾಗ।
ಆರತನಾಗಿ ಅವಾತಕರದನೆಂದು ಆ
ದರ ದಿಂದಲಿ ಕೇಳಿ ಅಜಾಮಿಳನ।
ಭೂರಿ ಭೀತಿಗಳು ಕ್ಷಣದಿ ಬಿಡಿಸನೆ।
ಸಾರ ಹೃದಯ ನೆಂದರಿದರೆ ಬಿಡುವನೆ।
ಮಾರಮಣ ಸಿರಿ ವಿಜಯಿಂದ್ರರಾಮ।

ಜತೆ

ಸಾಧುಗಳನ ಸಂತತ ಸಲಹುವ ಸು।
ಬೋಧ ಮೂರುತಿ ಸಿರಿ ವಿಜಯೀಂದ್ರರಾಮ ||೮||

ವಿಜಯೀಂದ್ರರಾಮ (೨)
ಸುಳಾದಿ ೧೪
ಶ್ರೀರಾಮಚಂದ್ರ ದೇವರ ಮಹಾಮಹತ್ತ್ವೆ

ರಾಗ ನಾಟ ಧ್ರುವತಾಳ

ಪರಬೊಮ್ಮ ಹರಿಯುತಾ ನರ ರೂಪ ತಾಳಿಹ
ನರನಾಥ ದಶರಥನ್ನವರ ಗೇಹದಲವತರಿಸಿ
ಸಿರಿರಾಮ ನೆಂಬೊ ಪುಣ್ಯನಾಮದಿಂದ ಕರೆವುತಿರೆ
ಹರುಷದಿಂದ ಇಲ್ಲಿಗೈದಿ ಕರಿಯಬಂದ ಕೌಶಿಕನ್ನ
ಗುರು ಯಜ್ಞ ವಿಘ್ನವನ್ನು ಪರಿಹರಿಸುವ ಮುನಿವರನ
ಕರುಣದಿಂದ ಪರಮಾನಂದ ಶರಧಿಯಲ್ಲೋಲ್ಯಾಡಿಸಿದ
ಸಿರಿ ವಿಜಯಿಂದ್ರ ರಾಮ ಪೊರೆಯಲಿಮ್ಮ ನಾಮವ
ಹಾಹಾ ಎಲೆ ರಮಣಾ ೧

ಮಟ್ಟತಾಳ

ಈತನೆಂದು ಯಜ್ಞದ ವಿಘ್ನ ಪರಿಹರಿಸುವ
ಪೋತ ಮಹದ್ಭೂತ ದಂತಿಹ ರಕ್ಕಸರ
ವೀತ ಭಯನಾಗಿ ಪೊರೆವದೆಂತೊ
ಪೋತ ಮಹದ್ಭೂತ ದಂತಿಹ ರಕ್ಕಸರ
ಭೂತಳಕರ್ತ ಸಿರಿ ವಿಜಯಿಂದ್ರ ರಾಮನಚರಿತ
ಪೋತ ಮಹದ್ಭೂತದಂತಿಹ ರಕ್ಕಸರ ವೀತಭಯ
ನಾಗಿ ಪೊರೆವದೆಂತೂ ೨

ರೂಪಕತಾಳ

ಜನಕನಂದು ಜನಪತಿಯು
ಮನಿಗೆ ಪೋಗಿ ಜಾನಕಿಯು
ಮನಕೆ ಹರುಷ ಬಪ್ಪಂತೆ
ಅಣಕವಾಗಿ ಶಿವನ
ಧನುವು ಮುರಿದು ವಿಜಯಿಂದ್ರ ರಾಮ
ಮನಕೆ ಹರುಷ ಬಪ್ಪಂತೆ ೩

ಝಂಪಿತಾಳ

ಇವನರ್ಭಕನೆ ಇವನ ಮುನಿಗಳಾದವರೆಲ್ಲ
ಮನದಿ ಭಾವಿಸಿ ಕಾಣನೆಂಬದರಿಯಾ
ಭುವನ ಪಾವನ ನಾಮ ಸಿರಿ ವಿಜಯಿಂದ್ರರಾಮ
ಇವನರ್ಭಕನೆ ಇವನ ಮುನಿಗಳಾದವರೆ ೪

ತ್ರಿವಿಡಿತಾಳ

ರಾಮ ಜಾನಕಿ ಮದುವೆಯ ಆಗಿ ಬಾರಾಗ ಪರುಶ
ರಾಮನ ದರಸ ಆವನಖಿಲ ಹೆದರಿಸಿ ಮೆರೆದೆ
ಕೋಮಲಾಂಗ ವಿಜಯಿಂದ್ರ ರಾಮ ಬಾಲಕನೆ—
ಹೇಗೆ ಹೆದರಿಸಿದಾ ೫

ಅಟ್ಟತಾಳ

ನಸಲಲ್ಲಿ ಕಣ್ಣು ಪಡದವನ ಗೆಲಿದೆ
ಆಸುಳಿಯೆಂದು ಬೇಡಿಕೊಂಡ ಕಂದನ ಕಾಯ್ದೆ

ಉಸರ ಬೇಕೆಂದು ಪವಣ (ಪಣವ) ಮಾಡಿದನ
ಅಸುಳಿ ಯೆಂದ ಸುರರ ಪೊರೆವೆ ವಿಜಯೀಂದ್ರ ರಾಮ
ಆಸುಳಿ ಯೆಂದು ಬೇಡಿಕೊಂಡ ಕಂದನ ಕಾಯ್ದ ನರಹರಿ ೬

ಆದಿ ತಾಳ

ಉರವಣಿಸಿ ಬಾಹ ತಾಟಕಿಯ ಕೈ
ಕರಗಳ ನಿಮಿಷದಿ ಕತ್ತರಿಸುವೆನೆಂದು
ಸುರರ ಪೊರೆವ ವಿಜಯೀಂದ್ರ ರಾಮ
ನರಹರಿ ಕರಗಳ ನಿಮಿಷದಿ ಕತ್ತರಿಸುವೆ ನೆಂದಾ ೭

ಜತೆ

ಲೋಕಾಭಿರಾಮ ಶುಭಗುಣ ಭೌಮ
ಲೋಕೇಶ ಭೌಮ ವಿಜಯೀಂದ್ರ ರಾಮ ೭

ಸುಳಾದಿ ೧೫

ವೈಕುಂಠ ವಿಠ್ಠಲ (ಬೇಲಾಪುರ ವೈಕುಂಠದಾಸರು)

ರಾಗ ಧ್ರುವತಾಳ

ನೋಡಲಿ ಮನವೆ ಜಗದೀಶನ ಲಾವಣ್ಯಾಂಬುಧಿಯನನುದಿನ
ಬೇಡು ಬೇಡಿದ ನೊಲಿದೀವ ದಾಸಿಗಳರಸನಾ
ಕೂಡೆಲ ಮನನೆ ಸುಖನಿಧಿಯ ಅಜಭವೇಂದ್ರಾದಿ ಸುರೇಶ
ಕೇಡಿಲ್ಲದ ನಿಜಪದ ಆವನೊಲವೆ
ಆಡಾತನ ದಾಸರೊಡನೆ ದುರಿತ ಕೋಟಿಗಳನು ನೀಗೆ
ರೂಢಿಗೆ ದಕ್ಷಣ ವಾರಣಾಸಿ ಎನಿಪ ಬೇಲಾಪುರದಲ್ಲಿ
ಗಾಡಿಕಾರ ಚನ್ನಕನಾದ ವೈಕುಂಠ ವಿಠ್ಠಲ್ಲ ೧.೧,೧,೧ ಬಂದೈಧಾನೆ

ಮಟ್ಟತಾಳ

ಮೆರೆವ ಮುಕುಟ ಮುತ್ತಿನ ಮೂಗುತಿ
ಕರ್ನದೊಳು ನಿರುಪಮ ರತ್ನದೋಲೆರಾಜಿತ
ವರದಾ ಕರ ಚತುಷ್ಟಯದಲ್ಲಿ ಶಂಖ ಚಕ್ರಗದೆ

ಸರಸಿಜ ಸಂಕೃತಿಯು ಪೀತಾಂಬರದಾ
ಸಿರಿ ವೈಕುಂಠ ವಿಠ್ಠಲ ಬೇಲಾಪುರದ
ಕರುಣಾಕರ ಕೇಶವ ನಿನ್ನ ಮಹಿಮೆಗೆ ನಮೊ ನಮೊ ೨

ರೂಪಕ ತಾಳ

ಕಮಲಜಾರಾಧಿತಾಂಘ್ರಿ। ಕಮಲಾ ಆರಾಧಿತಾಂಘ್ರಿ
ಕಮಲಾ ಕುಚ ಕುಂಕಮಾಂಕಿತ ಪದ
ಅಮರ ನದಿಯು ಪಡೆದ ಚರಣ ಕಂಜ
ಅಮಿತ ಮಹಿಮ ಎನ್ನ ದೇಹ ಮನಿಯೊಳಗನುದಿನ ನಿಲಿಸಯ್ಯ
ನಮೋ ಬೇಲಾಪುರದ ಚನ್ನಕೇಶವ ವೈಕುಂಠ ವಿಠ್ಠಲಾ
ಅಮಿತ ಮಹಿಮ ಎನ್ನ ದೇಹ ಮನಿಯೊಳನುದಿನ ನಿಲಿಸಯ್ಯಾ ೩

ಝಂಪಿ ತಾಳ

ನಿನ್ನ ಕೀರುತಿ ಕಿವಿಗೆ ನಾಮ
ಎನ್ನ ನಾಲಿಗೆ ಚಾರು ಲಾವಣ್ಯ
ಎನ್ನ ಕಣ್ಣಿಗೆ ಆ ಅ ಇದೆ ಸಾರವಯ್ಯಾ
ಸಿರಿ ವೈಕುಂಠ ವಿಠ್ಠಲ ಬೇಲಾಪುರಧೀಶಚಾರು ಲಾವಣ್ಯ ೪

ತ್ರಿವಿಡಿ ತಾಳ

ಸರಸಿಜೋದ್ಭವ ಶೂಲಿ ಸುರಪ ಮುಖ್ಯ
ಸುರಾಸುರರು ಶರಧಿ ಮಥನದಲ್ಲಿ ಸೆರದಿರಲು
ಪರಮ ಪುರುಷ ಪುರುಷೋತ್ತಮನೆಂದು ಅಂದು ಇಂದಿರೆ
ಹರುಷದಿ ಮಾಲೆ ನಿನಗೆ ಹಾಕಿದಳಾಗಿ
ಪರಮ ಪುರುಷ ವೈಕುಂಠ ವಿಠ್ಠಲ ಎಂದು ಇಂದಿರೆ ೫

ಅಟ್ಟತಾಳ

ಅಲ್ಪಮತಿಯು ನಾನೆತ್ತ ಸ್ವಾಮಿ ನಿನ್ನ ಮಹಿಮೆ ಎತ್ತ
ಶ್ರೀಪತಿಯೆ ನಿನ್ನ ಮಹಿಮೆ ಎತ್ತ
ಬಲುಪಾಪಿ ದುರ್ವಿಷಯ ಲಂಪಟನು ನಾನು ನಿನ್ನ ಮಹಿಮೆ ಎತ್ತ
ಬೇಲೂರ ಪತಿ ಚೆನ್ನಕೇಶವ ವೈಕುಂಠ ವಿಠ್ಠಲ ಶ್ರೀಪತಿಯೇ ೬

ಆದಿತಾಳ

ಶರಣಾಗತ ಪರಿಪಾಲಕನೆಂಬ
ಬಿರಿದು ಕೇಳಿ ನಿನ್ನಯ ಸಿರಚರಣಕ್ಕೆ
ಶರಣ ಪೊಕ್ಕನೊ ಎನ್ನವ ಗುಣ ಅಪರಾಧ
ಮರೆಯೊ ಶ್ರೀ ವೈಕುಂಠ ವಿಠ್ಠಲ
ಕರುಣಾಕರ ಕೇಶವ ನಿನ್ನ
ಮೂರುತಿಗೆ ನಮೊ ನಮೊ ೭

ಜತೆ

ಸಿರಿ ವೈಕುಂಠ ವಿಠ್ಠಲ ಬೇಲಾಪುರಧೀಶ
ಕರುಣಾಕರ ಕೇಶವ ನಿನ್ನ ಮಹಿಮೆಗೆ ನಮೊ ನಮೊ ೮

ಶ್ರೀಗುರು ಮಧ್ವೇಶ ಶ್ರೀಕೃಷ್ಣಾರ್ಪಣಮಸ್ತು

ನೋಟು—ಶ್ರೀ ಪಾದರಾಜರವು, ಶ್ರೀವ್ಯಾಸರಾಜರು, ಶ್ರೀ ಸ್ವಾದಿರಾಜರು, ಶ್ರೀ ವಿಜಯಿಂದ್ರರವು ಆದ್ಯರೂ ಶ್ರೀ ಪುರಂದರದಾಸರವು ದೊರೆತ ಉಗಾಭೋಗಗಳಲ್ಲಿ ಎಷಯವಿಭಾಗ ಮಾಡಿ ಶ್ರೀ ಹರಿದಾಸ ಭಾರತಿ ಬೆಂಗಳೂರಿಗೆ ಕಳಿಸಿದೆ. ೨೭೦ ಸುಮಾರು ಹರಿದಾಸ ಭಾರತಿಯಲ್ಲಿ ಪ್ರಕಟವಾಗಿವೆ. ಅವರು ಸಂಗ್ರಹಿಸಿ ಕೊಟ್ಟ ನಮ್ಮ ಮಂಡಲದ ಹೆಸರು ಸಹ ಕೊಟ್ಟಿಲ್ಲ. ಆಗಲಿ—ಪ್ರಕಟವಾದರೆ ಸಾಕು. ಮೇಲ್ಕಾಣಿಸಿದವರ ಪದಗಳನ್ನೆಲ್ಲ ಸುಳಾದಿಗಳು ಮುಗಿದಿಂದ ಕೊಡಲಾಗುತ್ತದೆ. ಸಂಶೋಧನ ಕೆಲಸ ನಡೆದಿದೆ. ಕೆಲ ಪದ ಎರಡನೆಯ ಕಡೆಗೆ ಅಚ್ಚಾದವುಗಳಲ್ಲಿ ಬಹಳ ತಪ್ಪುಗಳಿವೆ. ಮುಂದೆ ಆದ್ಯರ ಸುಳಾದಿಳು ಕೊಡುತ್ತದೆ.

★

ಬೆಹಾಗ್ ಛಾಪು ತಾಳ

ವಾಸುದೇವನಾಶ್ರಯಿಸ ಉಪಾಸನ್ಯಾಕತೆ
ಧ್ಯಾಸ ಬಲಿಯದಿಹ ಮಿಗಿಲಭ್ಯಾಸವ್ಯಾತಕೆ

ಎಂಬ ಪಲ್ಲವಿಯನ್ನು ಪದರ್ಭವಾಗಿಟ್ಟು ಐದು ನುಡಿಗಳ ಕೆಳಕಂಡ ಪದವನ್ನು ಹಾಡಿರುತ್ತಾರೆ. (ಮಹಿಪತಿದಾಸರು)

ಹೃದಯಶುದ್ಧವಾಗದೆ ಉದಯಸ್ನಾನವ್ಯಾತಕೆ
ಬದಿಯಲಿಪ ಸುವಸ್ತು ಕಾಣದ ಜ್ಞಾನವ್ಯಾತಕೆ
ಉದಗಕುದಿಯು ಶಾಂತಿಹೊಂಪದ ಸಾಧನವ್ಯಾತಕೆ
ಬುಧರ ಸೇವೆಗೊದಗದಲಿಹ ಸ್ವಧನವ್ಯಾತಕೆ ೧

ಭಾವನೆಲಿಯುಗೊಳ್ಳದಲಿಹ ಭಕುತಿಯಾತಕೆ
ಕಾವನಯ್ಯನ ಕಾಣದಲಿಹ ಯುಕುತಿಯಾತಕೆ
ದೇವದೇವನ ಸೇರ್ಗಲ್ಲಪ ಶಕುತಿಯಾತಕೆ
ಹೇವಹೆಮ್ಮೆಯಳಿಯದಲಿಹ ವಿರಕ್ತಿಯೇತಕೆ ೨

ತತ್ವದನೆಲೆ ತಿಳಿಯದಿಹ ವಿದ್ವತ್ವವೇತಕೆ
ಸತ್ವಗುಣ ವಿಚಾರವಿಲ್ಲದಿಹ ಕವಿತ್ವವೇತಕೆ
ಚಿತ್ತಶುದ್ಧವಾಗದಿಹ ಮಹತ್ವವೇತಕೆ
ವಿತ್ತದಾಶೆತೊರೆಯದ ಸಿದ್ಧಿಯೇತಕೆ ೩

ನೀತಿಮಾರ್ಗವರಿಯದವನ ರೀತಿಯೇತಕೆ
ಮಾತಿನಮಿತಿಯಿಲ್ಲದವನ ಪ್ರೀತಿಯೆತಕೆ
ರೀತಿ ಆದರವಿಲ್ಲದಮೃತ ಊಟವೇತಕೆ
ಜ್ಯೋತಿ ತನ್ನೊಳರಿಯದ ಯತಿತ್ವವೇತಕೆ ೪

ಮನವು ಸ್ಥಿರಗೊಳ್ಳದವನ ಶ್ರವಣವೇತಕೆ
ನೆನೆವು ನೆಲೆಗೊಳ್ಳದಿದ್ದರೆ ಮನನವೇತಕೆ
ತನುವಿನಲ್ಲಿ ಘನವ ಕಾಣದ ಅನುಭವ್ಯಾತಕೆ
ದಾನಿ ಮಹೀಪತಿಸ್ವಾಮಿಯ ಕಾಣದ ಜನ್ಮವೇತಕೆ ೫

ಪದ್ಯ ವಿಭಾಗ ೧
ಆದ್ಯರ ಸುಳಾದಿಗಳು

೬೦ ಜನ ಆದ್ಯರು ಪುರಾತನ ದಾಸರು. ಇವರೇ ವಿಶೇಷವಾಗಿ ದಾಸ ಸಾಹಿತ್ಯವನ್ನು ಮೊದಲಿಗೆ ಬೀರಿದವರೆಂಬುದಕ್ಕೆ ಇವರಿಗೆ ಆದ್ಯರೆಂಬ ನಾಮ ಬಂದಿದೆ. ಇವರು ಒಮ್ಮೇಲೆ ಒಂದೇಕಾಲಬಲ್ಲಿ ಇದ್ದರೆಂತಲ್ಲೂ, ಕ್ರಮವಾಗಿ ಒಬ್ಬರಿಂದೊಬ್ಬರು ಆಗಿ ಹೋದರೆಂತಲೂ ಇತಿಹಾಸ. ಇವರು ಶ್ರೀಪುರಂದರ ದಾಸರಕಿಂತಲೂ ಮೊದಲಿಗೇವೆ ಇದ್ದರೆಂದು ಶ್ರೀ ವಿಜಯದಾಸರ ಸುಳಾದಿಯಿಂದ ಗೊತ್ತಾಗುತ್ತದೆ. ಲನೇ ಶತಮಾನದವರಲ್ಲ. ಶ್ರೀ ಜಯ ತೀರ್ಥರ ಕಾಲದನಂತರ ಶ್ರೀಪಾದ ರಾಜಾದಿಗಳಿಗಿಂತಲೂ ಮೊದಲಿಗಿರಬಹು ದೆಂಬ ಊಹೆ ಯಾಕಂದರೆ ಶ್ರೀ ಪುರಂದರದಾಸರ ಕಾಲ ಶ್ರೀ ವ್ಯಾಸರಾಜರ ಕಾಲ, ಶ್ರೀಪಾದರಾಜರಕಾಲ ಸ್ವಲ್ಪ ಹೆಚ್ಚು ಕಡಿಮೆ ಇದೆ.

೧. ಶ್ರೀ ವಿಜಯದಾಸರು "ಆವಜನುಮದಲಿ ಸ್ನಾನ ಮಾಡಿದೆನೊ" ಎಂಬುವ ಸುಳಾದಿಯ ಮಟ್ಟತಾಳದಲ್ಲಿ ಹೇಳಿರುವದೇನಂದರೆ—

"ನರಸಿಂಹ ವೈಕುಂಠ ನರಹರಿಯೋಗೇಂದ್ರ ।
ಸಿರಿಸೊಬಗು ಸುಲಭ ವರದ ಆಚಲಾನಂದ ।
ಅರವಿಂದನಾಭ ಹರಿ ವ್ಯಾಸ ಕೃಷ್ಣ ವರ ದಾನಿ ಚನ್ನ ।
ಗುರು ಅಚ್ಯುತ ಚತುರ ಮದ್ವಪತಿ ।
ಗರುಡವಾಹನ ಮುದ್ದು ಪರಿಪೂರ್ಣಾನಂತದಾರಿಪನ ಶ್ರೀ ।
ಧರ ಪಾಂಡುರಂಗ ಚರಿತಾನಂದಾ ವಿ ।
ಸ್ತರವಾಗಿ ಬಲುಪರಿ ಪರಿಯಲಿ ಪೇಳಿ ಅಂಕಿತವ ।
ಸರಸವಾದ ಪೇಳಿ ಪರಮ ಭಕುತಿಯಲ್ಲಿ ವಿಜಯ ವಿಠ್ಠಲನ್ನ ।
ಸ್ಮರಣೆ ಮಾಡಿದರು ಆದ್ಯರು ನಿರ್ಮಳರಾಗಿ" ॥ ೨ ॥

ತ್ರಿವಿಡಿ ತಾಳ

ಇವರು ಈ ಪರಿಯಲ್ಲಿ ಅಂಕಿತವನು ಹಾಕಿ ।
ಅವನಿಯೊಳಗೆ ಸಂಚರಿಸುತ್ತಲಿರಲಿತ್ತಲು ।
ಭವದೂರರಾಗಿ ದಾಸರು ತಮ್ಮ ಸುತರೊಡ ।
ನೆ ವಿರಚಿಸಿದರು. ಪುರಂದರ ವರದ ಗುರು ಅಭಿ ।
ನವ ಗುರು ಮಧ್ವಪತಿ ಎಂಬಾಂಕಿತದಿಂದ ।
ವಿವರಣೆ ಮಾಡಿ ಲೋಕವನು ಉದ್ಧರಿಸೆ ।
ಅವರವರು ಎಲ್ಲಾ ಅತಿದಯಾಪರರಾಗಿ ।
ಭವಿಷ್ಯೋತ್ತರ ತಿಳಿದು ಎನಗೆ ಒಂದು ।
ಕವನಕ್ಕೆ ನೆಲೆ ಮಾಡಿ ಪೋಗಿದ್ದದದರಿಂದ ।
ಹವಣೆ ತಿಳಿದೆನೊಗುರುಗಳ ಕರುಣದಿಂದ ।
ಜವನ ಬಾಧೆಯು ಕಳೆವ ವಿಜಯವಿಠಲನ್ನ ।
ಅವಸರದಲಿನಾ ಚರಣವನಂಬಿದೆನೊ ॥ ೩ ॥

ಈ ಪ್ರಮಾಣದ ಮೇಲಿಂದ ಶ್ರೀ ಪುರಂದರ ದಾಸರಕಿಂತಲೂ ಆದ್ಯರು ಮೊದಲಿಗಿದ್ದರೆಂದು ತಿಳಿಯುತ್ತದೆ. ಆದ್ಯರ ಪೈಕಿ ಒಬ್ಬ ದಾಸರು ಶ್ರೀ ಜಯತೀರ್ಥರ ಸ್ತೋತ್ರ ಮಾಡಿರುತ್ತಾರೆ. ಶ್ರೀ ಜಯತೀರ್ಥರ ಸಮಕಾಲೀನರಾಗಲಿ ಇತ್ತೀಚಿನವರಾಗಲಿ ಇರಬಹುದು. ಸಂಶೋಧನೆಯಲ್ಲಿ ಈ ಆದ್ಯರವು ಸುಮಾರು ೩೦ ಸುಳಾದಿ ೪೦ ಪದಗಳು. ಕೆಲವು ಉಗಾಭೋಗ ಗಳು ದೊರೆತಿವೆ. ಉಗಾಭೋಗಗಳು "ಹರಿದಾಸ ಭಾರತಿಯಲ್ಲಿ ಕೊಟ್ಟಿದೆ, ಈಗ ಅವರ ಸುಳಾದಿಗಳು ಮಾತ್ರ ಕೊಡುತ್ತದೆ.

ಸಂಪಾದಕ

ಆ ದ್ಯ ರು

ಅಚಲಾನಂದ ವಿಠಲ (೧)

ಸುಳಾದಿ ೧

ರಾಗ ಧ್ರುವತಾಳ

ಘೋರ ಮಲ್ಲಿಗೆಯ ದುರುಬಿದ ಜೋಲೆಯಾದ ಕ
ಸ್ತೂರಿ ತಿಲಕ ನೊಸಲಿನೋಳೆಸೆಯೇ ।
ಹರಿಣಾಂಕನ ಹಳಿವ ನಗೆಮೊಗ ।
ವಾರಿಜಾದ್ಯ ಸಾಲು ಪೋಲುವ: ನಯನ ।
ಈ ರೇಳು ಭುವನವ ಬೆಳಗುವ ಮುಗುಟ ।
ಸೂರೇಯಾನಂತ ರತುನದೋಲಿ ।
ಕೀರುತಿ ಭುಜಯುಗವಲಯಾದಿಗಳತೋಳು
ಬಂದಿ ಕಂಕಣಮುದ್ರಿಕಾ ಎಸೆಯೆ ।
ಪೇರುರದಲಿ ಒಪ್ಪೆ ಸಿರಿ ವತ್ಸಸಿರಿಗಂಧ ।
ಹಾರ ಪದಕ ವೈಜಯಂತಿ ವನಮಾಲೆ ಒಪ್ಪೆ ।
ವೀರ ಮಲ್ಲುಡಿಗೆಯದುರುಬಿನೂಟುಪೊದು ।
ದಾಽನ ಸುರರ ಪೆಂಡಿಯು ಬಲಗಾಲಿಲೊಲಿಯೆ ।
ಸೇರಿದವರಿಗೆ ಉನ್ನತಕೆ ಉನ್ನತವೀವ ।
ಧಾರುಣಿಯೊಳಗಚಲಾನಂದ ವಿಠ್ಠಲರೇಯಾ ॥ ೧ ॥

ಮಟ್ಟತಾಳ

ದೇವರೆಂದರೆ ಎಲ್ಲರ ದೇವರೇ ಕಾಣಿರೊ ।
ದೇವರೆಂದರೆ ಎಲ್ಲರ ದೇವರೇ ನೋಡಿರೊ ।
ಭಾವಿಸಿ ಬಂದು ನೋಡಿ ಬರಿದೆ ಕೆಡಬೇಡಿ ।
ದೇವರೆ ಚಲುವ ನಮ್ಮ ದೇವರೆ ಸೊಬಗಾ ।
ದೇವರೆ ಸಕಲ ಸುಖವಕ್ಕು ಕಾಣಿರೊ ।
ದೇವರ ಬಿಟ್ಟನ್ಯರ್ದೇವರ ಭಜಿಸಿದರೆ । ನೀ ।
ವ್ಯಥೆ ಚಟ್ಟಿರೊ ಅಚಲಾನಂದ ವಿಠ್ಠಲರೇಯ ದೇವರೇಸಾಕ್ಷಿ ॥ ೨ ॥

ತ್ರಿವಿಡಿತಾಳ

ಜಲಧಿಯೊಳಿದ್ದ ಶಿಶುಗಳ ಜಲವಾಹದಿಂದ ತೆಗುವಂತೆ ಸಂಸಾರಿ
ನರಮುಗನ ಸಂಸಾರಿಯಾಗಿ ಉದ್ಧರಿಸುವ ಸಂಸಾರಿ ।
ಸಂಸಾರಿ ನರಮುಗನ ದೇವ ನಂದನ ದೇವಕಿ ।
ಸಿಖಾಮಣಿ ಕಾವೊದೆಮ್ಮ ಅಚಲಾನಂದ ವಿಠ್ಠಲರೇಯಾ ॥ ೩ ॥

ಅಟ್ಟತಾಳ

ಕಂಜ ಭವಾದಿ ಸುರರ ಮುಕುಟಮಣಿ ।
ಪುಂಜ ರಂಜಿತ ಪಾದ ಪೀಠ ಜಯದೇವಪಂಥ ।
ರಿರೇಯ ಜಯ ಪುಂಡರೀಕ ತನಯನ ।
ಚಕೋರಚಂದ್ರ ಜಯ ನರಲೋಕದ ಪುಣ್ಯ ।
ಗಣ್ಯ ನಿರ್ವಿಣ್ಯ ಅಚಲಾನಂದ ವಿಠ್ಠಲದೇವರೇಯಜಯ ॥ ೪ ॥

ಆದಿತಾಳ

ಪೊಡಲೊಡವಿಯ ನೆಚ್ಚಿಕೆಡದೇ ಮನವೆ ।
ನಡವದು ಹರಿಪಾದಗಳನು ಬಳಿ ।
ವಿಡಿ ಹರಿದಾಸರ ಪದವ್ರಜಗಳ ।
ನಡ ಕೆಡದ ಪದವನೀವ ಅಚಲಾನಂದ ವಿಠಲರೇಯನಡಾ ॥೫॥

ಜತೆ

ನೀ ಒಲಿದವರಿಗೇ ಅಚಲಾ ಪದವಿ ಅಕ್ಕು ।
ಅಚಲಾನಂದ ವಿಠ್ಠಲ ದೇವರೇ ನಮೋ ನಮೋ ॥ ೬ ॥

ಬಾಲಲೀಲೆ ಸುಳಾದಿ (೨)

ರಾಗ ಧ್ರುವತಾಳ

ರಂಗಾ ನಿನ್ನ ಎಡದಂಗುಟದುಗುರುನು ।
ಸೋಂಕಿದ ಸುರನದಿ ಅನೇಕಾನೇಕ ।
ಲೋಕವು ತಾನೆ ಪಾವನ ಮಾಡುವಳೊ ।
ರಂಗಾ ನಿನ್ನ ನಾಭಿ ಕಮಲದಲ್ಯುದಿಸಿದ ವಿರಂಚಿ ।
ಅನೇಕಾನೇಕ ಲೋಕವು ತಾನೆ ಸೃಜಿಸಿದನೊ ।
ರಂಗಾ ನಿನ್ನುರವನೆ ಸೋಂಕಿದ ಮಹಲಕುಮಿ
ಅನೇಕಾನೇಕ ಭುವನ ಚಿನ್ನರಿಗತಿಸುಖವನೀವಳೊ ।

ರಂಗಾ ನಿನ್ನ ಒಂದೊಂದವಯವ ಸೋಂಕಿದವರ
ಮಹಿಮೆಂತುಂಟೋ ।
ರಂಗಾ ನಿನ್ನ ಭಕುತರ ಮಹಿಮೆಗೆ ನಮೊನಮೊ ।
ಅಚಲಾನಂದ ವಿಠ್ಠಲ ಪಂಡರಿಪುರಿರಾಯಾ ॥ ೧ ॥

ಮಟ್ಟತಾಳ

ದಾಸರು ಬರಲಿಂಗೆ ಪೊಸರಿಸುವ ಇಂದ್ರಿ ।
ವೆಂಕ್ಕರು ಬರಲಿಂಗೆ ಶಂಕೆಗೊಂಬುವ ಚಂದಿರ ।
ಡಿಂಗರು ಬರಲಿಂಗೆ ಚೆಂಗು ಚರಿವರು ।
ದಿಕ್ಪಾಲಕರು ಹರಿಯ ಡಿಂಗರು ಬರಲಿಂಗೆ
ಚಂಗು ಚರಿವರು ಅಚಲಾನಂದ ವಿಟ್ಠಲರೇಯನ ।
ಸಜ್ಜ ಯಳಿಹ ಘನ ಅಧಿಕಾರವ ಕೆಡುವದೆಂದು ।
ದಾಸರು ಬರಲಿಂಗೆ ಪೊಸರಿಸುವ ಇಂದಾ ॥ ೨ ॥

ತ್ರಿವಿಡಿ ತಾಳ

ತಮ್ಮ ಮೂರುತಿಯಿಂದ ತಮ್ಮ ಕೀರುತಿಯಿಂದ ।
ತಮ್ಮ ತಮ್ಮ ಪ್ರಭಾವದಿಂದ ।
ತಮ್ಮ ಕರುಣವಲೋಕನದಿಂದ ।
ತಮ ತಮ್ಮ ದಾಸರ ಭುವನ ಪಾವನ ಮಾಡುವರು ।
ಅಚಲಾನಂದ ವಿಠಲರೇಯನ ಶಿರಿಚರಣದ ಶರಣರು ।
ಈ ಭುವನ ಪಾವನ ಮಾಡುವರೋ ॥ ೩ ॥

ಅಟ್ಟತಾಳ

ಬಯಿಸಿ ಬಳಲಿ ಕೃತುಸಾಧನ ಸತ್ಕರ್ಮವ ಮಾಡಿಕೊಂಡಂತೆಲ್ಲ-
ಈ ಪಥ ।
ಸಕಲ ಪುರುಷಾರ್ಥ ವ್ರತಸಿದ್ಧಿ ಎಂತೆಲ್ಲ ನಿನ್ನಾಳುತನವಲ್ಲ ।
ಘನ ಸಿರಿ ಅಲ್ಲವೊ ಬಯಸದೆ ಬಳಲದೆ ದೊರಕುವ
ದಚಲಾನಂದ ವಿಠ್ಠಲನ ದಾಸರ ಕರುಣವು ಬಯಸಿ ಬಳಲಿ ॥೪॥

ಆದಿತಾಳ

ಮನ ವಚನ ಕಾಯಕದಿಂದ ।
ಅನ್ಯವನರಿಯದ ಹನುಮಂತನ
ನಿನ್ನ ದಾಸ ನೆಂದೆನಿಸಯ್ಯಾ ।
ಉನ್ನತ ಭಕುತಿಯ ನಿತ್ಯನಗನುದಿನ ।
ನಿನ್ನವನೆಂದೆನಿಸೊ ಅಚಲಾನಂದವಿಠಲ ॥ ೫ ॥

ಜತೆ

ಹಿಂದೆ ಮಾಡಿದ ಇಂದು ಮಾಡಿದ
ಮುಂದೆ ಮಾಡುವ ತಪ್ಪುಗಳೆಲ್ಲ ನಿನ್ನ ನಾಮವು ।
ಒಂದೆಸಾರಿ ನೆನದೆ ಅಚಲಾನಂದ ವಿಠ್ಠಲ
ಹಿಂದೆ ಮಾಡಿ ಎಂದೂ ಮಾಡುವಾ ॥ ೬ ॥

ಸುಳಾದಿ ೩

ರಾಗ- ಶಂಕರಾಭರಣ, ಧ್ರುವ ತಾಳ

ಕಾಮ ಕೆಂಗೆಡಿಸುತಲಿದೆ ಕ್ರೋಧ ಬಾಧಿಸುತಿದೆ ।
ಲೋಭ ಲಾಭವನ್ನರಿಯದಲಿದೆ ।
ಮೋಹ ಮುಂದುಗೆಡಿಸುತಿದೆ । ಮದ ಮುದವು ಬೀರೂತಿದೆ ।
ಮತ್ಸರವು ತುಚ್ಛನನ. ಮಾಡುತಿದೆ ।
ಏನು ಮಾಡಲಿ ದೇವನಾನಿದು ಬೇಡಿದರೆ ।
ನೀ ನಗುವೆ ನೇಮಿಸಲು ನೋಡಿ ನಗುವೆ ದೇವ ।
ಕಾಮ ಬಡವನ ಬಿಡಲು ಬಾರದೆ ।
ದೂರುವೆನೊ ಸ್ವಾಮಿ ಒಡೆಯಾ ।
ಬಿಡಿಸಯ್ಯಾ ಹಗೆಗಳ ಕಾಟವ ।
ಕೊಡು ನಿನ್ನ ಭಕುತಿ ಸುಖವನು ।
ನಿನ್ನ ಭಕುತಜನರೊಡನಾಡಿಸಿದಚಲಾನಂದ ವಿಠಲ ।
ವಿಭುವೆ ಕಾಮವೆಂಬ ॥ ೧ ॥

ಮಟ್ಟತಾಳ

ಹೆಜ್ಜೆ ಹೆಜ್ಜೆಗೆ ಗೋವಿಂದ ಎಂದೆನದಾ ।

ಲಜ್ಜೆಗೆಟ್ಟ ಪಾಪಿಗೆ ನಿತ್ಯ ನರಕಾ ।
ಲಜ್ಜೆಯನಳಿದ ಮಹಾತ್ಮಗೆ ಹರಿಪಾ ।
ದಾಬ್ಜದ ಮಕರಂದವನು ಸೇವಿಪನು ।
ಸಜ್ಜನ ಪ್ರೀಯ ಅಚಲಾನಂದ ವಿಠ್ಠಲ ।
ಅರ್ಜುನಗೊಲಿದಂತೆವ್ವೊಲಿವನು ಕಾಣಿರೋ ॥ ೨ ॥

ತ್ರಿವಿಡಿ ತಾಳ

ಆರಾರ ಮನೆಗಳಿಗೆ ಹಾರೈಸಿ ಹೋದರೆ ।
ಆರೆನ್ನ ನುಡಿಸ್ಯಾರು ಇತ್ತ ಬಾರೆನ್ನ ನೀನೆತ್ತ ಸಾರುವೆ ।
ಹರಿಯೆ ಸುತ್ತುಮುತ್ತಿತು ಸಂ ।
ಸಾರಾಬ್ಧಿಯುಲೂದರೆ ಎತ್ತ ಸಾರುವೆ ಹರಿಯೆ ।
ಕತ್ತಲೆ ಗಟ್ಟಿತು ಕಂಗಾಣದೆ ಮುಗುಧಾನೆ ।
ಇತ್ತಲೈದ ಅಚಲಾನಂದ ವಿಠ್ಠಲ ಎತ್ತಸಾರುವೆ ॥ ೩ ॥

ಅಟ್ಟತಾಳ

ನಿನ್ನಡಿಂಗರಿಗನೆಂದುರಗ ಲುಂಡಿಗೆಯೊತ್ತಿ ।
ಇನ್ನು ಸಲಹದಿದ್ದರಾರು ಮೆಚ್ಚುವರಯ್ಯಾ ।
ಎನಗೆ ನಿನಗೆ ಆಚಾರ ವಿಚಾರ ।
ಇನ್ನು ನಿನ್ನ ಹಿಡಿದು ಬಿಡೆ ನೀ ಯಾರಿಗಾದರು ಹೇಳೊ ।
ಎನಗೆ ನಿನಗೆ ಆಚಾರ ವಿಚಾರ ।
ಎನ್ನ ಸಲಹದಿದ್ದರೆ ನಿನಗೆ ಭಕುತರಾಣೆ ।
ಎನ್ನೊಡೆಯ ಕೇಳೋ ಅಚಲಾನಂದ ವಿಠ್ಠಲಾ ॥ ೪ ॥

ಏಕತಾಳ

ತಪ್ಪಿಲ್ಲದೆ ಅವಗುಣವಿಲ್ಲದೆ ಅಯ್ಯ ।
ಒಬ್ಬರನೊಬ್ಬರ ಮೊರೆ ಹೋಗುವರೆ ದೇವ ।
ಮೊರೆ ಹೊಕ್ಕವರ ಕಾವನಲ್ಲದೆ ।
ಅಲ್ಲಿ ಕುಲಾಚಾರ ವಸ್ತು ಗುಣಾವಗುಣ ಗಣವನು ।
ಮೊರೆ ಹೊಕ್ಕವರಲಿ ಅರಸುವರೇ ।
ದುರಾಚಾರಿಯಾಗಿ ದುಃಖಭೀತನಾಗಿ ।

ಮೊರೆಹೊಕ್ಕೆ ಕಾಯೊ ಅಚಲಾನಂದ ವಿಠಲಾ ।
ಮೊರೆಹೊಕ್ಕವರಲಿ ಅರಸುವರೇ ॥ ೫ ॥

ಸುಳಾದಿ ೪

ರಾಗ- ವರಾಳಿ ಧ್ರುವತಾಳ

ಹಿಂದಣ ಜನ್ಮಜನ್ಮಾಂತರದಿ ಮಾಡಿದಘವ ।
ನಿವಾರಿಸುವವರು ನಿನ್ನ ದಾಸರು ।
ಇಂದೆನ್ನ ಕವಿವ ದುರಿತ ದುರ್ಜಯ ದುಃಖವ
ದೂರ ಓಡಿಸುವರು ನಿನ್ನ ದಾಸರು
ಮುಂದಣ ಪರಮಾನಂದ ಸುಖವನು ಅನವರತ
ಈವರು ನಿನ್ನ ದಾಸರು ।
ಎಂದುಇದಿಅಲ್ಲದಿದ್ದಡೆ ಜೀವಕಿನ್ನು ಬೇರೆ ಗತಿಯುಂಟೆ
-ನಿನ್ನರಿವಬಗೆ ಮು ।
ಕ್ತ್ಯೊಂದುಂಟೇ ಎಲೆ ದೇವ ನಿನ್ನದಾಸರೆ ಜಗಜ್ಜೀವನರಯ್ಯ ॥
ನಂದ ನಂದನ ನಿನ್ನವರೆ ಜೀವನ ಅಚಲಾ ।
ನಂದ ವಿಠಲರೇಯಾ ಬೇರೆ ಗತಿ ಮತ್ತುಂಟೆ ॥ ೧ ॥

ಮಟ್ಟತಾಳ

ಭೂತದಯಾಪರ ನರನಾಥ ದೇವತಿ ಎಂಬರು ।
ಭೂತಿ ವಿರೋಧ ಮಾಡಿ ಕೈಯ್ಯಾತು ಬೇಡುವ ದೈವವ
-ಸಾತ್ವಿಕವೆಂದು ಬಗೆವರು ಜನರು ।
ಭೂತಳದ ಮನುಜರು ಈ ನೀತಿ ಇನ್ನೇನೆಂಬೆನಯ್ಯಾ ಅಯ್ಯಾ ಅ।
ಜಾತ ಸಕಲ ದೇವರದಾತ ಅಚಲಾನಂದ ವಿಠ್ಠಲ ನೀನಿರುತಿರೆ ।
ಸಾತ್ವಿಕವೆಂದು ಅನ್ಯ ದೇವರ ಈ ಭೂತಳದ ಜನರು ಬಗೆವರು
ಪ್ರತಿದಿನ ॥ ೨ ॥

ತ್ರಿವಿಡಿ ತಾಳ

ಕಬ್ಬಿಣ ತೋದು ಕಾಸಿ ಬಡಿದರೆ ಪರಸುತಾ ಸೋಕದೆ
ಸುವರ್ಣ (ನ್ನ) ಒಪ್ಪೋದೆ ।
ಅನಾದಿ ಅವಿದ್ಯಾ ಕಾಮ್ಯ ಕರ್ಮಗಳಿಂದ ।

ಬೆಂದರೆ ತಾಪದಿಂದ ನೊಂದರೆ ಹೋಹದೆ ಅನಾದಿ ।
ಅಚಲಾನಂದವಿಠ್ಠಲನ ಚರಣ ಶರಣರ ।
ಪರಶು ಪಾದಾಂಬುರುಹ ಸೋಕದನಕ ॥ ೩ ॥

ಅಟ್ಟ ತಾಳ

ಎನ್ನ ಹಳಿಯಲಿ ಜಗವು ಉಗಳಲಿ ಬಂಧುಗಳೆನ್ನ ।
ಮಾನಾ ರಂಗಾ ನಿನ್ನನೆ ನೆಚ್ಚಿಮೆಚ್ಚಿಹದೆನ್ನ ಮನ।
ಕೃಷ್ಣ ನಿನ್ನ ನಂಬಿಹದೆನ್ನ ಮನ ।
ಅಚಲಾನಂದ ವಿಠ್ಠಲ ನಿನ್ನವರೊಲಿಮೆಯ ಸಾರಿತೆನ್ನ ಮನ ॥೪॥

ಏಕತಾಳ

ಹಲವು ಮಾತೇನು ಹಲಧರನನುಜನ ।
ಚಲುವಿಕೆಯನು ಕಂಡು ಮನಸೋತೆನವ್ವ
ಚಲಿಸದು ಚಿತ್ತ ಚಂಚಲ ವಾಗದೆನ್ನಮನ ।
ಕೆಲಬಲದ ಕುಲದವರೆನ್ನ ಹಳಿಯಲೀ ।
ಬೆಲೆವಣ್ಣೆಲ್ಲ ತಾ ವಲುವಂತೆ ಮಾಡೀದ ।
ಸಿಲುಕಿದೆನಚಲಾನಂದವಿಠ್ಠಲಗೆ ।
ಕೆಲಬಲದ ಕುಲದವರೆನ್ನ ಹಳಿಯಲೀ ॥ ೫ ॥

ಜತೆ

ಬೆಂದಸಂಸಾರದಿ ಬಂದು ಬಂದು ನೊಂದೆನೊ ।
ಇಂದೆನ್ನ ಸಲಹೊ ಅಚಲಾನಂದ ವಿಠಲಾ ॥ ೬ ॥

ಆದ್ಯರು ಮುದ್ದು ವಿಠಲ (೧)

ಸುಳಾದಿ ೫

ರಾಗ- ಕಾಂಬೋದಿ ಧ್ರುವ ತಾಳ

ಸತ್ಯವಿದು ಹರಿಯು ಸದ್ಗುಣಗಳೆಂಬೋ ರಾಶಿ ।
ಸತ್ಯವಿದು ಜೀವ ಈಶ್ವರಗೆ ಭೇದ ।
ಸತ್ಯವಿದು ಜೀವರಿಗೆ ತಮ್ಮೊಳು ತಮಗೆ ಭೇದ ।
ಸತ್ಯವಿದು ಜಡ ಜೀವರಿಗೆ ಭೇದ ।
ಸತ್ಯವಿದು ಜಡಗಳಿಗೆ ತಮ್ಮೊಳು ತಮಗೆ ಭೇದ ।

ಸತ್ಯದದು ಜಡ ಈಶ್ವರಗೆ ಭೇದ ।
ಸತ್ಯವಿದು ಕಾಣಪಡವ ಈ ಪ್ರಪಂಚವು ।
ಸತ್ಯವಿದು ಸೃಷ್ಟಿ ಸ್ಥಿತಿ ಪ್ರಳಯವು ವ್ಯವಹಾರ ।
ಸತ್ಯವಿದು ಪಂಚ ಭೇದಗಳೊಡನೆ ಕೂಡಿಹದು ।
ಸತ್ಯವಿದು ಹರಿಯನಂತಾವತಾರದೊಳೈಕ್ಯ ।
ಸತ್ಯವಿದು ಪ್ರತ್ಯಕ್ಷದಿ ಶ್ರುತಿವಾಕ್ಯಗಳನರಿತು ।
ಮಿಥ್ಯಾತಾನುಡಿವನು ನುಡಿಗಳನು ಜರಿದು ।
ತಥ್ಯದಿಂ ಮದನಗೋವಳ ಮುದ್ದುವಿಠ್ಠಲನ್ನ ।
ನಿತ್ಯ ನೀ ಭಜಿಸೆ ನಿತ್ಯಾನಂದ ಸುಖವೀವ ॥ ೧ ॥

ಮಟ್ಟ ತಾಳ

ದ್ವಾಸು ಪರ್ಣಾ ಸಯುಜಾಸಖಾಸಮಾನಂ ವೃಕ್ಷಂ ।
ಪರಿಷಸ್ವಜಾತೆ ತಯೋರನ್ಯಪಿಪ್ಪಲಸ್ವಾದತಿ ।
ಅಭಿಚಾಕಸೀತಿ, ಒಂದು ವೃಕ್ಷದಲೆರಡು ಕನಕಪಕ್ಷಿ ।
ಒಂದಾನೊಂದುಗಲವು ಕುಂದಣವಾಗಿಪ್ಪವು ।
ಒಂದು ಫಲಂಗಳನುಂಬೋದು ಮ।
ತ್ತೊಂದು ಫಲಂಗಳ ನುಣ್ಣದು ಆ ।
ನಂದ ಸಿಂಧು ಮುದ್ದು ವಿಠ್ಠಲನೆ ಪರದೈವ ॥ ೨ ॥

ತ್ರಿವಿಡಿ ತಾಳ

ಮಾಡುವನು ಹರಿಸಾಕ್ಷಿಯಾಗಿ ಜೀವರೊಳಿದ್ದು ।
ಮಾಡಿಸುವ ಪ್ರೇರಿಸಿ ತಾನೊಡೆಯನಾಗಿ ।
ಮಾಡಿದ ಸತ್ಕರ್ಮದಿಂದ ಪೂಜೆಯಗೊಂಡು ।
ನೀಡುವನು ಅವರ ಯೋಗ್ಯತೆ ತಕ್ಕ ಫಲವನ್ನು ।
ಬೇಡಿ ಭಜಿಸಿರೊ ನಮ್ಮ ಮುದ್ದು ವಿಠಲರೇಯಾ ।
ನಾಡಿನೊಳಗವನೆ ಜಗದೊಡೆಯ ಪರದೈವ ॥ ೩ ॥

ಅಟ್ಟತಾಳ

ಸಂತತ ಸಲಹೊ ಮಂಗಳಮಾಡಿ ।
ಕೃತ್ಸ್ರ ಚಾಂದರಾಯಣಂಗಳ ಚರಿಸಿದರಿನಿತಿಲ್ಲ ।
ಸಂತತ ಹರಿಯ ಸಂಕೀರ್ತನೆ ಲಕುಮಿಯ ।

ಕಾಂತನ ಸಂಪ್ರೀತಿಗಿದೆ ಕಾರಣವೈಯ್ಯಾ ।
ಕಂತು ಪಿತ ಮುದ್ದು ವಿಠ್ಠಲನ್ನ ನಾಮವ ।
ಭ್ರಾಂತನಾಗದೆ ಬಳಲದೆ ನೆನೆ ಮನವೆ ॥ ೪ ॥

ಆದಿತಾಳ

ನಾರಾಯಣ ನಿನ್ನ ನಾಮವೆ ನೆನೆಯದೆ ।
ಘೋರ ಸಂಸಾರ ಸಾಗರದೊಳು ಬಳಲಿದೆ ।
ಧೀರ ಅನಾಥರೊಡಿಯನೆ ಕರುಣಿಸೊ ।
ದುರಾಗ್ರಹದ ವಿಷಯದ ಬಾಧಿಗೆ ಆರಲಾರೆ ಆರಲಾರೆ ।
ಏರಿಸಿ ನಿನ್ನ ದಿವ್ಯನಾಮುವೆಂಬೊನಾವಿಯ ।
ಸೇರಿಸು ನಿನ್ನವರೊಳು ಮುದ್ದು ವಿಠ್ಠಲರೇಯಾ ॥ ೫ ॥

ಜತೆ

ಶ್ರೀನಾಥನೆ ನಿನ್ನ ಭಕುತಿಯನ್ನೆ ಇತ್ತು ।
ಮನ್ನಿಸಿ ಕಾಯಲ ಮುದ್ದು ವಿಠ್ಠಲರೇಯಾ ॥ ೬ ॥

ಸುಳಾದಿ ೬

ರಾಗ ಧ್ರುವತಾಳ

ಆವನ ಭಯದಿಂದ ಮರುತಾ ತಿರುಗುತಿಪ್ಪಾ ।
ಆವನ ಭಯದಿಂದ ಇನನು ದಹಿಸುತಿಪ್ಪಾ ।
ಆವನ ಭಯದಿಂದ ಅಗ್ನಿ ಸರ್ವಭುಂಜಿಪಾ ।
ಆವನ ಭಯದಿಂದ ಮೃತ್ಯುಬಿಡದೆಕೊಲ್ಲುವಾ ।
ಆವನ ಆಜ್ಞದಿಂದ ಅನಂತಾನಂತವೇದಾ ।
ಸಾವಧಾನದಲಿಂದ ತುತಿಸುತಲಿಪ್ಪವೊ ।
ಆ ವಿಭುವೆ ನಮ್ಮ ಕಾವು ದೇವ ನೆಂದರಿದು ।
ಭಾವಿಸತಿ ಮನವೆ ಮುದ್ದು ವಿಠ್ಠಲನಾ ॥ ೧ ॥

ಮಟ್ಟತಾಳ

ಮೊದಲಿಗೆ ಉದಕವ ಯರಿಯೆ ತರುವತಾನೆ ।
ಒದಗಿ ಫಲಗಳಿಪ್ಪವು ತೊಂಬಗೆ ನೀರುಬ್ಬಿ ।
ಮುದದಿ ಆವನ ಪಾದ ಭಜನಿಯ ಮಾಡಲು ।

ಪ್ರಾಣಗಾಹುತಿ ನೀಯೆ ಇಂದ್ರಿಯಗಣದಂತೆ ।
ಉದರಪೋಷಣ ದೈವ ಮನದಣಿದಿಪ್ಪವೆ ।
ಆದಿ ಮಾರುತಿ ಮುದ್ದು ವಿಠಲನಿರುತಿರಲು ।
ಸಾಧಿಸಿ ಕಾಡಂಬಾದ್ಯೈವದ ಘಸಣ್ಯಾಕೆ ॥ ೨ ॥

ತ್ರಿಪುಟತಾಳ

ಏಕಮೇವಾ ದ್ವಿತಿಯನೆಂದು ವೇದಪೇಳಲು ।
ಲೋಕದ ಜನರು ವಿವೇಕವನರಿಯದೆ ।
ತಾಕೆಡುತಲಿಪ್ಪರೋ ಲೋಕದ ಜನರು ।
ಆ ಕಮಲೋದ್ಭವ ಸುರಪತಿಸುರ ।
ನೀಕವಂದಿತ ಮುದ್ದು ವಿಠ್ಠಲರೇಯನ ।
ಶ್ರೀಕರ ಮೂರ್ತಿಯ ಭಜನೆಯನರಿಯದೆ ।
ತಾ ಕೆಡುತಲಿಪ್ಪರೋ ಲೋಕದ ಜನರು ॥ ೩ ॥

ಅಟ್ಟತಾಳ

ಬುದ್ಧಿಪೂರ್ವಕವಾಗಿ ಅನ್ಯ ದೇವತೆಗಳ ।
ಶ್ರದ್ಧೆಯಿಂದ ಅನುದಿನದಲಿ ಭಜಿಸಲು ।
ನಿದ್ರೆ ಗೈದವರ ಪಾದವ ತೊಳದಂತೆವೋ ।
ಬಿದ್ದು ಪೋಗುವೋವು ಅವರಿತ್ತ ಫಲಗಳ ।
ಭದ್ರಗತಿಗೆ ಸಾಧನವಾಗದು ನಮ್ಮ ।
ಮುದ್ದು ವಿಠ್ಠಲನ್ನ ಪಾದ ಕಮಲಗಳು ।
ಪೊದ್ದು ಬದುಕಲರಿಯದ ಪಾಪಿ ನರರಿಗೆ ।
ಉದ್ಧಾರಯಿಲ್ಲವೋ ಸಂಸಾರದಿಂದಾ ॥ ೪ ॥

ಆದಿತಾಳ

ಇಂದ್ರಿಯಗಳು ತಾವು ಬಂಧಿಸಿ ಎನ್ನನು ।
ಸಂದಿಸಿ ತಮ್ಮ ತಮ್ಮ ಗೊಂದಿಗೆಳವುತವೆ ।
ಮಂದರೋದ್ಧರ ಕೇಶವ ಬಂದುನೀ ಎನ್ನನು ।
ಚಂದದಿ ಪಾಲಿಸೊ ತಂದೆ ಮುದ್ದು ವಿಠ್ಠಲರೇಯಕರುಣಿ ।
ಮಂದರೋದ್ಧರ ಕೇಶವಾ ॥ ೫ ॥

ಜತೆ

ನೀನಲ್ಲದನ್ಯತ್ರ ದೈವಂಗಳೆನಗಿಲ್ಲಾ ।
ದೀನನಾಥ ಮುದ್ದುವಿಠ್ಠಲರೇಯಾ ॥ ೬ ॥

ಮುದ್ದು ವಿಠಲ (೩)

ಸುಳಾದಿ (೭)

ರಾಗ ಶಂಕರಾಭರಣ ಧ್ರುವ ತಾಳ

ಶ್ರೀರಮಣಿ ಕುಚಕುಂಕುಮಾಂಕಿತದ ಚರಣಗಂ ।
ಭೀರ ಸುಲಲಿತ (ಶುಭಾಂಗ) ಸು ಮಾಂಗದಲ್ಲೆಸವ ಚರಣ ।
ಧಾರುಣಿಯೆಲ್ಲ ಈರಡಿಯು ಮಾಡಿದ ಚರಣ ।
ಮೀರಿ ಲೋಕಗಳ ಖರ್ಪರ ಒಡೆದ ಚರಣ ।
ವಾರಿಜಾಸನನರ್ಘ್ಯ ಕೈಕೊಂಡ ಚರಣ ಭಾ ।
ಗೀರಥಿಯು ಪಡೆದ ನೆರೆ ಪರಮಪಾವನಚರಣ ।
ಸಾರಿದರಭೀಷ್ಟಗಳ ಪೂರೈಪ ಚರಣ ।
ಕಾರುಣ್ಯದಿಂದ ಭಕ್ತರ ಪೊರೆವ ಚರಣ ।
ಕಾರುಣ್ಯನಿಧಿ ಸಿರಿ ವೆಂಕಟಧೀಶ ಮುದ್ದು ವಿಠ್ಠಲ್ಲಾ ।
ಪಾರ ಮಹಿಮನೆ ನಿನ್ನ ಚರಣ ಪಾಲಿಸೊ ದೇವ ।
ಶ್ರೀರಮಣಿ ಕುಚಕುಂಕುಮಾಂಕಿತ ಚರಣ ॥ ೧ ॥

ಮಟ್ಟತಾಳ

ಮುನಿಶಾಪದಿ ಶಿಲಿಯಾಗಿದ್ದ ಅಹಲ್ಯಾದೇವಿಯ ।
ಕ್ಷಣ ಮಾತುರ ನಿಜ ಸತಿಯ ಮಾಡಿದ ಚರಣ ।
ಮುನಿಗಳ ಹೃತ್ಪದ್ಮದಲ್ಲಿಯಿಪ್ಪ ಚರಣ ।
ಹನುಮ ಸುಪರ್ಣರ ಕರಕಮಲದೊಳಿಪ್ಪ ಚರಣ ।
ಘನ ಮಹಿಮ ವೆಂಕಟಾಧೀಶ ಕರುಣಾಳೆ ಮುದ್ದುವಿಠಲ ।
ಅನುದಿನ ಎನ್ನ ಮನದಲ್ಲಿರಿಸೊ ನಿನ್ನ ಚರಣ ॥ ೨ ॥

ತ್ರಿವಿಡಿತಾಳ

ಬಾಲಕತನದಲ್ಲಿ ಭಂಡಿ ಮುರಿದ ಚರಣ ।
ಕಾಳಿಂಗನ ತುಳಿದು ನಾಗಗನ್ನಿಯರಿಗೆ ।

ತಾಳಿ ಭಾಗ್ಯವನಿತ್ತ ದಯಾಳು ನಿನ್ನ ಚರಣ ।
ನೀಲೋತ್ಪಲಶಾಮ ಶ್ರೀವೆಂಕಟಾಧೀಶ ಕರು ।
ಣಾಳಿ ಮುದ್ದು ವಿಠ್ಠಲ ಅಪ್ರಾಕೃತ ಚರಣ ॥ ೩ ॥

ಅಟ್ಟತಾಳ

ಧ್ವಜ ವಜ್ರಾಂಕುಶ ಯುವ ಪದುಮದಿಂದ ವೊಪ್ಪುವಚರಣ ।
ಗೆಜ್ಜೆ ಘಲು ಘಲುಕೆನೆ ಕುಣಿವ ಚರಣ ।
ಅಜಭವ ಸುರರು ಭಜಿಪ ಚರಣ ।
ವ್ರಜದ ಭೂಮಿಯನಲಂಕರಿಸುವ ಚರಣ ।
ತ್ರಿಜಗ ವಂದಿತ ವೆಂಕಟೇಶ ಮುದ್ದುವಿಠ್ಠಲ ।
ನಿಜಕರುಣಾಳು ನಿನ್ನ ಚರಣ ಪಾಲಿಸೊಸ್ವಾಮಿ ॥ ೪ ॥

ಏಕತಾಳ

ಚಂದಿರಾ ಬಿಂಬಾನಂತ ಕೋಟಿನಿಂದಿಪ ನಖ ।
ಚಂದ್ರಿಕೆ ಉಳ್ಳ ಚರಣ ।
ಕೆಂದಾವರಿಯ ಪೋಲುವ ದಿವ್ಯಚರಣ ಸುರ ।
ವೃಂದಗಳರ್ಚಿಸಿ ಸುಖಿಸುವ ಚರಣ ಕೃಪಾ ।
ಸಿಂಧು ಶ್ರೀ ವೆಂಕಟೇಶ ಮುದ್ದು ವಿಠ್ಠಲನೇ ।
ಇಂದೆನ್ನ ಮನದಿ ನಿಲ್ಲಿಸೊ ನಿನ್ನಯ ಚರಣ ॥ ೫ ॥

ಜತೆ

ಶ್ರೀರಮಣ ವೆಂಕಟಾಧೀಶ ಮುದ್ದುವಿಠ್ಠಲ ।
ಕರುಣಾಳುವೆ ನಿನ್ನ ಚರಣ ಪಾಲಿಸೊ ದೇವಾ ॥ ೬ ॥

ಮುದ್ದು ವಿಠ್ಠಲ (೪)

ಸುಳಾದಿ ೮

ರಾಗ- ನಾಟಿ ಧ್ರುವತಾಳ

ಮುಡಿಯು ಮುತ್ತಿನ ಜೊಲ್ಲೆಯುದ ಕಸ್ತೂರಿಯ ನಾಮ ।
ಪಿಡಿದೊಪ್ಪಿ ಉಡಿಯೆ ಪೀತಾಂಬರ ಎಸಿಯೆ ।
ಒಡಲು ಕುಂಕುಮ ಚಂದನದ ಕೇಸರ ಕುಸರುಗಳ ।

ತೊಡರುಗಳಿಸೆಯೆ ವೀರಕಡೆಯುಲೀಯೆ ।
ಎಡದ ಕರದಲ್ಲಿ ಚಾಪವನು ಪಿಡಿದುನಿಂದ ನೋಡೆ ।
ಪಿಡಿದು ಬಾಣವನು ಕರಕಮಲದಲ್ಲಿ ।
ಮಡದಿ ಲಕ್ಷುಮಿ ವಾಯು ಪುತ್ರರೊಡಗೂಡಿ ।
ಕಡು ಚೆನ್ನು ಮೆರೆವ ಸೋಜಿಗದ ದೇವನ ।
ಪಿಡಿದು ಮೆಲ್ಲಡಿಗಳನು ಬಿಡದೆನವ್ವ ಎನ್ನಪ್ರಾಣ ।
ಪ್ರಾಣ ದೊಡಿಯ ಶ್ರೀರಾಮುರಾಯ ಮುದ್ದುವಿಠಲನಾ ॥ ೧ ॥

ಮಟ್ಟತಾಳ

ಮರ್ತ್ಯನಂತೆ ನೀನು ಮರ್ತ್ಯಲೋಕದೊಳವತರಿಸಿ ಮಹ ।
ದೈತ್ಯರ ಸಂಹಾರ ಮಾಡಿದಗೆ ।
ನಿತ್ಯ ನಿರಂಜನಗೆ ಶಿಕ್ಷೆಯ ಮಾತುಗಳಿವು ।
ವಾರ್ತೆ ಅಲ್ಲದೆ ಪರಾರ್ಥವು ಕಾಣಿರೋ ತನ್ನ ।
ಕೀರ್ತನೆ ಮಾಡುವ ಪೊಲಿವಿಕೆ ರಾಮುಮುದ್ದುವಿಠ್ಠಲ ॥ ೨ ॥

ರೂಪಕತಾಳ

ಹರಿನಾಮ ಒಂದೆ ಏನಿತ್ತುಪಾರ ಕಾಣ ಮಾಡಲಿಲ್ಲ ।
ಪರಿಹರಿಸಲ್ಲಾಪದು ಹರಿಸಮುವಾದಂಥದಿವ್ಯಕೋಲು ಸಾ ।
ಸಿರನಾಮಕ್ಕೆ ಸರಿಯಾಗಿಪ್ಪದು ರಾಮುನಾಮ ಒಂದಯ್ಯಾ ।
ಸಿರಿರಾಮುರಾಯ ಮುದ್ದು ವಿಠಲನನಾಮುದ ಮಹಿಮೆಯ।
ಗಿರೀಶ ಗೋವಿಂದ ವೇರಲ್ಲದೆ ಬಲ್ಲರೊಡನೆ ॥ ೩ ॥

ಝಂಪಿತಾಳ

ಒಂದು ಕಡೆಯುಲಿ ಶಿವ............... ಮ ।
ತ್ತೊಂದು ಕಡೆಯುಲಿ ....ಋಷಿಗಳನು ।
ಒಂದು ಕಡೆಯುಲಿ ನೈದಿತು............ಸುರನ ಮ ।
ತ್ತೊಂದು ಕಡೆಯುಲಿ ವೈದಿತ್ತು ಪೊರವಾ ।
ಇಂದಿರೆ ಗೂಡಿ ಸಾರ್ದನಂದಪುಥ್ಫಳಿ ಚಂದ ।
ಚಂದದಲಾಡಿ ಅಸುರ ಮೋಹಕನಾಗಿ ।
ಚಂದಾದಲ್ಲಿ ಸುರರಿಗಾನಂದ ಮರರಿಗೆ ।

ಪೊಂದಲಾಡಿತ್ತೆ ಬೊಮ್ಮ ಮುದ್ದು ವಿಠ್ಠಲ ॥ ೪ ॥

ಏಕತಾಳ

ಆವ ದೇವಕ್ಕಳ ಸಲುಹಿದೆ ।
ಆವ ದೇವ ದಶ ಕಂಠನ ಮಡುಹಿದ ।
ಲಾವಕ ತನುಜಂಗೆ ಸ್ಥಿರ ಪದವಿಯನಿತ್ತು ।
ಆವಾವ ವಿಶ್ವರೂಪವ ತೋರಿಸಿ ।
ದೇವ ಸಮೋರಗ ಮೃಗಾದಿಗಳಿಗೆ ಪುಹಿವೆ ।
ರಾಮರಾಯ ಮುದ್ದು ವಿಠ್ಠಲನಾ ॥ ೫ ॥

ಜತೆ

ಜಯಜಯ ಶ್ರೀರಾಮ ರಾಯ ಮುದ್ದು ವಿಠಲ ನವೊ !
ಜಯ ಜಯ ಜಯತು ಶ್ರೀರಾಮನಾಮಾ ॥ ೬ ॥

ಯೋಗೇಂದ್ರ ವಿಠಲ (೧)

ಸುಳಾದಿ ೯

ರಾಗ ನಾಟಿ, ಧ್ರುವ ತಾಳ

ಭವವೆಂಬೊಗಜಕೆ ಪಂಚಾನನ ಹರಿನಾಮಾ
ಭವವೆಂಬೊಗಿರಿಗೆ ಕುಲಿಶವಯ್ಯಾ ।
ದುರಿತವೆಂಬಡವಿಗೆ ದಾವಾನಲ ಹರಿನಾಮ ।
ದುಃಖವೆಂಬೊಶರಧಿಗೆ ವಡವಾನಳ ।
ಸಂಸಾರವೆಂಬೊ ನದಿಗೆ ಹರಗೋಲು ಹರಿನಾಮ ।
ಬೇಡುವರಿಗೆ ಕಾಮಧೇನು ಹರಿನಾಮ ।
ಹರಿನಾಮ ಪಾಂಚಾಲಿಯ ಅಭಿಮಾನಕಾಯಿತು ।
ಹರಿನಾಮ ಪಟ್ಟವಗಟ್ಟಿತು ವಿಭೀಷಣಗೆ ।
ಹರಿನಾಮ ಅಜಮಿಳನ ಪಾತಕವಕೆಡಿಸಿ ।
ವೈಕುಂಠಕ್ಕೊಯ್ಯಿದೇ ಜಗವರಿಯೇ ।
ಹರಿನಾಮ ಪ್ರಲ್ಹಾದನ ಪರಿಪರಿ ಪಾಲಿಸಿತು ।
ಧ್ರುವ ವಿದುರನ್ನ ಉನ್ನತ ಮಾಡಿತು ।

ಮೃತ್ಯುವಿಗೆ ಮೃತ್ಯುಯೆನಿಸೋದು ಹರಿನಾಮು ।
ಮಹಾಪಾಪಕ್ಕೆ ಪ್ರಾಯಶ್ಚಿತ್ತವಯ್ಯಾ ।
ಯೋಗಿಂದ್ರ ವಿಠ್ಠಲನ್ನ ನಾಮುಭಕ್ತರಿಗೆ ವಜ್ರ ।
ಪಂಜರವಾಗಿ ಸುಖವೀವದಯ್ಯಾ ॥ ೧ ॥

ಮಟ್ಟ ತಾಳ

ಸಕಲ ಸಿದ್ಧಿಗಳ ನೀವುದು ಹರಿನಾಮು ।
ಮುಕುತರ ವೊಡನಾಡುತಿಪ್ಪುದು ಹರಿನಾಮು ।
ಕಕುಲಾತಿಯ ಬಿಡಿಸಿ ಪೊರೆವದು ಹರಿನಾಮು ।
ಲಕುಮಿರಮಣ ಶ್ರೀಯೋಗೇಂದ್ರ ವಿಠ್ಠಲನ್ನ ।
ಭಕುತರ ವೊಡನಾಡು ದುಃಸಂಗವಜರಿದು ।
ಸಕಲಸಿದ್ಧಿಗಳನ್ನೀವುದು ಹರಿನಾಮಾ ॥ ೨ ॥

ತ್ರಿವಿಡಿ ತಾಳ

ಜಾಗುಮಾಡದೆ ನಾಮಾಮೃತ ಉಂಡು ।
ರೋಗ ಪರಿಹಾರ ಮಾಡಿ ಕೊಳ್ಳಿರೋ ।
ಹಾಗ ಪತ್ತದು ವೇಳ್ಯ ಸವಿಯದು ।
ಲೋಗರಿಗೆ ಬಾಯಿ ತೆರಿಯಲಾಗದು ।
ಹೋಗಿ ವನದೊಳು ಹುಡಕಲಾಗದು ।
ಯೋಗೇಂದ್ರ ವಿಠ್ಠಲನ್ನ ನಾಮು ಔಷಧ ।
ಹೋಗಿ ವನದೊಳು ಹುಡುಕಲಾಗದು ॥ ೩ ॥

ಅಟ್ಟತಾಳ

ಅಂಜಲ್ಯಾತಕೆ ಪ್ರಾಣಿ ಹರಿನಾಮುವೆ ವಜ್ರ ।
ಪಂಜರವಾಗಿರೆ ಸುರಧೇನು ಕೈಸೇರಿ ।
ಎಂಜಲಿಗಾಸೆ ಹಾವಿನ ಭೀತಿ ಶೀ ಇರೆ ।
ಆಂಜನೆ ತನಯುನ್ನ ಕರುಣದಿ ಸಲುಹಿದ ।
ಕಂಜಾಕ್ಷ ಯೋಗೇಂದ್ರ ವಿಠ್ಠಲನ್ನ ನಾಮು ।
ಎಂಜಲಿಗಾಸೆ ಹಾವಿನ ಭೀತಿಶೀ ಇರೆ ॥ ೪ ॥

ಏಕತಾಳ

ಕರಿ ಅಂಜುವದಂಕುಶಕ್ಕೆ ।

ಗಿರಿ ಅಂಜುವದು ಕುಲಿಶಕೆ ।
ತರಣಿ ಗಂಜುವದು ತಿಮರ ।
ಸಿರಿ ಯೋಗೇಂದ್ರ ವಿಠ್ಠಲನ್ನ ನಾಮಕ್ಕೆ ।
ಹರಿವದು ಪಂಚ ಮಹಾ ಪಾತಕ ।
ಕರಿ ಅಂಜವದಂಕುಶಕ್ಕೇ ॥ ೫ ॥

ಜತೆ

ನಾಮಾಮೃತವ ಸವಿದು ಧನ್ಯ ನಾಗೆಲೊಮನುಜ ।
ಧೀನುಂತರೊಡಿಯ ಯೋಗೇಂದ್ರ ವಿಠ್ಠಲವೊಲಿವಾ ॥ ೬ ॥

ನರಕಂಠೀರವ ವಿಠಲ (೧)

ಸುಳಾದಿ ೧೦

ಧ್ರುವ ತಾಳ

ಎನ್ನವಗುಣಗಳನು ಎಣಿಸದಲೆ ಎಲೋದೇವ ।
ಚನ್ನಾಗಿ ನೀನು ಸಲೆರಕ್ಷಿಸೆನ್ನ ।
ನಿನ್ನ ಗುಣಗಳನು ನೆನೆವಂತೆ ಮಾಡೆನ್ನ ।
ಮನಸಿಜನಯ್ಯ ನಿನ್ನವ ನೆನಿಸಿದೆ ।
ಅನಾಥ ಬಂಧುವೆ ನಿನ್ನ ನೆಂಬಿದೆ ನಾನು ।
ಪನ್ನಗ ಶಯನ ಪಾವನ್ನ ಮೂರುತೆ ।
ಮುನ್ನೆ ನಾ ಮಾಡಿದ ಕರ್ಮದ ಫಲದಿಂದ ।
ಎನ್ನ ಕಾಲನ್ನ ಬಳಿಯಲಿ ಪೋಗಿಸದೆ ।
ಎನ್ನ ಬೀದಿಯ ಬಾಲನ ಮಾಡಿ ಕೆಡಿಸದೆ ।
ನಿನ್ನ ಎಂಜಲನುಣಿಸಿ ಪೊರಿಯಬೇಕು ।
ನಿನ್ನ ತೊತ್ತು ತೊತ್ತು ಮಗನು ನಾ ।
ಎನ್ನ ಸಲಹಯ್ಯಾ ನರಕಂಠೀರವ ವಿಠ್ಠಲಾ ॥ ೧ ॥

ಮಟ್ಟ ತಾಳ

ಕುಲಾಲ* ಗುಳಿಯ ಕಿಚ್ಚಿನಂದದಲಿ ।

* ಕುಂಬಾರನ ತಗ್ಗಾದ ಆವಿಗೆ.

ಒಳಗೆ ಬೇವುತಲಿದೆ ದೇಹಪಿಕಾಂದ ।
ಕಳವಳಿಸುತ ಕಡು ವಿಷಯುದ ಮದದಲ್ಲಿ ।
ತೊಳಲಿ ತೊಳಲಿ ಬೆಂಡಾಗಿ ಬಳಲಿದೆ ।
ನಳಿನ ನಾಭ ನರ ಕಂಠೀವ ವಿಠಲ ।
ಸುಲಭ ದೇವರ ದೇವ ಭಕುತರ ಕಾವಾ ॥ ೨ ॥

ತ್ರಿವಿಡಿ ತಾಳ

ಸುರ ತರುವು ಬಿಟ್ಟು ಬೊಬ್ಬಲು ನರಸುವ ।
ತಿರುಳನುಗಳಿದೆ ಬಚ್ಚಿಡುವ ।
ಬಳಲೂವ ಜೀವ ರಾಶಿಗಳಿಗೇನಂಜೇ ಧೀಮಂತ ।
.ನರಕಂಠೀರವವಿಠ್ಠಲನೇ ॥ ೩ ॥

ಅಟ್ಟತಾಳ

ಹೇಮಹಿತ್ತಾಳೆಯ ಬಣ್ಣವಂದೆ ಎಂಬ ।
ತಾಮಸ ಪಾಪಿ ಜೀವರ ಬುದ್ಧಿಗೇನಂಬೆ ।
ದೀಮಂತ ನರಕಂಠೀರವ ವಿಠ್ಠಲ ।
ಸೀಮೆ ಭಣಗು ದೈವಂಗಳು ಸರಿಯೇ ॥ ೪ ॥

ಆದಿತಾಳ

ಕರಚರಣಂಗಳು ತಲೆದೂಗದ ಮುನ್ನೆ ।
ಹರಿಯಾತ್ರೆ ಸೇವೆಲಿನಿರತನಾಗಿರಬೇಕು ।
ಪರಮ ಪುರುಷ ನರಕಂಠೀರವ ವಿಠ್ಠಲ ।
ಪೊರೆವನು ತನ್ನವ ನೆನೆ ಕರುಣದಲಿ ॥ ೫ ॥

ಸೊಬಗು ವಿಠ್ಠಲ (೧)

ಸುಳಾದಿ ೧೧

ರಾಗ ಸಾವೇರಿ ಧ್ರುವತಾಳ

ಗಿರಿಯ ಶಿಖರವನೇರಿ ತಲೆವೂರಿ ಬಹುಕಾಲ ।
ತರಗೆಲಿಯನ್ನೇ ಮೆದ್ದು ಜಪವನ್ನೇ ಮಾಡಿ ।
ಧರೆ ಎಲ್ಲವು ತಿರುಗಿ ಮಾಸೋಪವಾಸವಿದ್ದು ।

ಚರಿಸಿ ಚಂದ್ರಾಯಣವ ಚರುವನುಂಡು ।
ಪರಿಪರಿ ಆಶ್ರಮಂಗಳನೆಲ್ಲವು ಧರಿಸಿ ।
ಬೆರಳನೆಣಿಸುತ ಬೇಯ್ವಬಿಸಲೊಳಿದ್ದು ।
ಬರಿದೆ ತನು ಬಳಲಿ ಧಾವತಿಗೊಂಡದೇನಹುದು ।
ಹರಿ ಪದದಿ ಮನ ವೆರಕವಿಲ್ಲದನಕ ।
ಪಿರಿದಾದ ಕೃತು ವ್ರತ ಜಪಗಳ ಮಾಡಿದ ಪುಣ್ಯ ।
ಬರಿದಾದ ಬಳಿಕ ಧರಿಗಿಳಿಯಬೇಕು ।
ವರದೊರದು ಶ್ರುತಿ ಸ್ಮೃತಿ ಪುರಾಣಗಳು ಪೇಳುತಿವೆ ।
ಸಿರಿ ಅರಸ ಸೊಬಗು ವಿಠ್ಠಲರೇಯನ ।
ಕರಣಶುದ್ಧನಾಗಿ ಮನವಮುಟ್ಟಿ ನೆನವುದಕ್ಕೆ ।
ಸರಿಗಾಣೆ ಸರಿಗಾಣೇ ಸಂದೇಹವಿಲ್ಲಕೇಳಿ ॥ ೧ ॥

ಮಟ್ಟತಾಳ

ಶ್ವಾನನ ಕುನ್ನಿಯನು ಕೊಂಕಳವೊಳಗಿಟ್ಟು ।
ವಾರಣಾಸಿಯಲ್ಲಿ ಮುಳುಗುವ ತೆರದಂತೆ ।
ಮಾನವ ಕೇಳು ಮದ ಮತ್ಸರವ ಬಿಡದೆ ।
ಏನು ಮಾಡಿದರದು ವೃಥಾಯವಲ್ಲವೆ ।
ಹೀನ ಮನುಜರ ಸಂಗ ಏನು ಮಾಡಿದರದು ವೃಥಾಯವಲ್ಲವೆ ।
ದೀನನಾಥ ಸಿರಿ ಸೊಬಗು ವಿಠ್ಠಲನ್ನ ।
ಧ್ಯಾನದೊಳಿರೆ ಸಕಲ ಸಂಪದ ಬಪ್ಪದೋ ॥ ೨ ॥

ತ್ರಿವಿಡಿತಾಳ

ತನುವ ದಂಡಿಸಿ ಮನವ ಮರುಗಿಸಿ ।
ಅನುಪಮ ಹರಿಯ ಭಕುತಿಸುಧಿಯನು ।
ಅನುಭವವಿಲ್ಲದೆ ಅಲವಕರ್ಮಗಳೆನಿತು ಮಾಡಿದರೇನು ಫಲವಯ್ಯಾ ।
ಘನ ಮಹಿಮ ಸಿರಿ ಸೊಬಗು ವಿಠ್ಠಲನ್ನ ।
ನೆನವೆ ಭವಗಿರಿ ಕುಲಶ ಕಾಣಿರೋ ॥ ೩ ॥

ಅಟ್ಟತಾಳ

ಪರಿಪರಿಯ ಪಾತಕ ಭವರೋಗಕ್ಕೆ ।
ನರಹರಿನಾಮ ದಿವ್ಯರಸಾಯನಕ್ಕೆ ।
ಅನುಪಮ ಮಾದ ಭಕ್ತಿ ಅನುಪಾನವನಿತ್ತು ।
ದುರಿತ ದೂರ ಸಿರಿಸೊಬಗು ವಿಠ್ಠಲನ್ನ ।
ಚರಣ ಸ್ಮರಣೆ ದುಃಖನಿವಾರಣ ಕಾಣಿರೋ ।
ಅನುಪಮಮಾದ ಭಕ್ತಿ ಅನುಪಾನವನಿತ್ತು ॥ ೪ ॥

ಆದಿತಾಳ

ಹರಿ ಹರಿ ಎಂದು ಬಾಹ್ಯರಂಗದಲ್ಲಿ ।
ಸ್ಮರಣೆ ಹೃದಯದೊಳಗನಿತಿಲ್ಲ ।
ಕರಣ ಶುದ್ಧಿ ಮುನ್ನಿನಿತಲ್ಲಾ ।
ಮರುಳತನದ ಬುದ್ಧಿನೋಡಿರಯ್ಯಯ್ಯಾ ।
ಸ್ಮರಣೆ ಹೃದಯದೊಳಗನಿತಿಲ್ಲಾ ।
ಕರಣ ಶುದ್ಧಿ ಮುನ್ನಿನಿತಿಲ್ಲಾ ।
ಪರಮ ಕರುಣಿ ಸಿರಿಸೊಬಗುವಿಠ್ಠಲನು ।
ನೆರೆನಂಬಿದವಗಲ್ಲದೊಲಿಯ ವೊಲಿಯುವಲಿಯಕಾಣಿರೊ ।
ಸ್ಮರಣೆ ಹೃದಯ ದೊಳನಿತಿಲ್ಲಾ ।
ಕರುಣ ಶುದ್ಧಿ ಮುನ್ನಿನಿತಿಲ್ಲಾ ॥ ೫ ॥

ಜತೆ

ಭಕುತಿ ಜ್ಞಾನವಿಲ್ಲದ ಭಕುತರಿಗೆ ಸುಲಭನೆ ।
ರುಕುಮಿಣಿ ಪತಿ ಸಿರಿಸೊಬಗು ವಿಠ್ಠಲನು ॥ ೬ ॥

ಗರುಡವಾಹನ ಲಕ್ಷ್ಮೀನಾರಾಯಣ

ಸುಳಾದಿ ೧೨

ರಾಗ ಧ್ರುವತಾಳ

ಎಲೆ ಮನ ಮೊದಲಾದ ಅಖಿಳ ಜ್ಞಾನೇಂದ್ರಿಯಂಗಳೆ ।
ಎಲೆ ವಾಗೇಂದ್ರಿಯಾದಿ ಸಕಲ ಕರ್ಮೇಂದ್ರಿಯಂಗಳೆ ।
ಎಲೆ ತತ್ವಾಭಿಮಾನಿ ಎನಿಪ ಸಾರ್ವಭೌಮರೆ ।

ಬಲಗೊಂಡು ಬೇಡಿಕೊಂಬೆ ದಯದಿಂದನುಗ್ರಹಿಸಿ ।
ಸಲಿಗೆ ಬಿನ್ನಪವನು ಸಲಿಸಬೇಕೆಲ್ಲ ನೀವು ।
ಸಲೆ ಕರುಣಾಮೃತದ ಶಲೆಗಳೈ ನೀವೆಲ್ಲರು ।
ಸುಲಭ ಗರುಡವಾಹನ ಲಕ್ಷ್ಮೀನಾರಾಯಣನ ।
ಲಲಿತ ಚಿತ್ತಾನುಸಾರ ನಡಿಸಿರೆಂದು ಪ್ರಾರ್ಥಿಸುವೆ ॥ ೧ ॥

ಮಟ್ಟತಾಳ

ಸ್ವರ್ಗವಾಗಲಿ ಆದು ಅಪವರ್ಗತನಾಗಲಿ ।
ಹರಿ ಚಿತ್ತಕ್ಕೆ ಬಾರದಿರೊಂದು ನಾನೊಲ್ಲೆ ।
ಶೆರೆಮನೆಯಾಗಲಿ ಆದು ನಿರಯ ಯಾತನಾಗಲಿ ।
ಪುರುಷೋತ್ತಮ ನೀ ನಿತ್ತದೆ ಪುರುಷಾರ್ಥವು ಎನಗೆ ।
ಗರುಡವಾಹನ ಲಕ್ಷ್ಮೀನಾರಾಯಣ ಚಿತ್ತಕ್ಕೆ ।
ನೆರೆ ಪ್ರತಿಕೂಲವಾದದ್ದು ಸಮ್ಮತವೆನಗೆ ॥ ೨ ॥

ರೂಪಕತಾಳ

ಶೆರೆಮನೆಯಲಿ ನಿರಯದಲಿಡಲುರಿಯಲ್ಲಿ ।
ಗಿರಿ ಜಲ ಸ್ಥಳದಲ್ಲಿ ಘೋರಹಿ ಮುಖದಲ್ಲಿ ।
ಅರಿಕುಲದ ಖಳರು ದುಷ್ಟೋಕ್ತಿಯಲಿ ಹಗ ।
ಲಿರಳು ಆರ್ಭಕನ ಜನನಿ ಸಲುಹುವಂತೆ ।
ಗರುಡವಾಹನ ಲಕ್ಷ್ಮೀನಾರಾಯಣಸ್ವಾಮಿ ।
ಪೊರೆವ ನಂಬಿದವರ ಸಂದೇಹ ಇನಿತಿಲ್ಲಾ ॥ ೩ ॥

ಝಂಪಿತಾಳ

ಸಿರಿಬೊಮ್ಮ ಮೊದಲಾದಖಿಳಸುರರಿಗೊಡಿಯ ।
ಕರುಣಾಬ್ಧಿ ಸಚ್ಚಿದಾನಂದ ರೂಪ ।
ಘನ ನಿಭ ಶ್ಯಾಮ ನಿಜ ಭಕ್ತ ಸಂರಕ್ಷಕ ।
ಪರಮ ಸ್ವತಂತ್ರ ಪರಮ ಸ್ವತಂತ್ರ ।
ಸರಸಿಜ ಭವಾಂಡದೊಳಹೊರಗೆ ಪ್ರತಿಕಲ್ಪಕ್ಕೊ ।
ಗರುಡವಾಹನ ಲಕ್ಷ್ಮೀನಾರಾಯಣಸ್ವಾಮಿ ।
ಪರಮ ಸ್ವತಂತ್ರ ಪರಮ ಸ್ವತಂತ್ರ ॥ ೪ ॥

ತ್ರಿವಿಡಿತಾಳ

ವರಣಾಶ್ರಮೋಚಿತ ನಿಖಿಳ ಕರ್ಮಶ್ರವಣಾ ।
ವಿರುಕತಿ ಭಕುತಿ ಶಮದಮಾದಿ, ಸಾಧನಗಳ ।
ನಿರುಪಾಧಿಕ ಮಾಡಿ ಹರಿಗೆ ಅರ್ಪಿಸು ಮನುಜ ।
ಬರಿದೆ ದುರ್ವಿಷಯಗಳ ಬಯಸಿ ನೀ ಬಳಲದೆ ।
ಗರುಡವಾಹನ ಲಕ್ಷ್ಮೀನಾರಾಯಣಸ್ವಾಮಿ ।
ಚರಿತೆಯ ಕೊಂಡಾಡು ಚಪಲಚಿತ್ತನಾಗದೆ ॥ ೫ ॥

ಅಟ್ಟತಾಳ

ಏನೇನರಿಯದ ಪಾಮರ ನಲ್ಪಶಕ್ತಿನಾ ।
ಹೀನ ಮನಸಿನ ದುರ್ವಿಷಯಲಂಪಟ ದುಷ್ಟ ।
ದೀನ ಅನಾಥ ಕೃತಘ್ನರೊಳ್ ಮೊದಲಾಗಿ ।
ಏನು ಮಾಯೊದಿ ನಿನ್ನ ಚಿತ್ತಕ್ಕೆ ಬರುವಿನೊ ।
ನೀ ನೊಲಿದೆನ್ನುದ್ಧರಿಸ ಬೇಕಲ್ಲದೆ ಮಗು ।
ಳಾ ನೊಂದುಪಾಯಗಳನು ಕಾಣೆ ನಿನ್ನಾಣೆ ।
ಶ್ರೀನಾಥ ಗರುಡವಾಹನ ಲಕ್ಷ್ಮೀನಾರಾಯಣ ॥ ೬ ॥

ಏಕತಾಳ

ಇನಿತು ವಿವಿಧವಾಗಿ ನಿನ್ನ ಪ್ರಾಪ್ತಿ ।
ಅನುದಿನ ಕೊಟ್ಟು ಪಾವನ ಮಾಡು ನಿನ್ನ ।
ಮನಮುಟ್ಟಿ ಭಜಿಸುವ ಭಾಗ್ಯವ ಬೇಡುವೆ ।
ಕನಸಿನೊಳಾದರು ವಿಷಯಗಳಚಿಂತನೆ ।
ಯ ನೀಯದಲೆ ಸಲಹೊ ಗರುಡ ವಾ ।
ಹನ ಲಕ್ಷ್ಮೀನಾರಾಯಣಸ್ವಾಮಿ ಸರ್ವದ ॥ ೭ ॥

ಜತೆ

ಗರುಡವಾಹನ ಲಕ್ಷ್ಮೀನಾರಾಯಣಸ್ವಾಮಿ ।
ಶರಣ ದೊಡಿಯನೆಂದು ನಂಬಿದೆ ರಕ್ಷಿಸೋ ॥ ೮ ॥

ಸಿರಿಕೃಷ್ಣವಿಠ್ಠಲ

ಸುಳಾದಿ ೧೩

ರಾಗ ವರಾಳಿ ಧ್ರುವತಾಳ

ನಾರಿ ಎಂಬುವಳು ಪುಣ್ಯಮಾರಿ ಕೇಳಿರಯ್ಯ ।
ನಾರಿಯು ಚಿತ್ರದ ಬೊಂಬಿಯನ್ನೋ ।
ವಾರೆನೋಟದಲೊಮ್ಮೆ ನೋಡಲು ಪುಣ್ಯಾಪ ।
ಹಾರವಾಗುವದು ತತ್ಕ್ಷಣದಲ್ಲೀ ।
ಸಾರೆ ಎಲ್ಲಿ ನಿಂದು ಭಾರಿ ಭಾರಿಗೆ ನೋಡೆ ।
ಧೀರರು ಕೆಡುವದಾಶ್ಚರ್ಯ ವೇನೋ ।
ಮಾರನಂಬಿಗೆ ಗುರಿಮಾಡದಲಿರುವಳೆ ।
ನೂರು ವರುಷ ಉಪವಾಸ ಬಿದ್ದವರ ।
ನೂರೊಂದು ಕುಲಕುಂಭಿ ಪಾಕಕ್ಕಿಡದೆ ಬಿಡಳು।
ನಾರಿ ಎಂಬುವಳು ಪುರುಷವೈರಿಕೇಳು ।
ವಾರಿಜಾಕ್ಷ ಸಿರಿಕೃಷ್ಣ ವಿಠ್ಠಲನ್ನ ।
ಸಾರುವರೆಲ್ಲರು ನಾರಿ ಹಂಬಲವ ಬಿಡಿರೋ ॥ ೧ ॥

ಮಟ್ಟತಾಳ

ನಾರಿಗೆ ಮನಸೋತು ರಾವಣ ಏನಾದ ।
ನಾರಿಗೆ ಮನಸೋತ ಸುಯೋಧನನ ನೋಡು ।
ನಾರಿಯಿಂದೆ ಮಡಿದಾ ಕೀಚಕ ಕೇಳಯ್ಯಾ ।
ನಾರಿಯಿಂದೆ ಕೆಟ್ಟಾ ವಾಲಿಯು ಕೇಳಯ್ಯಾ ।
ನಾರಿಯಿಂದೆ ನಹುಷ ಪದದಿಂದ ಚ್ಯುತನಾದ ।
ನಾರಿಯಿಂದೆ ಇಂದ್ರ ದೇಹ ಛಿದ್ರನಾದ ।
ನಾರಿಯಿಂದೆ ಚಂದ್ರ ಕಳೆಗುಂದಿದನಯ್ಯಾ ।
ಮಾರ ಜನಕ ನಮ್ಮ ಸಿರಿಕೃಷ್ಣ ವಿಠ್ಠಲ ।
ನಾರಿಯ ಸೃಜಿಸಿ ಪತಿತರಸದಬಡಿವಾ ॥ ೨ ॥

ತ್ರಿವಿಡಿತಾಳ

ನಾರಿ ಎಂಬ ದಂಡು ಪುರುಷ ಪುರಕೆ ಮುತ್ತೀ ।

ಕೋರೀ ಮಾಡಮೆ ಬಿಡದು ಜಾಗ್ರರಾಗೀ ।
ನಾರಿಯು ಭುಜವೆರಡು ಹುಯುಲುಕಾಳೀ ಕೇಳಿ ।
ನಾರಿಯರ ನೋಟ ಪುರುಷರ ಎದಿಗಂಬೂ ।
ನಾರಿಯು ಸ್ತನ ನೋಡಿ ಪುರುಷನು ವಶನಾಗಿ ।
ನಾರೀ ಅಪ್ಪಣೆಯೊಳು ವರ್ತಿಸುವಾ ।
ನಾರೀ ಹಂಡು ಗೆದ್ದು ದೂರ ಓಡಿಸಿದರೆ ।
ಧಾರುಣಿಯೊಳಗವನೆ ಧನ್ಯ ಪುರುಷ ।
ವೈರಾಗ್ಯ ನಿಧಿಗಳು ನಾರಿಗೆ ಮನಸೋತ ।
ಮಾರುತಿ ಕೇಳಿ ನಿಃಸಂಗರಾಗೀ ।
ನೀರದಾಂಗ ಸಿರಿ ಕೃಷ್ಣ ವಿಠ್ಠಲನಾಣೆ ।
ನಾರಿಯು ರೂಪ ನೆನೆಸಲಾಗದೊ ಮನವೆ ॥ ೩ ॥

ಅಟ್ಟತಾಳ

ಅರವತ್ತು ಸಾವಿರ ವರುಷ ಉಕ್ಕಿನ ಪುಡಿ ಆ ।
ಹರ ವಾಗಿದ್ದಂಥ ವಿಶ್ವಾಮಿತ್ರ ।
ವರ ಕನ್ನಿಕೆಯು ನೋಡಿ ಶ್ವಾನನಾದನು ಮಿಕ್ಕ ।
ನರರ ಪಾಡೇನು ಈ ಧರೆಯೊಳಗೇ ।
ಕರಗದೇ ನವನೀತ ಅಗ್ನಿ ಸಂಬಂಧದಿ ।
ಮರದು ಪೋಗದೆ ನಿನ್ನ ಜ್ಞಾನಭಕ್ತಿ ।
ಪರಮ ವೈರಾಗ್ಯ ನಾರಿಯು ಕಂಡು ನಿಲ್ಲದು ।
ಹರಿದಾಸನಾಗದವ ನಾರೀದಾಸ ।
ಕರುಣಾಸಾಗರ ಸಿರಿ ಕೃಷ್ಣ ವಿಠ್ಠಲನ್ನ ।
ಚರಣವೇ ಗತಿ ಎನ್ನುಪರನಾರಿಯರಬಿಡೋ ॥ ೪ ॥

ಆದಿತಾಳ

ಹೆಂಗಳೀರ ಸಂಗಮಾನ ಭಂಗನಿಶ್ಚಯ ಕೇಳಿರಿ ।
ಹೆಂಗಳೀರ ಸಂಗಜ್ಞಾನ ಭಂಗನಿಶ್ಚಯು ಕೇಳಿರಿ ।
ಹೆಂಗಳೀರ ಸಂಗ ಸುಖ ಭಂಗ ನಿಶ್ಚಯ ಕೇಳಿರಿ ।
ಹೆಂಗಳೀರ ಸಂಗದಿಂದ ರಂಗದೂರಾಗುವ ।

ಮಂಗಳಾಂಗ ಸಿರಿಕೃಷ್ಣ ವಿಠ್ಠಲನು ।
ಹಿಂಗದೊಲಿಯಬೇಕಾದರೆ ಹೆಂಗಳೇರ ಸಂಗಬಿಡಿರೋ ॥ ೫ ॥

ಜತೆ

ಮುನಿಗಳು ಕೆಡುವರು ಹೆಂಗಳೇರ (ಳಿಯರ) ಸಂಗದಿಂದ ।
ಅನಿಮಿಷರೊಡಿಯ ಶ್ರೀ ಕೃಷ್ಣವಿಠ್ಠಲ ಒಲಿವಾ ॥ ೬ ॥

ಕೃಷ್ಣ ವಿಠ್ಠಲ

ಸುಳಾದಿ ೧೪

ರಾಗ ಧ್ರುವತಾಳ

ನೀ ವೊಲಿಯುದಿರಲು ವಸುಧಿಯೊಳಿನ್ನ ।
ಕಾವಜನರಾವರೊ ಶ್ರೀನಿವಾಸ ।
ನೀ ವೊಲಿಯುದಿರಲು ಭಕ್ತಿಯಿಂದ ಭವಾಬ್ಧಿ ।
ನೋವಿಲ್ಲದಲೆ ದಾಟುವೇನೈಯಾ ।
ಈವರೆ ಗೆದ್ದರು ನೀ ವೊಲಿವ ಯೋಗವನೆಂದು ಕಾಣೆನೊ ।
ಮಾವನ ವೈರಿ ವೇಣು ಶ್ರೀ ಗೋಪಾಲಕೃಷ್ಣ ವಿಠಲ ಇಷ್ಟ್ಟಾ ।
ದೇವ ಎನ್ನ ಮನದಿಂದ ಅಗಲದಿರೊ ॥ ೧ ॥

ಮಟ್ಟತಾಳ

ಜಗದೊಳಗೆ ಇಳಿಗರ ಮಗ ವೊಮ್ಮಗನಿರಲು ।
ಬಗೆ ಬಗೆ ವಿದ್ಯೆಗಳ ಪೇಳಿ ಅವರನ್ನು ।
ಸುಗುಣ ರಾಯರಗಳು ಮಾಡರೆನೋಡಾ ।
ಜಗದೊಡಿಯ ಕೃಷ್ಣ ವಿಠ್ಠಲ ನಿನ್ನವರೆ ।
ಮಗೆಂದು ತಿಳಿದೆನ್ನ ಪ್ರಗುಣನ ಮಾಡೊ ॥ ೨ ॥

ತ್ರಿವಿಡಿ ತಾಳ

ಅಂದಜಮಿಳ ಕಂದ ನಾರಗನೆಂದು ।
ಒಂದು ಬಾರೆ ಅಂದನೆಂದು ಬಂದು ಭಕ್ತನ ಕಾ ।
ವಂದು ಪತಿತಪಾವನನೆಂದು ಬಿರಿದು ನೀ ತಂದಿಯುಂತೆ ।

ಇಂದು ಸಲಹೊ ಎನ್ನ ಪೊರೆಯದಿರ್ದಡೆ ಪಾಪ ಎನ್ನ ಆತನ
ರೆನ್ನ ನೋಡಾ ।
ತಂಪೆ ಶ್ರೀಕೃಷ್ಣ ವಿಠ್ಠಲ ಬಿರಿದುದು ಬೇಕಾದಡೆ ।
ಮಂದನ್ನ ಸಲಹಯ್ಯಾ ಮಮತೆಯಿಂದ ॥ ೩ ॥

ಅಟತಾಳ (ಅಟ್ಟ)

ದ್ರೌಪತಿ ದುಃಶಾಸನ್ನ ಪತಿಗಾರದೆ ।
ಶ್ರೀಪತಿ ಸಲಹೆಂದು ಮೊರೆ ಇಡಲು ।
ಆ ಪಾಂಚಾಲಿಯು ಮೊರೆ ಕೇಳಿದಂತೆ ಎನ್ನ ।
ಪಾಪಿ (ಯ) ಮೊರೆ ಕೇಳೋ ಗೋಪಾಲಕೃಷ್ಣ ವಿಠ್ಠಲ ॥ ೪ ॥

ಆದಿತಾಳ

ನಿನ್ನನ್ನೇ ನೆನಿಸಲು ಎನ್ನ ಪಾಪಂಗಳ ।
ಇನ್ನು ಪುಣ್ಯಾಳೋ ಚನ್ನಿಗನೆ ಸನ್ನಷ್ಟನ ನೆಂ ।
ದನವರತ ಬಲು ಬನ್ನ ಬಡುವೆ ಕೇಳೆನ್ನ ಮಾತಾ ।
ಧನ್ಯನ ಮಾಡಲು ನಿನ್ನ ಕೀರುತಿ ಬಲು ।
ಉನ್ನತವಾಹದು ಘನ್ನದಯ್ಯಾ ।
ಮನ್ಮಥ ಮನ್ಮಥ ನಿನ್ನ ಮೂರುತಿ ಬೊ ।
ಮನ್ನ ತೋರಿ ಭವವನ್ನು ಕಳೀ ।
ಚನ್ನ ಕೃಷ್ಣ ವಿಠ್ಠಲ ಎನ್ನ ಪೊರೆಯದಿರೆ ।
ನಿನ್ನವರಾಣೆ ಅನ್ಯಸಾಧನ ಕಾಣೊ ॥ ೫ ॥

ಜತೆ

ಎಂದಿಗಾದರೂ ನಿನ್ನ ಸಂದರುಶನವಿತ್ತು ।
ಮಂದನ ಸಲಹೊ ಮುಕುಂದ ಕೃಷ್ಣವಿಠ್ಠಲ ॥ ೬ ॥

॥ ಶ್ರೀ ಗುರು ಮಧ್ವೇಶ ಕೃಷ್ಣಾರ್ಪಣಮಸ್ತು ॥

ಇನ್ನು (೧೫) ಆದ್ಯರ ಸುಳಾದಿ ಮುಂದೆ ಕೊಡುವೆವು.

ಶ್ರೀ ಮಧ್ವಾಚಾರ್ಯರು ಒಂಭತ್ತು ಜನಕ್ಕೆ

ಯತ್ಯಾಶ್ರಮಕೊಟ್ಟು (೯) ಮೂರ್ತಿಗಳನ್ನು ಕೊಟ್ಟರೆಂಬುದಕ್ಕೆ ಅಪರೋಕ್ಷ ಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠಲ ವಿರಚಿತ ಪದ ೨೨೩

(೧೫೦ ವರ್ಷ ಹಿಂದೆ ಸ್ವಂತ ಬರೆದುದು.)

ಪದ ರಾಗ– ಕಾಂಬೋದಿ ಝಂಪಿ ತಾಳ

ಸುಖತೀರ್ಥರೆದುವರನ ಸ್ಥಾಪಿಸ್ಯೊಂಭತ್ತೆತಿಗಳನು ಮಾಡಿ ಅವರವರಿಗೆ ।
ಅಕಳಂಕ ನಾಮಗಳ ಮೂರ್ತಿಗಳಕೊಟ್ಟ ವಿವರವ ಬಣ್ಣಿಸುವೆ ಸುಜನರು
ಕೇಳಿ ॥ ಪಲ್ಲ ॥

ಶ್ರೀ ಪದ್ಮನಾಭ ಹೃಷಿಕೇಶ ನರಹರಿ ಯತಿ ಉಪೇಂದ್ರ ತೀರ್ಥ ।
ಪಾಪಘ್ನ ವಾಮನ ಮುನಿಪ ವಿಷ್ಣುಯತಿ ರಾಮತೀರ್ಥಧೋಕ್ಷಜ ತೀರ್ಥರೂ ॥
ಈ ಪೆಸರಿಲೊಂಭತ್ತು ಮಂದಿ ರಘುಪತಿ ಕಾಳೀಮಥನ ವಿಠ್ಠಲೆರಡೆರಡು ।
ಭೂಪತಿ ನರಸಿಂಹ ವಿಠ್ಠಲ ಹೀಗೆ ಒಂಭತ್ತು ಮೂರ್ತಿಗಳನು ಕೊಟ್ಟು ॥ ೧ ॥
ಪದುಮನಾಭರಿಗೆ ರಾಮನ ಕೊಟ್ಟು ಸಕಲ ದೇಶವನಾಳಿ ಧನತಾ ಎನುತಲೀ॥
ಅದರ ತರುವಾಯ ಹೃಷಿಕೇಶ ತೀರ್ಥರಿಗೊಂದು ರಾಮಮೂರ್ತಿಯ ಕೊಟ್ಟು ।
ಬುಧಜನಾರ್ಚಿತ ನೃಸಿಂಹಾರ್ಯರಿಗೆ ಕಾಳಿಯ ಮರ್ದನನಾದ ಶ್ರೀ ಕೃಷ್ಣ
ಮೂರ್ತಿ। ಹೃದಯ ನಿರ್ಮಲ ಜನಾರ್ದನತೀರ್ಥರಿಗೆ ಕಾಳೀ ಮಥನ ಶ್ರೀ ಕೃಷ್ಣ
ಮೂರ್ತಿ ಕೊಟ್ಟು॥೨॥ ಯತಿವರಉಪೇಂದ್ರರಾಯರಿಗೆ ವಿಠ್ಠಲನ ವಾಮನ ತೀರ್ಥ
ರಿಗೆ ವಿಠ್ಠಲನಾ । ನತಸುರದ್ರುಮ ವಿಷ್ಣುತೀರ್ಥರಿಗೆ ವರಹ ಶ್ರೀರಾಮತೀರ್ಥ
ರಿಗೆ ನೃಸಿಂಹ ॥ ಅತಿ ಸುಗುಣಧೋಕ್ಷಜ ತೀರ್ಥರಿಗೆ ವಿಠ್ಠಲನಿಂತು ವೊಂಭತ್ತು
ಮೂರ್ತಿಗಳ ಕೊಟ್ಟು । ಕ್ಷಿತಿಯೊಳಗೆ ರೌಪ್ಯಪೀಠ ಪುರಸ್ಥ ಪ್ರಾಣೇಶ ವಿಠ್ಠಲನ
ನರ್ಚನೆಗಿಟ್ಟರು ಕೇಳಿ ॥ ೩ ॥

ಈ ಪರೋಕ್ಷಜ್ಞಾನಿಗಳ ಪದಕ್ಕೆ ಮೂಲಾಧಾರವಾದ ಶ್ರೀ ಹೃಷಿಕೇಶ ತೀರ್ಥರ ಪದ್ಧತಿ– ಶ್ಲೋಕ ೧೫-೧೬-೧೭-೧೮

ಚನ್ನಾಗಿ ನೋಡಿರಿ. ಇನ್ನೂ ಸಾಕಷ್ಟು ಜ್ಞಾನಿಗಳ ಪದವಿವೆ.

ಪದ್ಯ ವಿಭಾಗ ೧

ಆದ್ಯರ ಸುಳಾದಿಗಳು

ವೈಕುಂಠ ವೆಂಕಟೇಶ

ಸುಳಾದಿ ೧೫

ರಾಗ ಧನಾಶ್ರಿ ಧ್ರುವತಾಳ

ಸುರನದಿಯ ಪಡೆದ ಚರಣಾಂಬುರುಹ ಪದ ।
ದಾನವರೇನು ಬಲ್ಲರಾ ಎರಡು ಪದದ ।
ಬಿರುದಿನ ಖಡ್ಡೆಯುವ ವಿರೂಪಿನ ಪೆಂಡೆಯುದ ಚಲುವ ।
ಸುರಚರ ಮಕ್ಕದಳೀವ ಭವಪರಿಭವಿತ ಊರುಗಳ ।
ಪೀತಾಂಬರದಿಂದೆಸೆವ ಉರುನಿತಂಬಿಗಳ ।
ಶಿರಿಯು ಪಿರೂರದ ಹಾರ ತ್ರಿಸರದಿಂದೊಪ್ಪುವ ಕಂಧರದ ।
ಸರಸಿಜ ನಯನಂಗಳು ದಿನಕರ ಕಿರಣವು ಸುಳಿವ ।
ಮಕುಟವನಿಂದಿರಿಸಿನ್ನಾ ಕರುಣಾಕರ ವೈಕುಂಠ ।
ವೆಂಕಟಗಿರಿ ರಮಣ ಸುರನದಿಯ ॥ ೧ ॥

ಮಟ್ಟತಾಳ

ನಿನ್ನ ನಾಮಧಾರಿಯಾಗಿ ನಿನ್ನ ಚಿನ್ಹವನ್ನು ಧರಿಸಿ ।
ನಿನ್ನ ಹೊನ್ನ ಹರಿವಾಣದ ಪ್ರಸಾದವನುಂಡು ದಾಸನಾದೆನಾ ।
ಇನ್ನುದಾಸೀನ ಮಾಡಸಲ್ಲ ರಾಘವ ವೈಕುಂಠ ವೆಂಕಟೇಶ ॥ ೨ ॥

ರೂಪಕತಾಳ

ನಿನ್ನ ಬೆಳ್ಳುಡಿ ಬಾಯಿದಂಬಲದ ಕಾಳಾಂಚಿ ಎನ್ನದು ಎನ್ನದು ।
ನಿನ್ನಶಿರಮುಡಿಗೆ ಮುಡಿಸಿದ ಘನ್ನಚಂಪಕ ಜಾಜಿಕುಸುಮಪ್ರಸಾದವು ।
ಎನ್ನದು ಎನ್ನದು ಘನ್ನ ವೈಕುಂಠ ಗಿರಿರಮಣಾ ॥ ೩ ॥

ಅಟ್ಟತಾಳ

ಪೊಡೆಯ ನೀ ನಡಿ ಇಡೆ ಹೊನ್ನ ಹಾವಿಗೆಯು ।
ತಂದಿಡುವ ಸೇವೆ ಎನ್ನದು ಎನ್ನದು ।

ಪೊಡೆಯು ನೀನಡೆ ನಡೆ ಪಾದಪರಾಕು ಸ್ವಾಮಿಜಯುಯೆಂದು ।
ಘಡಿಸುವ ಊಳಿಗ ಮುನ್ನವೆ ಎನ್ನದು ಎನ್ನದು ।
ಪೊಡೆಯು ಬಿಡೆನು ವೈಕುಂಠ ವೆಂಕಟಾಚಲ ಪೊಡೆಯು ದೇವೇಶ ॥
ಮೆಲ್ಲಡಿ ದಾವರೆ ಮೆಟ್ಟಿ ನಡೆ ಎನ್ನದು ಎನ್ನದು ॥ ೪ ॥

ಏಕತಾಳ

ಮನಕೆ ನಿನ್ನಯು ನೆನೆವುದೆ ಜೀವ ।
ತನುವಿಗೆ ನಿನ್ನಡಿಗೆರಗಿ ಪುಳಕಿತವ ಸಂದಿಸುವದೆ ಜೀವನ ।
ಇನಿತು ಭುವನದಲ್ಲಿ ಧನ್ಯವ ನಾನರಿಯೆನು ।
ವೈಕುಂಠ ವೆಂಕಟಗಿರಿ ರಮಣ ।
ಮನಕೆ ನಿನ್ನಯು ನೆನೆವುದೇ ಜೀವನಾ ॥ ೫ ॥

ಜತೆ

ಕರುಣಿಸಯ್ಯಾ ಎನಗಿನಿತನೆ ಕರುಣಾಕರ ವೈಕುಂಠ ವೆಂಕಟೇಶ ನಿನ್ನ
ಚರಣದ ಸೇವೆಯನ್ನು ಕರುಣಿಸಯ್ಯಾ ಎನಗಿನಿತನೆ ॥ ೬ ॥

ವೈಕುಂಠ ವಿಠ್ಠಲ

ಸುಳಾದಿ ೧೬

ರಾಗ ಧ್ರುವತಾಳ

ಎಲ್ಲಿಹ ಮಧುರಾಪುರ ಇನ್ನೆಲ್ಲಿಹ ಕಂಸಾಸುರನೆ ।
ಎಲ್ಲಿಂದ ಬಂದುದೆ ಬಿಲ್ಲುಹಬ್ಬ ತಾನು ।
ಎಲ್ಲಿಹ ನಕ್ರೂರ ನಿವತಾನಲ್ಲಿಂದ ಬಂದನೆ ।
ಎಲ್ಲಿ ನಮ್ಮ ಗೋವಿಂದನೊಡಗೊಂಡುನೊಯ್ದನೆ ।
ಎಲ್ಲಿಯು ಮನೆ ನಮಗಿನ್ನೆಲ್ಲಿಯ ಮನೆ ವಾರುತಿ ।
ಎಲ್ಲಿ ನಮ್ಮ ವೈಕುಂಠ ವಿಠ್ಠಲ ।
ಎಲ್ಲಿಗ್ಹೋದಡಲ್ಲಿಗೆ ಹೋಹನಡೆ ಕೆಳದಿ ॥ ೧ ॥

ಮಟ್ಟತಾಳ

ಈತಗೆಲ್ಲಿ ದೊರಕಿತೆ । ಮಾತಿನ ಅಕ್ರೂರತನ ನೋಡೆ ಕೆಳದಿ ।
ಭೂತಳಕ್ಕೆ ಪೆಸರಾದ ಕ್ರೂರಗೆ। ಮಾತಿನ ಕ್ರೂರತನನೋಡೆ ಕೆಳದಿ
ಯಾತಕೆ ವೈಕುಂಠ ವಿಠ್ಠಲನಗಲಿಸುವಗೆ ।
ಮಾತಿನ ಕ್ರೂರತನ ನೋಡೆ ಕೆಳದಿ ॥ ೨ ॥

ರೂಪಕತಾಳ

ಬಿಲ್ಲು ಹಬ್ಬ ಮಧುರಾಪುರ ।
ದಲ್ಲಿ ನಿನಗೆ ಕೃಷ್ಣಯ್ಯಾ ನಿನ್ನ ।
ಬಿಲ್ಲು ಹಬ್ಬ ಸ್ಮರಗೆಮ್ಮನೊಪ್ಪಿಸಿತು ನಿನ್ನ ।
ಬಿಲ್ಲು ವಲ್ಲಭ ವೈಕುಂಠ ವಿಠ್ಠಲ ನಿನ್ನ ಬಿಲ್ಲು ಹಬ್ಬ ॥ ೩ ॥

ಝಂಪೆತಾಳ

ಚರಣ ಸರಸಿಜವು ನಮ್ಮ । ಶಿರದ ಮೇಲಿಡ ಕೃಷ್ಣ ।
ಮರಳಿ ನಮ್ಮ ಗೋಕುಲಕ್ಕೆ ಬಾಹವೆಂತ ।
ಪರಮ ಪುರುಷ ಪುರುಷೋತ್ತಮ ।
ಮರಳಿ ನಮ್ಮ ಗೋಕುಲಕೆ ಬಾಹದೆಂತು ।
ಸಿರಿ ರಮಣ ವೈಕುಂಠ ವಿಠ್ಠಲ ಮರಳಿ ॥ ೪ ॥

ತ್ರಿವಿಡಿತಾಳ

ಮೂರುತಿ ಮನದಲ್ಲಿ । ಕೀರುತಿ ಕಿವಿಯಲ್ಲಿ ।
ಇರಿಸು ರಮಾ ರಮಣನೆ ಅನ್ಯ ವಿ ।
ಚಾರ ನಮಗ್ಯಾತಕಯ್ಯಾ ಮಾರಮಣನೆ ।
ವಾರಿಜಾಕ್ಷ ವೈಕುಂಠ ವಿಠ್ಠಲ ।
ಕರುಣಾಕರೆನ್ನ ಮಾರಮಣನೆ ॥ ೫ ॥

ಅಟ್ಟತಾಳ

ಹರಿ ಕರುಣಾಮೃತಂಬುಧಿಯು ಲೋಲ್ಯಾಡಿ ।
ಮರಳಿ ವಿಯೋಗ ದುಃಖದಿ ಮುಳುಗಾಡಿ ।
ಹರಿ ವಿರಹದಿ ಕಳ್ವರಾಗಿ ತಿರುಗಿ ।
ಮರಳಿ ವಿಯೋಗ ಸಿರಿರಮಣ ವೈಕುಂಠ ವಿಠ್ಠಲರೇಯಾ ।
ಪೊರೆಯ ಬೇಕು ನಿನ್ನ ನೆರೆನಂಬಿದವರ ಮರಳಿ ॥ ೬ ॥

ಆದಿತಾಳ

ಹರಿ ವಿರಹದಿ ಬೆಚ್ಚಿಂತ ರಂಗದಿ ।
ಸ್ಮರ ನರಳಂಬಿಗೊಡ್ಡಿದ ಬಹಿರಂಗದಿ ।
ತರುಣಿಯು ಜನರನ್ನ ಹರಿ ವಿರಹದಿ ಕಳ್ವರಾಗಿ ।

ತಿರುಗುವ ತರುಣಿಯ ಜನರನ್ನ ।
ಸಿರಿ ರಮಣ ವೈಕುಂಠ ವಿಠಲರೇಯಾ ।
ಪೊರೆಯ ಬೇಕು ನಿನ್ನ ನೆರೆನಂಬಿದವರನ್ನ ।
ತರುಣಿಯ ಜನರನ್ನ ॥ ೭ ॥

ಜತೆ

ಗೋಕುಲದ ಗೋಪಾಂಗನೆಯರುಗಳು ।
ಲೋಕೇಶ ವೈಕುಂಠ ವಿಠ್ಠಲನ್ನ ನೆನೆದರು ಗೋಕುಲದಿ ॥ ೮ ॥

ವೈಕುಂಠ ವಿಠ್ಠಲ (೨)

ಸುಳಾದಿ ೧೭

ರಾಗ ಸಾವೇರಿ ಧ್ರುವತಾಳ

ಲಕ್ಷುಮೀಯ ಮಸ್ತಕಕ್ಕೆ ಮಣಿ ಮೌಳಿಯಾದಾ ।
ಲಕ್ಷುಮೀಯ ಅಕ್ಷಿ ಮಧುಪ ಕರುಣಾಬ್ಜವಾದಾ ।
ಲಕ್ಷುಮೀಯ ಭುಜಗಳಿಗೆ ಭುಜ ಕೀರ್ತಿಯಾದಾ ।
ಲಕ್ಷುಮೀಯ ಕರಾಬ್ಜಕ್ಕೆ ರಾಜಹಂಸನಾದಾ ।
ಲಕ್ಷುಮೀಯ ಲಕ್ಷುಮೀಯ ಪೂಮಾಣಿಕ್ಯಪದಕವಾದಾ ।
ಲಕ್ಷುಮೀಯ ಲಕ್ಷುಮೀಯ ಮಹಾ ಹಾರ ಕೇಯೂರವಾದಾ ।
ಲಕ್ಷುಮೀಯ ಲಕ್ಷುಮೀಯಾನಂದಾಬ್ಧಿಗೆ ಪೂರ್ಣಚಂದ್ರನಾದಾ ।
ಲಕ್ಷುಮೀಯ ನಿನ್ನ ಪಾದ ಸರಸಿಜ ಎನ್ನ ।
ಮಸ್ತಕದಲೊಮ್ಮೆ ಅಲಂಕರಿಸು ।
ವೈಕುಂಠ ವಿಠ್ಠಲ ಪಾದಾ ಅನಂತ ಮಹಿಮಾ ॥ ೧ ॥

ಮಟ್ಟತಾಳ

ಅಜನಿಗೊಲಿದು ದೇ-ಹಾರವಾದಾ ।
ಭವನಿಗೊಲಿದು ಸಾಲಿಗ್ರಾಮ ದೇವರಾದಾ ।
ಯಜು ಸಾಮ ಮುಖ್ಯನಿಗಮ ಮೌಳಿಮಣಿಯಾದಾ ।
ಭಜಕ ದಿವಿಜ ನಿಕರಾಪಾರ ಬ್ರಹ್ಮವಾದಾ ।
ತ್ರಿಜಗ ವಂದಿತ ಪದ ವೈಕುಂಠ ವಿಠ್ಠಲ ।
ನಿಜ ಕರುಣದಿಂದೆನ್ನ ಮಸ್ತಕದಮೇಲೊಮ್ಮೆ ದಯಮಾಡೊ॥೨॥

ರೂಪಕತಾಳ

ಮುನಿ ಹೃದಯ ನಿಕೇತನ ಜೋತಿಯ ।
ತನು ಸೊಬಗಿನ ಪುಂಜವ ನನುದಿನ ।
ಸನಕಾದಿಗಳಾಡುತ್ತ ಪಾಡುತ್ತ ।
ನೆನೆವ ಪರಮ ಕರುಣ ಮೂರ್ತಿಯ ।
ಘನ ಪಾದ ವೈಕುಂಠ ವಿಠ್ಠಲ ।
ತಾನು ಸರಸಿಗೆ ಸರಸಿಜವಾಗಿಡೊ ॥ ೩ ॥

ಝಂಪೆತಾಳ

ದುರಿತ ತಿಮಿರ ವಡಗದು ಮನ ।
ಸರಸಿಜ ವರಳ ದೂ ।
ಹರಿ ನಿನ್ನ ಅರುಣ ಕಿರುಣ ಭರಿತ ಚರಣ ।
ಸರಸಿಜ ಸಖನುದಯಿಸದಿರೇ ।
ಪರಮ ದಯಾನಿಧೆ ।
ಸಿರಿವೈಕುಂಠ ವಿಠ್ಠಲರೇಯ ಎನ್ನ ಬಿನ್ನಪವಿದು ॥ ೪ ॥

ತ್ರಿವಿಡಿ ತಾಳ

ಪಾದಾಂಬುಜ ಮಧುಕರ ।
ಪಾದಾಂಬುಜ ಭೂಮಿಯಂತೆ ಬಿಂದುವಂತೆ-ವಾಮಾ ।
ಪಾದ ಕರ್ನಿಕೆ ಯಾಕಾಶದಂತೆ ।
ಶಿವ ನಾದರದಿ ಧರಿಸಿದ ಗಂಗೆಯಂತೆ ।
ಆದಿ ದೇವ ಶ್ರೀ ವೈಕುಂಠ ವಿಠಲದಯಾನಿಧೆ ॥ ೫ ॥

ಅಟ್ಟತಾಳ

ಕಡಹದ ಮರನ ನಡರಿ ಕಾಳಿಂಗನ ।
ಮಡುವ ಧುಮುಕಿ ಕಾಳಿಂಗನ ಶಿರದಲ್ಲಿ ।
ಧಡುಮೆನೆ ವಿಷಜಾಲ ಧಡಿಗಳ ।
ವೊಡಿಗೆ ಸಪ್ಪುಳಿಗೆ ಕುಣಿದಾಡಿದೆ ಗಡಾ ।
ಕಡುಮೃದು ಪಾದ ವೈಕುಂಠ ವಿಠ್ಠಲಾ ।
ಇಡು ಎನ್ನ ಕ್ರೋಧಾಹಿಮದವಳಿಯಲಿ ॥ ೬ ॥

ಆದಿತಾಳ

ಕಂಬುಕೊಳಲು ತುತ್ತುರಿ ಮುವುರಿಗಳು ।
ಸಂಭ್ರಮದಲಿ ಗೋಪಾಲರು ನೆರೆದು ।
ಭೊಂ ಭೊಂ ಭೊ ತುತ್ತುರುತ್ತುರೆನೆ ।
ಸುರ ರಂಬರದಲಿ ಪೂಮಳೆಗರಿಯೇ ।
ಕಂಬುಕಂಠ ವೈಕುಂಠ ವಿಠ್ಠಲ ಪಾದಾ ।
ಇಂಬಾಗಿ ಎನ್ನ ಹೃದಯ ಮಧ್ಯದಲಿಡು ॥ ೭ ॥

ಜತೆ

ದೇವ ದೇವ ಜಗಂಗಳ ಪೊರೆವಾ ।
ಶ್ರೀ ವೈಕುಂಠ ವಿಠ್ಠಲ ಸಲಿಸೋ ಬಿನ್ನಪವಾ ॥ ೮ ॥

ಅಚ್ಯುತ ವಿಠ್ಠಲ (೧)

ಸುಳಾದಿ ೧೮

ರಾಗ ಧ್ರುವತಾಳ

ಹೊನ್ನು ಹಣ ಹಾಗು ವೀಸಯೇನು ಇಲ್ಲದ ।
ಚಿನಿವಾರನ ಕೈಯ ಚೀಲದಂತೆ ।
ಗುಲುಗುಂಜೆ ಕವಡೆ ಕಟ್ಟಳೆ ಕಾಳು ಮಾತಿನ।
ಚಿನಿವಾರನ ಕೈಯ ಕಪಟದಂತೆ ।
ಎನ್ನ ತನು ಮನ ಅಚ್ಚ ಕಳಂಕವಯ್ಯಾ ।
ಎನ್ನ ತನು ಮನ ಬಚ್ಚೆ ಬರಿದೆಯುಯ್ಯಾ ।
ಬಚ್ಚ ಬರಿಯದೆ ಭಕುತ ನಾನಯ್ಯ
ಅಚ್ಯುತ ವಿಠ್ಠಲನ ಭಕುತಿಯೊಳಿಪ್ಪುದಿಲ್ಲಾ ।
ಅಚ್ಯುತ ವಿಠ್ಠಲನ ವ್ಯವಹಾರಿ ನಾನಯ್ಯಾ ।
ಹೊನ್ನು ಹಣ ಹಾಗು ವೀಸಾ ॥ ೧ ॥

ಮಟ್ಟತಾಳ

ಮುಡಕೆಯ ಕಂಠಕ್ಕೆ ಮಣಿಯಿಕ್ಕಿದಂತೆ ।
ಅಡಕವೆನ್ನ ಕೊರಳಾ ತುಲಸಿ ।

ಮಡಕಿಗೆ ಹರಿಯ ಭಕುತಿಯುಂಟೆ ಹೇಳಿರೊ ಮುಕ್ಕು ।
ಮಡಕಿಗೆ ಆ ಹರಣತನ ಉಂಟೆ ಹೇಳಿರೊ ।
ಕಾಮ ಕ್ರೋಧವೆಂಬ ಕತ್ತೆಯ ಲದ್ದಿಯಲಿ ಮಾಡಿದ ।
ಮಡಿಕೆಗೆ ಹರಿಯ ಭಕ್ತಿಯುಂಟೇ ಹೇಳಿರೊ ।
ಅಚ್ಯುತ ವಿಠ್ಠಲನಚಕ್ರಮಡಿಕೆಗೆ ಹರಿಯುಭಕ್ತಿಯುಂಟೇ ಹೇಳಿರೊ ॥ ೨ ॥

ರೂಪಕತಾಳ

ಸೊಪ್ಪಿನ ತೋಟಕ್ಕೆ ರಕ್ಷೆಯ ಬೋರಡಿಗಾಗಿ ।
ಸುಣ್ಣವ ಬತ್ತಿಸಿ ಎನ್ನಂಗಕ್ಕೆ ಗೋಪಿಚಂದನಗಳು ।
ಊರ್ಧ್ವ ಪುಂಡ್ರಗಳು ದ್ವಾದಶನಾಮವ ಬಾಚಿಸಿಕೊಂಬೆನಯ್ಯಾ।
ಹೊರಗೆ ದಂಡ ಒಳಗೆ ಬಿಟ್ಟ ಬಯಲು ।
ಅಚ್ಯುತ ವಿಠಲ ಭಕ್ತಿ ಎಳ್ಳಷ್ಟುಯಿಲ್ಲ ।
ನಾಚಿಕೆ ಇಲ್ಲದೆ ಬಾಚಿಸಿ ಕೊಂಬೆನಯ್ಯಾ ।
ನಾಚಿಕೆ ಗೊಂಬೆನಯ್ಯಾ ಜನರ ಮೋಹಕ್ಕಾಗಿ ।
ಸೊಪ್ಪಿನ ತೋಟಕ್ಕೆ ರಕ್ಷೆಯಾ ॥ ೩ ॥

ಅಟ್ಟತಾಳ

ಮುದ್ರೆಯೊತ್ತಿದ ಸೂಳೆ ಕಾಮುಕರ ಸುಲಿವಂತೆ ।
ನಿಜಭಕ್ತನಾನೆಂದು ಸುಲಿವೆನು ಧನಿಕರನು ।
ಹರಿಯ ಮುದ್ರಾ ಧಾರಿ ತಾನೆಂದು ನಂಬಿಸಿ ।
ಭೂಚಕ್ರ ಮುದ್ರೆಯೊತ್ತಿ ಸುಲಿವೆನು ಧನಿಕರನು ।
ಹೊರಗೆ ದಂಡ ಮುದ್ರೆ ಒಳಗೆ ಕಳ್ಳಮುದ್ರೆ ಇದ್ದುದ ಕಂಡು ।
ನಗುತಿರ್ದ ಅಚ್ಯುತ ವಿಠ್ಠಲರಾಯಾ ಸುಲಿವೆನು ಧನಿಕರನೂ ॥೪॥

ಏಕತಾಳ

ಓದಲಿಲ್ಲ ಕೇಳಲಿಲ್ಲ ಮಗನ ಹೆಸರು ಉಪಾಧ್ಯನೆಂಬರು ।
ಓದಲಿಲ್ಲ ವೇಷದ ಭಾಗವತ ನೆನೆಸಿಕೊಂಬೆನು ।
ಓದಲಿಲ್ಲ ಕೇಳಲಿಲ್ಲ ಅಚ್ಯುತ ವಿಠ್ಠಲನ ಕಿಂಕರ ।
ನೆನೆಸಿಕೊಂಬೆನೊ ಓದಲಿಲ್ಲ ಕೇಳಲಿಲ್ಲ ॥ ೫ ॥

ಜತೆ

ಡಂಬಕ ತನದಲಿ ಪೊಟ್ಟೆಯ ಪೊರೆವೆ ವಿ ।
ಡಂಬನ ಪಾಲಿಸು ಅಚ್ಯುತ ವಿಠ್ಠಲರಾಯಾ ।
ಡಂಬಕ ತನದಲಿ ಪೊಟ್ಟೆಯ ಪೊರೆವೆ ॥ ೬ ॥

ಅಚ್ಯುತ ವಿಠ್ಠಲ (೨)

ಸುಳಾದಿ ೧೯

ರಾಗ ಕೇದಾರ ಗೌಳ ತಾಳ ಧ್ರುವ

ಕಲ್ಪಾಂತ ವಾದಡಂ ಕೇಡಿಲ್ಲ ತನುಗೆಂದು ।
ಕುಪ್ಪೆಯ ಮಾಡಿ ಧನವ ಹೂಳಿ ಬಚ್ಚಿಟ್ಟಿಡಂ ।
ಮುಪ್ಪಿನ ಕಾಲಕ್ಕೆ ಈ ಧನವೆ ಜೀವನ । ತ ।
ನ್ನ ಪ್ರಾಣ ವಳಿದಂದೀಗೆ ಸ್ತ್ರೀ ಪುತ್ರಾದಿಗಳಿಗೆ ।
ಇಪ್ಪ ಜೀವನವೆಂದು ಧನಕ ಬಂದ ವಿಘ್ನಗಳ ।
ತಪ್ಪಿಸ ತದಗತ ಮಾನಸನಾಗೀ ಕಾ ।
ದಿಪ್ಪನು ಹಗಲು ಇರಳು ಬಿಡದೇ ।
ಸಪ್ಪಡಿ ಅನ್ನವನುಂಬ ಯಾಚಕರಿಗೆ ।
ಚಪ್ಪಾಳೆ ನಿಡುವ ಗತಿವಿಲ್ಲವೆಂದೂ ।
ಅರ್ಪಿತ ಅಚ್ಯುತ ವಿಠ್ಠಲಗೆ ತದ್ಭಕ್ತರಿಗೆ ।
ಸಪ್ಪನಿತ ಕಾದಿಪ್ಪ ಲೋಭಿಯನುಣಗೊಡದೆ ।
ಅಪ್ಪಳಿಸಿ ಹೆಡೆ ತಲೆ ಮೃತ್ಯು ಎಳದು ವೈವಾಗ ।
ಕಪ್ಪಿ ಎಂದದಿ ಬಾಯ್ಬಿಡುತ ಕಡೆಗೆ ಕೆಡುವಾ ॥ ೧ ॥

ಮಟ್ಟತಾಳ

ಫಣಿಗೆ ಲೋಭಿಗೆ ಭೇದ ವಾವದೊ ಫಣಿ ತಾ ।
ನುಣದೆ ಪರರಿಗೀಯದೆ ಮುಟ್ಟಗೊಡದೆ ಜನರ ।
ಕ್ಷಣ ತೊಲಗದಲೇ ಕಾದಿಪ್ಪ ದಹಿತಾ ।
ಭಣಗು ಲೋಭ ಧನವ ಅಚ್ಯುತ ವಿಠ್ಠಲ ।
ಉಣಲೀಸನು ಆಧಿ ವ್ಯಾಧಿಗಳನು ಕೊಟ್ಟು ।
ದಣಿಸುವ ಪರದಿನಿರ್ಧನಿಕನ ಮಾಡುವನು ॥ ೨ ॥

ತ್ರಿವಿಡಿತಾಳ

ಜನ್ಮ ಜನ್ಮಾಂತರದಿ ಬೊಮ್ಮ ರಕ್ಕಸನಾಗಿ ।
ಜನ್ಮಾದಿ ಧನ ಲೋಭಿಯಾದಾ ಸಂದೇಹವಿಲ್ಲಾ ।
ಬೊಮ್ಮ ರಕ್ಕಸಗಿವಗೇನು ಭೇದಾ ।
ಬ್ರಾಹ್ಮಣನಂತಿಪ್ಪ ಬೃಹತ್‌ಶರೀರಿಯಾಗಿ ।
ಬೊಮ್ಮ ರಕ್ಕಸಗಿವಗೇನು ಭೇದಾ ।
ಬೊಮ್ಮ ಜನಕ ನಮ್ಮ ಅಚ್ಯುತ ವಿಠ್ಠಲ ।
ಬೊಮ್ಮರಕ್ಕಸ ಯೋನಿಯಲ್ಲಿ ನೂಕುವನಾಗಿ ।
ಬೊಮ್ಮ ರಕ್ಕಸಗಿವಗೇನು ಭೇದಾ ॥ ೩ ॥

ಅಟ್ಟತಾಳ

ಇದ್ದು ಇಲ್ಲವೆಂದು ಮುದ್ರಿಯನೇ ಮಾಡಿ ।
ಸದ್ಭಾಗಗೊಡದಂತೆ ಹೂಳಿ ಧನವನ್ನು ।
ಇದ್ದಿಲ್ಲ ವೆನ್ನ ಬೇಡಿರಿ ನೀವೆಲ್ಲರೂ ಇದ್ದಿಲ್ಲಾವೆನ್ನಬೇಡಿರಿ ।
ಬುದ್ಧಿವಂತರು ಕೇಳಿ ಲುಬ್ಧತನದಿಂದ ಇದ್ದಿಲ್ಲವೆನಬೇಡಿರಿ ।
ಇದ್ದಿಲ್ಲವೆಂದರೆ ಅಚ್ಯುತ ವಿಠ್ಠಲ ।
ಇದ್ದಲ್ಲಿ ಮಾಡುವ ಶಬ್ದಗೋಚರ ತಾನು ।
ಇದ್ದಿಲ್ಲಾವೆನಬೇಡರಿ ॥ ೪ ॥

ಆದಿತಾಳ

ಧರ್ಮಾಗ್ನಿ ನೃಪ ತಸ್ಕರರೆಂಬ ನಾಲ್ವರು ।
ನಿಮ್ಮ ಧನಕೆ ದಾಯಾದಿಗಳೆನಿಪರು ।
ಧರ್ಮಗೆ ದಾಯವ ನೀಯದಿದ್ದರೆ ತಮ್ಮ ।
ತಮ್ಮ ಪಾಲೊಡವಿಯ ಶಳವರು ಮೂವರು ।
ದುರ್ಮದರಾಗದೆ ಧರ್ಮನ ಭಜಿಸಲು ।
ನಮ್ಮ ಅಚ್ಯುತ ವಿಠ್ಠಲ ನಿಮ್ಮ ಗೊಲಿದೆವು ।
ಧರ್ಮ ಭಟರ ಬಾಧೆಗಳು ತಪ್ಪಿಸುವಾ ॥ ೫ ॥

ಜತೆ

ಇಂತೀಲೋಭಿಯ ಸಂಗಕೊಪ್ಪಿಸಾದೆಂದೆಂದು ।
ಸಂತೈಸಬೇಕೆನ್ನ ಅಚ್ಯುತ ವಿಠ್ಠಲಾ ॥ ೬ ॥

ವರದ ಕೇಶವ (೧)

ಸುಳಾದಿ ೨೦

ರಾಗ ತಾಳ ಧ್ರುವ

ತನ್ನ ಶರಣರ ಜರದಡಂ । ಕರುಳವಾಲೆಯ ಕಿತ್ತ ಉರಿಮಾರಿ-
ದೈವವೆಂದರಿಯಿದೆ ।
ತನ್ನ ಶರಣರಾ ಜರದಡಂ । ಚೈದ್ಯಜರದುನುಡಿವ ಸಭೆಯಲ್ಲಿ ಶಿರ-
ವರಿದುದಾ ।
ಉರಿ ಮಾರಿ ದೈವವೆಂದರಿಯರೇ । ತನ್ನ ಶರಣರಾ ಜರದಡಂ ।
ಪಿರಿದು ಲೋಕ ವಾಸಂಕರುಷಣನಾಗಿ ನುಂಗಲು ।
ಉರಿವ ದೈವವೆಂದರಿಯರೇ । ತನ್ನ ಶರಣರಾಜರದಡಂ ।
ಉರಿ ಮಾರಿ ದೈವದೊಳುರಿ ಮಾರಿಯು ತಾ ।
ಕರುಣಾಳುಗಳೊಳತಿ ಕರುಣಾಳು ।
ಮೊರೆ ಹೊಕ್ಕವರ ಕಾಲಕರ್ಮವ ಗೆಲುವರೇ ।
ವರದ ಕೇಶವನ ಅಂಘ್ರಿಯು ಸಾರಿ ಬದುಕಿರೋ ।
ತನ್ನ ಶರಣರ ಜರದಡಂ ॥ ೧ ॥

ಮಟ್ಟತಾಳ

ಹರಿಶರಣರ ಪೀಡಿಸಿ ಹರಿಮುಹಿಮೆಯ ।
ಜರಿದು ನುಡಿವ ಹಿರಣ್ಯಕ ಚೈದ್ಯರುಗಳ ।
ಕರುಳ ಮಾಲೆಯ ಕಿತ್ತನು ಶಿರಿವರದನು ।
ಉರಿ ಮಾರಿ ದೈವವಲ್ಲವೆ ।
ಕೆಣಕಬಹುದೆ ಉರಿ ಮಾರಿ ದೈವವಲ್ಲವೆ ।
ಹರಿಶರಣರ ಕೇಳುಂಬಂ ।
ಪರಗತಿಯ ನ ಂಬೋವರದ ಕೇಶವರಾಯ ।
ಉರಿಮಾರಿ ದೈವವಲ್ಲವೆ ॥ ೨ ॥

ರೂಪಕತಾಳ

ಆವಾದೈವದ ಆ ಶರಣ ಹೊಕ್ಕಡುಂ । ಮೊಣೂದ ಬಲ್ಲಿದನಲ್ಲದಿದ್ದಡುಂ ।
ಕಾವಡೆ ಕೊಲ್ಲುವಡೆ ಸ್ವತಂತ್ರ ಉಂಟೇ। ಕಾವಕೊಲ್ಲುವ ನಮ್ಮ ವರದ-
ಕೇಶವ ರಾಯನಂಘ್ರಿಯ ।

ವೃಥವಿಡಿದು ಬದುಕಲರಿಯರೋ ।
ಕಾವಡೆ ಕೊಲ್ಲುವಡೆ ಸ್ವತಂತ್ರ ಉಂಟೆ ॥ ೩ ॥

ಅಟ್ಟತಾಳ

ಮೃತ್ಯುಮಾರಿ ಮಸಣಿಗಳು ಕಾಯ್ದರೆಂದು । ತುತ್ತ ಭಕುತಿ ಇತ್ತ ಕರ್ತೃ-
ಜೀವರು ಕೇಳಿ ಹೆತ್ತೈಯ್ಯಾ ।
ಕೊಲುವಡೇ ಮತ್ತಾರು ಕಾವರು । ಪೃಥ್ವಿಸುಂಗಲು ಇಳಿದು ತೆಗೆದರಾರು।
ಹೆತ್ತೈಯ್ಯಾ ಕೊಲುವಡೆ ಮತ್ತಾರು ಕಾವರು । ಒತ್ತೊತ್ತಿ ದೋಷವ-
ನಿಳಹುವ ನಮ್ಮದೇವ
ಕರ್ತೃ ಶ್ರೀವರದಕೇಶವನ ಅಂಘ್ರಿಯ ಸಾರೊ । ಹೆತ್ತೈಯ್ಯಾ ಕೊಲುವಡೆ
ಮತ್ತಾರು ಕಾವರು ॥ ೪ ॥

ಏಕತಾಳ

ಹರಿಶರಣೆಂಬವನಾವನಾತನ ದುರಿತ ಕೋಟಿ ಹೋದವು ।
ಮರಳಿ ನೋಡವು ಗ್ರಹಭೂತಗಳು । ಮರಳಿ ನೋಡವು
ವ್ರಣವ್ಯಾಧಿಗಳು ।
ಹರಿಹರಿ ಅಂತಕಗೆ ಕೂಡುವ । ಮರಳಿ ನೋಡ ಗ್ರಹಭೂತಗಳು ।
ಮರಳಿ ನೋಡಾ ವ್ರಣವ್ಯಾಧಿಗಳು । ಪರಲೋಕಕ್ಕೈಸೆಯಾವ ಸುಖಕ್ಕೆ
ನಮೊ ನಮೊ ।
ವರವ ಕೇಶವರಾಯ ಮರಳಿ ನೋಡವು ಗ್ರಹಭೂತಗಳು ॥ ೫ ॥

ಜತೆ

ಸುತ್ತಿದ ಕಾಲಕರ್ಮವ ಗೆಲುವರೆ ಕರ್ತೃ ಶ್ರೀವರದ ।
ಕೇಶವನ ಅಂಘ್ರಿ ಸಾರೋಸುತ್ತಿದ ಕಾಲಕರ್ಮವ ಗೆಲುವರೆ ॥ ೬ ॥

ವರದ ಕೇಶವ ೨

ಸುಳಾದಿ ೨೧

ರಾಗ ಶಂಕರಾಭರಣ ಧ್ರುವ ತಾಳ

ತಳಿರಂತೆ ಪೆಜ್ಜೆಹೆಜ್ಜೆಗೆ ಚರಣ । ತಳಿಗಳು ಥಳಥಳಿಸುವ ಚೆಳ್ಳುಗರು ।
ಶೆಳೆವಡು ಬಳಕಲು ತೊಡೆಗೆಢಂಡಣೆಎಂಬ ।
ಉಡಿ ಘಂಟೆ ಕಟ್ಟಿಪ ಕಟಸೂತ್ರದುಕೂಲ ।

ನಳಿ ನಳಿಸುವ ತೋಳು ನಗೆ ಮೊಗದ ಬೆಂಬಳಗಾಗುತ ।
ಬರುತ ಸುಳಿಗುರುಳರಳಲೆ ಮಾಗಾಯುಗಳೊಳು ನಲಿವುತ್ತ ।
ಗೋಕುಲದಲ್ಲಿ ಸುಳಿವ ವರದ ಕೇಶವ ।
ಗೋವಳ ಮೂರುತಿ ಉಡುಪಿಯಲಡಗಿದನಿದಕೋ ॥ ೧ ॥

ಮಟ್ಟತಾಳ

ಬಡವರ ನಿಧಿಯೋ ಭಾಗವತರ ಭಾಗ್ಯವೋ ।
ಮಡದಿಯರುಲುಹೋ ಮಹಾಸತಿಯ ಸಂಭ್ರಮವೋ ।
ವಡಲವಿಡಿದು ಪ್ರತ್ಯಕ್ಷವೋ ಲಾವಣ್ಯದ ತೊಡುವೋ ।
ಆನಂದ ಮಡುವೋ ಮೆಣೂ ಪೊಡವಿಪತಿ ವರದಕೇಶವ ಮೂರುತಿ ।
ಕಡಲಕಡಿಯಲುಡುಪಿಯಲಡಗಿದೆ ನೋಡೈ ॥ ೨ ॥

ರೂಪಕತಾಳ

ಗಡಣದ ಗೋಪಾಲರನು ವಂಚಿಸಿ ಬೆಂ। ಬಿಡದೆ ಬಾಹ ಗೋಪಿಯರ ಮರೆಯಿಸಿ ।
ತಡವಿದ ತುರುವಿಂಡುಗಳ ತಪ್ಪಿಸಿ । ತನ್ನವಟ್ಟು ಬಲಿದೇವನ ಬಿಟ್ಟು ।
ಪಡುಗಡಲ ಕಡಿಯಲುಡುಪಿಯಲಡಗಿದರೆ । ನಿನ್ನನು ಬಿಡೆ ಬಿಡೆ ವರದ ಕೇಶವ ಕೃಷ್ಣ ॥ ೩ ॥

ಅಟ್ಟತಾಳ

ಕಡೆವ ಮಂಥನವ ಪಿಡಿದು ಕೆನೆವಾಲನು ಕುಡಿವ ।
ಚಿಕ್ಕಮಕ್ಕಳ ಬಡಿವ ಕಡು ಧೂರ್ತನು ।
ನಿನ್ನ ಮಗನೆಂದು ನಂದನ ಮಡದಿಗೆಲ್ಲ ಸತಿಯರು ದೂರೆ ಆಕೆ ಕೊಲುವಳೆಂದು ।
ಉಡಪಿನೊಳಡಗಿದರೆ ನಿನ್ನ ಪಿಡಿದಿರೆ ವರದಕೇಶವ ಕೃಷ್ಣ ಆಕೆ ಬಡಿವಳೆಂದು ॥ ೪ ॥

ಏಕತಾಳ

ಮುಡಿಗೆ ಸುತ್ತಿದ ಕತ್ತರವಿಲಿಕ್ಕೈಯಲಿ ।
ಪಿಡಿದ ದಾಬು ಗೋವಳಗೋಲು ಉಡಿಯ ಗೋಲಿಯಚೀಲ ।

ಉಡಿಯು ಗೋಲಿಯು ಚೀಲ । ಪೆಗಲಡಿಯು ಕಲ್ಲಿಯು ಕಂಬಳಿಯು ।
ಉಡ್ಡೆಯು ಗೋಲಿಯು ಚೀಲ । ನಡೆ ತಂದನು ತುರುಗಾವಲೀಲೆಯಿಂದ
ಉಡುಪಿಯು ವರದಕೇಶವ ಕೃಷ್ಣ ॥ ೫ ॥

ಜತೆ

ಬಿಡೆ ನಿನ್ನ ದಾಸ್ಯದ ಪರಮ ಪದವಿಯನು ।
ಬಿಡೆ ವರದ ಕೇಶವ ಕೃಷ್ಣ ।
ಬಿಡೆ ನಿನ್ನ ದಾಸ್ಯದ ಪರಮ ಪದವಿಯ ॥ ೬ ॥

ಚನ್ನಕೇಶವ ೧.

ಸುಳಾದಿ ೨೨

ರಾಗ ಕಾಂಬೋದಿ ಧ್ರುವ ತಾಳ

ನೋಡಲಿ ಮನವೇ ಜಗದೇಕಲಾವಣ್ಯನಿಧಿಯನನುದಿನ ।
ಬೇಡು ಬೇಡು ತನ್ನೊಡಲವಿವದಾನಿಗಳರಸನಾ ।
ಕೊಡೆಲೊ ಮನವೇ ಸುಖನಿಧಿಯ ಅಜಭವೇಂದ್ರಾದಿ ಸುರೇಶರ ।
ಕೇಡಿಲ್ಲ ತನ್ನಿಜ ಪದವ ನೊಲುವರೇ ನೀನು !
ಆಡಿ ತನದಾಸರೊಡನೆ ದುರಿತ ಕೋಟಿಗಳುರಿವವು ।
ರೂಢಿಗಧಿಕ ದಕ್ಷಿಣ ವಾರಣಾಸಿ ಎನಿಪ ಪುರದಲ್ಲಿ ।
ಆಡಿದ ಭಕುತ ಜನರಿಂದೊಲಿದು ಕರುಣದಲಿ ।
ಗಾಡಿಗಾರ ಚನ್ನಕೇಶವನ ನೀವೈಕುಂಠ ವಲ್ಲಭನ ನೋಡೆಲೆ ಮನವೆ॥೧॥

ಮಟ್ಟತಾಳ

ಮೆರೆವ ಮುಕುಟ ಮುತ್ತಿನ ಮೂಗುತಿ ಕರ್ಣದಲಿ ।
ನಿರುಪಮ ರತ್ನದೋಲೆ ರಾಜಿಪ ವದನದ।
ಕರ ಚತುಷ್ಟಯದಲಿ ಶಂಖ ಚಕ್ರಗದೆಯು ।
ಸರಸಿಜಾಂಘ್ರಿ ಪೀತಾಂಬರದ ಶ್ರೀ ವೈಕುಂಠವಲ್ಲಭ ವೇಲಾಪುರಾಧಿಪ
ಕರುಣಾಕರ ಚನ್ನ ಕೇಶವ ನಿನ್ನ ಮೂರುತಿಗೆ ನಮೊ ॥ ೨ ॥

ರೂಪಕತಾಳ

ಕಮಲಜ ಪೂಜಿತಾಂಘ್ರಿಕಮಲವ ।

ಕಮಲಾಕುಚ ಕುಂಕುಮಾಂಕಿತ ಪಾದಾಂಬುಜವ ।
ಅಮರ ನದಿಯು ಪಡೆದ ಚರಣ ಕಂಜವ ।
ಅಮಿತ ಮಹಿಮಾ ಎನ್ನದೇವನೇ ಒಳಗಿರಿಸಯ್ಯಾ ।
ದ್ಯುಮಣಿ ಶತಕೋಟಿ ತೇಜ ವೈಕುಂಠ ವಲ್ಲಭ ನಮೋ ।
ವೇಲಾಪುರೀಶ ಚನ್ನಕೇಶವ ಅಮರನದಿಯ ಪಡೆದ ಚರಣ ॥ ೩ ॥

ಝಂಪೆ ತಾಳ

ನಿನ್ನ ಕೀರೂತಿ ಕಿವಿಗೆ ನಾಮಾ ನಾಲಿಗೆಯು ಚಾರುಲಾವಣ್ಯಾ।
ಎನ್ನ ಕಣ್ಣಿಗೆ ಆಧಾರವಯ್ಯಾ ವೇಲಾಪುರದ ।
ಚನ್ನಕೇಶವ ವೈಕುಂಠರಮಣ ಎನ್ನಕಣ್ಣಿಗೆ ॥ ೪ ॥

ತ್ರಿಪುಟ ತಾಳ

ಭುವನಪತಿ ತಾನೆತ್ತ ನಿನ್ನ ಮಹಿಮೆಗಳೆತ್ತ ।
ಶ್ರೀ ಹರಿಯೇ ಶ್ರುತಿತತಿಗೆಗೋಚರವಯ್ಯಾ ।
ನಿನ್ನ ಮಹಿಮೆಗಳು ಉನ್ನತ ವೈಕುಂಠವಲ್ಲಭ ।
ಚನ್ನಕೇಶವ ಶ್ರೀಪತಿಯೇ ನಿನ್ನಮಹಿಮೆಗಳು ॥ ೫ ॥

ಅಟ್ಟತಾಳ

ಸರಸಿಜೋದ್ಭವ ಶೂಲಿ ಸುರಪ್ರಮುಖ ಸುರಾಸುರಾದಿ ।
ಶರನಿಧಿ ಮಥನದಲ್ಲಿ ನೆರೆದಿರಲು ।
ಪರಮ ಪುರುಷ ಪುರುಷೋತ್ತಮ ಮತಿಯು ।
ಚನ್ನಿಗರಾಯನೆಂಬ ಪೆಸರು ಸಲುಹುವದಯ್ಯ ।
ಸಿರಿವೈಕುಂಠ ವಲ್ಲಭ ವೇಲಾಪುರಾಧಿಪ ಚನ್ನಕೇಶವ ।
ಪರಮ ಪುರುಷ ಪುರುಷೋತ್ತಮ ॥ ೬ ॥

ಏಕತಾಳ

ಶರಣಾಗತ ಪ್ರತಿಪಾಲಕನೆಂಬ ಬಿರುದನು ಕೇಳಿ ।
ಶರಣು ಹೊಕ್ಕೆನೊ ಎನ್ನವ ಗುಣವನು ವರಸದೆ ನಿನ್ನನಿಜ ।
ಕರುಣವನು ನೆರೆಯಾ ಚನ್ನಕೇಶವ ।
ಅನುಪಮ ಗುಣನಿಧಿ ಆನಂದ ಮೂರುತಿವೇಲಾ ।
ಪುರದ ಶ್ರೀ ವೈಕುಂಠರಮಣ ಎನ್ನವಗುಣವರಸದೇ ॥ ೭ ॥

ಜತೆ

ಮೂರು ಲೋಕ ಮೂರುತಿ ಮೂರು ಲೋಕ ಮೋಹನ ।
ಮೂರು ಲೋಕದೊಡೆಯನೆ ಮೂರು ಲೋಕ ವಂದಿತ ಚನ್ನಕೇಶವ
ವೈಕುಂಠರಮಣ ॥ ೮ ॥

ವರದರಾಜ ವೆಂಕಟೇಶ ೧

ಸುಳಾದಿ ೨೩

ರಾಗ ಆಹರಿ ಧ್ರುವ ತಾಳ

ಶ್ರೀ ರಘುರಾಮ ಎಂದಾರಾದರೂ ನೆನೆದರೆ ।
ಘೋರ ಪಾತಕ ಹತ್ತಿರಿರವು ಕಾಣಿರೋ । ಶ್ರೀರಾಮ
ಒಂದು ಬಾರಿಲಿ ಗಿರಿ ಎತ್ತಿ ಅಂದು ಗೋಕುಲವ ಕಾಯ್ದ ।
ಇಂದು ವೆಂಕಟಗಿರಿಯಲಿ ನಿಂದು ವೈಕುಂಠವಿ ।
ದೆಂದು ತೋರುವ ಹಸ್ತದಂದದಿ ನೋಡಿರಿಲ್ಲಿ ।
ಎಂದೆಂದಿಗೂ ನಮ್ಮ ವರದರಾಜ ವೆಂಕಟೇಶ ಶ್ರೀ ರಘುರಾಮ ॥ ೧ ॥

ಮಟ್ಟತಾಳ

ತುಂಬರ ನಾರದ ಗೀತವ ಸಡಗರದಿಂ ನಲಿದು ಪಾಡೆ ।
ಧಂ ಧಂ ಧಂ ಧಿಮಿಕ್ಕೆಂದು ನಂದಿ ಮದ್ದಳೆಯನಾದಿಸೆ ರಂಭೆ
ನಾಟ್ಯವ ಮಾಡಲೂ ।
ಅಂಬುಜ ನಾಭನೋಲಗ ತುಂಬಿತು ।
ವರದರಾಜ ವೆಂಕಟೇಶ ಧಂ ಧಂ ಧಂ ಧಿಮಿಕ್ಕೆಂದು ॥ ೨ ॥

ರೂಪಕ ತಾಳ

ವಾರಿಧಿಯ ಕಟ್ಟಬಲ್ಲವರುಂಟೆ ! ರಾವಣನ ಕೊಲ್ಲುವರುಂಟೆ ।
ಬೇರೆ ಈರೇಳು ಜಗವನಾಳ್ದವರುಂಟೆ । ನಮ್ಮ ವರದರಾಜ ವೆಂಕಟೇಶ
ನಲ್ಲದೆ ಪ್ರತಿಯುಂಟೆ ।
ಈರೇಳು ಲೋಕವನಾಳ್ದವರುಂಟೇ ॥ ೩ ॥

ಝಂಪೆ ತಾಳ

ಶಕಟಾಸುರನ ಉಂಗುಷ್ಟದಿ ಒದ್ದ ಪಾದ । ಸುಪ್ರಕಟ ಅಹಲ್ಯಾ ಶಾಪ
ವಿಮೋಚನವಾದ ।

ವಿಕಟದಿಂದೊಲಿದು ಬಲಿಯ ಬಂಧಿಸಿದ ಪಾದ । ಬ್ರಹ್ಮಾಂಡಕಟಕ
ವಡೆದನಮ್ಮ ವರದರಾಜ ವೆಂಕಟೇಶ ವಿಕಟದಿಂದೊಲಿದು ॥ ೪ ॥

ತ್ರಿಪುಟ ತಾಳ

ಈ ಪದ ಐದಲಿದು ಚತುರ್ವಿಧ ಪುರುಷಾರ್ಥ । ಸ್ತುತಿಸಿ ನೀನೆ ಗತಿ
ಎನಲು ಕಾವಾ ।
ಪತಿ ಐವರಿರಲು ದ್ರೌಪದಿಯಾದರದಿ ಕಾಯ್ದು । ವರದರಾಜ ವೆಂಕಟೇಶ
ಪತಿ ಐವರಿರಲು ॥ ೫ ॥

ಅಟ್ಟತಾಳ

ಭಜಿಸುವ ಬನ್ನಿರೆಲ್ಲ ಗಜರಾಜ ವರದನ । ಅಜಮಿಳಗೆ ಮುಕ್ತಿಪದವಿತ್ತ
ಹರಿಯು ।
ಭುಜಗರಾಜನ ಪಡೆಯುಲಿ ನಲಿದಾಡುವ । ನಿಜ ಮೂರುತಿ ನಮ್ಮ
ವರದರಾಜ ವೆಂಕಟೇಶ ಭಜಿಸುವ ಬನ್ನಿರೆಲ್ಲ ॥ ೬ ॥

ಏಕತಾಳ

ತ್ರಿಜಗದಲ್ಲಿ ದೇವರದೇವನೆಂದೆನಿಸಿಯೆ । ನಿಜ ಮೂಡಲಾದ್ರಿಯೊಳ್ನೆ
ಲಸಿಹನ ।
ಭಜಕರಿಗೊಲಿದು ಅಭಯುವಿತ್ತು ಸಲಹುವ । ಈ ವರದರಾಜನೆ ಶ್ರೀ
ವೆಂಕಟೇಶ ನಿಜ ಮೂಡಲಾದ್ರಿಯೊಳ್ನೆಲಸಿಹನ ॥ ೭ ॥

ಜತೆ

ಶ್ರೀ ರಘುರಾಮು ಎಂದಾದರಾದರು ನೆನದರೆ ಶ್ರೀ
ವರದರಾಜ ವೆಂಕಟೇಶ ಸಲಹುವ ಶ್ರೀ ರಘುರಾಮು ॥ ೮ ॥

ವರದರಾಜರಾಮು (೧)

ಸುಳಾದಿ ೨೪

ರಾಗದೇಶಿ ಧ್ರುವ ತಾಳ

ಜಾನಕಿಯ ರಮಣ ರಾಮುಗೆ ಜನನ ಉಂಟೆಂದು ।
ಹೀನ ಮತಿಯುಲಿ ಖಳರು ತಿಳುಹುತಿಹರು ।
ಕಾನನದೊಳಗೆ ಚರಿಸುತಲಿ ತನ್ನ ।
ಮಾನಿನಿಯು ಕಾಣದೆ ಅತಿದುಃಖಿಸಿದನೆಂದೆಂಬರೂ ।

ತಿಳಿಯ ಹೀನಬಲದಲಿ ವಾಲಿಯನು ಕಾಣದಲೆ ಬೇಗ ।
ಬಾಣದಿಂದಲಿ ಕೊಂದನೆಂಬರೂ ।
ಧಿಟ್ಟ ಮಾನವರ ಕೊಲುವರೆ ಬೇಗದಿಂದ ।
ವಾನರ ಸಖನಾದನೆಂದೆಂಬರೂ ।
ನಿತ್ಯ ಜ್ಞಾನಾದಿ ಬಲಮೂರುತಿ ವರದರಾಜರಾಮ,ತಾ ।
ಮಾನವರೊಳಗೆ ಮನುಜನಂತಿರ್ದನೆಂಬುದಕ್ಕೆ ಜಾನಕಿರಮಣ ॥ ೧ ॥

ಮಟ್ಟತಾಳ

ಶಿಶು ತನದಲ್ಲಿ ಮುನಿಯ ಯಾಗವ ಸಲಹುವೆನೆಂದು ।
ವಸುಧೆಯೊಳಗೆ ಅಸುರರ ಬಲವ ನೊರಸಲಿಲ್ಲವೆ ಕಾಣಿರೋ ।
ಪಶುಗತಿ ಧನುವನು ಕರಕಮಲದಿ ಪಿಡಿಯುತ್ತಲಿ ।
ನಸುನಗುತ ಧನುವ ಮುರಿದು ಬಿಸುಡಲಿಲ್ಲವೆ ಕಾಣಿರೋ ।
ಪಶುಪತಿ ಕುಸುಮ ಶರನಪಿತ ಚಿದಾನಂದೋತ್ತಮ ಮೂರುತಿ ।
ದಶರಥನಿಂದ ಜನಿಸಿದನಂತೆ ವರದರಾಜರಾಮಾ ॥ ೨ ॥

ರೂಪಕತಾಳ

ಆವನಂಗುಷ್ಟ ಚಿಮಿಸಲ ಸುರತನು। ಭೂವಳೆಯನು ತಿಳಿಖಳರ ಸಂಹರಿಸಿತು ।
ಆವನದೊಂದಂಬು ತಾಳೇಳ ಕೆಡಹಿತು । ಆವನ ಕಣ್ಣಕೆಂಪು ಶರಧಿಯನೀಂಟಿತು ।
ಆವನದೊಂದಂಬು ಆವನ ಪೂರ್ಬಿಯಿಂದ ಭೂಭಾರ ವಿಳಿಹಿತು ।
ಶ್ರೀವರದ ರಾಜರಾಮನ್ನಿಂದಿರುಂಟೆ ಜಗದೊಳು ಆವನದೊಂದಂಬು ॥೩॥

ಅಟ್ಟತಾಳ

ಅಸುರಸುತನು ಕಪಿಕಟಕವನ ಜ್ಞಾನ। ವಶಕೆ ಸಿಕ್ಕಿಸಿ ವಾನರರಾಜ ಮೊದಲಾಗಿ ।
ಉಸರು ಬಿಡುವದಿಲ್ಲ ಮಿಸಕು ಲರಿತುದಿಲ್ಲ । ಶಶಿನೆ ಒಮ್ಮೆಯಾದರೆ ನಡೆನುಡಿವರೆ ।
ಉಸರು ಬಿಡುವದಿಲ್ಲ । ಅಸಮವರದ ರಾಜರಾಮ ಶರವಿಡೆಭರ ।
ವಸದಲ್ಲಿ ತರುಗಿರಿಗಳ ಪಿಡಿದರುನೋಡು । ಉಸರು ಬಿಡುವದಿಲ್ಲ ॥ ೪ ॥

ಏಕತಾಳ

ರಾಮನಾಳು ಹನುಮನು ಶರಧಿಯನು ಲಂಘಿಸಿದ ।
ಭೂಮಿ ಸುತೆಯ ರೂಪಿಂಗೆ ರಾಮನ ಮುದ್ರಿಕೆಯನಿತ್ತು ।
ಕಾಮಚಾರಿಯಾದ ರಾವಣನ ವನವನು ಕಿತ್ತು ।
ತಾಮಸ ಖಲಸೂತರನ ಸಂಯಮ ಪುರಕಿತ್ತಾ ।
ಕಾಮಚಾರಿಯಾದ ರಾಮನೊಳು ತನ್ನರಿಯಲ್ಲಿ ಲಂಕೆಯನುರುಹಿದಾ ।
ರಾಮನಾಳು ಕ್ಷಣಕ್ಕೆ ಸಂಜೀವನ ಗಿರಿಯತಂದ ।
ರಾಮನ ಕಟಕವ ಸಲುಹೀ ಮುರಳೀಪಾಡಿದಾ ।
ರಾಮ ವರದರಾಜನ ಮಹಿಮೆ ಇನ್ನೆಂತು ಉಂಟೋರಾಮನಾಳು॥ ೫ ॥

ಜತೆ

ದಶಮುಖಗಳನರಿವುತ್ತಲಿ ವರದರಾಜ ।
ದಶರಥರಾಮ ತ್ರಿದಶರಿಗೆ ಸುಖವಿತ್ತು। ॥ ೬ ॥

ವರದರಾಜ ಕೃಷ್ಣ (೧)

ಸುಳಾದಿ ೩೫

ರಾಗ ಧ್ರುವ ತಾಳ

ಸುರ ಮುನಿ ಭೂಸುರ ಲೋಕಂಗಳಲ್ಲಿ ಚರಿಸುವ ಪರಿಯಾ ।
ಆರು ವರ್ಣಸಲಳಪೆ ಧರಿಸಿದ ಕೆಂಜೆಡೆಯ ಕಿರಣಂಗಳಿಂದ ।
ಪಿರಿ ನೊಸಲದಿ ಎರಡು ನಾಮಗಳೆಂಬ ।
ವರಗದ ಶರಣಗಳೆನುತ ಕರುಣದಿ ತೋರುತ್ತಲಿ ।
ಕೊರಳ ತುಲಸಿ ಸರಸಿಜ ಮಣಿಯು ।
ಸಿರಿ ಮುದ್ರೆ ಮೆರೆವುತ್ತಿರೆ ।
ಸರಿಗಮಪದನಿಸ ಎಂಬ ಜಪ್ಪದಾ
ಸ್ವರಸೋಪಾನಗಳಿಂದ ವರದರಾಜ ಕೃಷ್ಣನಾಮ ।
ಝೇಂಕಾರ ಡಂಗುರ ಹೊಯುತ್ತ ।
ಸುರ ಮುನಿ ಚರಿಸುವ ಚರಿಯಲಿ ।
ನರಕಿಗಳನುತ್ತರಿಸುತ ಸುರಮುನಿ। ॥ ೧ ॥

ಮಟ್ಟತಾಳ

ಘೋರ ಸಂಸಾರ ವಾರಿಧಿ ಉತ್ತಾರಕನೆಂದು ।
ನಾರದ ಮಾತಿನಲಿ ನಾನಾ ದುರಿತರಿಪು ಎಂದು ಪಾಡಲು ನಾರದ ।
ಘೋರ ನರಕಿಗಳು ಲಾಲಿಸಿಸವಿವುತ ।
ಸಾರಿದರು ವರದರಾಜ ಕೃಷ್ಣನಾಮ ಪದವಿಯ ।
ಘೋರನರಕಿಗಳು ॥ ೨ ॥

ರೂಪಕತಾಳ

ಈರೆಂಟು ಸಾವಿರ ನೂರೆಂಟು ಹೆಣ್ಣು ಕೃಷ್ಣ ।
ಪೋರಂತೆ ರಮಿಸುವ ಪರಿಯ ನೋಡಲೆಂದು ।
ಧಾರುಣಿ ಗೈದಿದ ನಾರದ ।
ವಾರಿಜ ಭವ ವಂದ್ಯ ವರದರಾಜ ಕೃಷ್ಣ ।
ನಾರದ ಮುನಿಯನಾದರದಿ ಅರ್ಚಿಸುತ ನಾರದಾ । ॥ ೩ ॥

ಅಟ್ಟತಾಳ

ನಮ್ಮ ಪ್ರಾಣೇಶನ ಸುಮ್ಮನೊಮ್ಮೆ ಬಂದು ।
ಗಮ್ಮನೆ ನೆಳದೋದ ಅಕ್ರೂರಗೆ ಬೊಮ್ಮನೇಕೆ ಸೃಜಿಸಿದನು ।
ಅಮ್ಮಾ ನಮ್ಮ ನಿಮ್ಮಿದ್ದೆಡೆಗೆ ನಿಮಿಷಕೆ ಸಲಿಸುವ ।
ಬೊಮ್ಮನೇಕೆ ಸೃಜಿಸಿದನು ।
ನಿರ್ಮಲರೂಪ ವರದರಾಜ ಕೃಷ್ಣತಾ ।
ನಮ್ಮೊಳು ಬೆಳಮುಳದಿ ಚರಿಸುವನಂತೊ ।
ಬೊಮ್ಮನೇಕೆ ಸೃಜಿಸಿದನು। ॥ ೪ ॥

ಏಕತಾಳ

ತಿಂಗಳ ಬೆಳದಿಂಗಳೊಳಗೆ ತಂಗಾಳಿಯ ಸುಳಿವುತಲೊಯ್ಯನೆ ।
ರಂಗಪುಳಿನಂಗಳೊಳಗೆ ನಮ್ಮಂಗ । ಸಂಗದೊಳಿಂಗಡಲೊಳು ಮುಳುಗಿಪ್ಪರಂಗ ।
ಮಂಗಳರೂಪ ವರದರಾಜಕೃಷ್ಣತಾ । ಕಂಗಳ ಪಾಂಗದಿಸಂಗಡಿಸುವ ನೆಂತೊ ।
ರಂಗ ಪುಳಿನಂಗಳೊಳಗೆ। ॥ ೫ ॥

ಜತೆ

ಶ್ರೀಪತಿ ವರದರಾಜ ಕೃಷ್ಣ ವಿರಹತಾಪದಿ ।
ಗೋಪಿ ಗೋಪಾಂಗನೆಯರು ಈ ಪರಿ ಕಳೆದರೂ । ॥ ೬ ॥

ವರದರಾಜ ಕೃಷ್ಣ (೨)

ಸುಳಾದಿ ೨೬

ರಾಗ ಧನಾಸಿ ಧ್ರುವತಾಳ

ಹರಿ ರವಿಯುದಯವ ಕಾಣುತ । ಕರಕಮಲದಿ ಶಿರೆವಿಡಿವುತ ।
ಕರುಗಳ ಕಣ್ಣಿಯ ಕಳಚುತ । ಸರಿಗೋಪರ ಸ್ವರಗೈಯುತ ।
ತುರುಗಾತಿಯರ ಮೊಗವ ನೋಡುತ । ತರಳರ ಕರಪಿಡಿವುತ ಶ್ರೀ ।
ಹರಿ ರವಿಯುದಯುವ ಕಾಣುತ ಅಂ ।
ಬರದಲಿ ಸುರರೆಲ್ಲರು ಸ್ತುತಿಸುತ್ತಿರೆ । ತರಣ್ಯ ಶರಣ ವರದರಾಜ ಕೃಷ್ಣತಾ ।
ಕರುಗಳ ಹಿಂದೆ ಮುಂದೆ ಚಲಿಸುತ ಶ್ರೀಹರಿ ॥ ೧ ॥

ಮಟ್ಟತಾಳ

ಕೊಳಂಗಳ ತಡಿಯಲಿ ಜಲಜ ಪಾತ್ರಂಗಳ ಮೇಲೆ ।
ಜಲಜನಾಭ ಗೆಳೆಯರೊಡಗೂಡಿ ಕಲಿಸೋಗರ ।
ಸವಿವುದಚ್ಚರಿ ಏನಯ್ಯ ಜಲಜನಾಭ ।
ಇಳೆಯ ವರದರಾಜ ಕೃಷ್ಣವತ್ಸಗಳನು ಕಾಯ್ದು ।
ಜಗವಂ ಮೋಹಿಸುತ ಜಲಜನಾಭ। ॥ ೨ ॥

ರೂಪಕತಾಳ

ಕಲ್ಪತರುವ ನಮ್ಮ ತ್ರಿಭಂಗಿಯಲಿ ಪೊಂಗೊಳಲೀಲಾವ್ಯತದನ್ನೀಂಟಲು ।
ಲಲನೆಯರು ಕೇಳಿಸವಿವುತ್ತಾನಂದದಲಿ ಪಿರಿದು ।
ತಂದ ಚರಿಯೇನ್ನೈಯಾದದರ । ಲಲನೆಯರು ಕೇಳಿ ಎಳೆದ ವರದ ರಾಜಕೃಷ್ಣ ।
ಕೊಳನೂದೆ ಲಲನೆಯರುಕೇಳಿ। ॥ ೩ ॥

ಅಟ್ಟತಾಳ

ಗರುಡನ ಮೇಲೆ ಉರಗ ಶಿರವನೀಡ್ದೆ ।

ಕರಿವಿಂಡು ಸಿಂಹದ ಮೇಲೆ ಕರವನಿಟ್ಟು ।
ಹರಿಣಗಳೆಲ್ಲ ಪುಲಿಗಳೊಳು ಚರಿಸಲು ।
ತರಣಿ ಕಿರಣದಿ ಕುಮುದಗಳರಳುತ್ತಿವೆ ।
ಹರಿಣಗಳೆಲ್ಲ ವರದರಾಜ ಕೃಷ್ಣನ ಗಾನಾಮೃತವ ।
ಧರಿಸಿ ಮೋಹಿಸುವ ಸುದಿವಸವನು ನೋಡಿ ಹರಿಣಗಳೆಲ್ಲ ॥ ೪ ॥

ಏಕತಾಳ

ಬಂದು ವನದಲಿ ಗೆಳೆಯರ ಒಡನೆ ।
ಇಂದಿರಾಪತಿ ತುರು ವಿಂಡುಗಳ ಚರಿಸುತ ।
ಅಂದದ ಕುಸುಮಾಭರಣವ ತಾಳುತಾ ।
ನಂದದಿ ಕವಾಟವನಾಡುತ ಚಂದದಿ ।
ಮಂದಹಾಸ ವರದ ರಾಜಕೃಷ್ಣ ನೋಡುತ ।
ನಿಂದ ಸಂಭ್ರಮವನುಪಮಿಸಲಳವೆ ಅಂದದಾ। ॥ ೫ ॥

ಜತೆ

ನಂದ ವರದರಾಜ ಕೃಷ್ಣ ಮುಖೇಂದುವ ।
ನಯನ ಚಕೋರದಿ ಸವಿವುತಾನಂದದಾ। ॥ ೬ ॥

ವರದರಾಜ ಕೃಷ್ಣ (೩)

ಸುಳಾದಿ ೨೭

ರಾಗ ಭೂಪಾಳಿ ಧ್ರುವ ತಾಳ

ಕಡುಮುದ್ದು ಕೃಷ್ಣ ಗೋಕುಲದಲ್ಲಿ ಗೆಳೆಯರ ।
ಒಡನಾಡಿ ಮುದದಿ ನಲಿವನೊಮ್ಮೊಮ್ಮೆ ಆ ಆ ಆ ।
ಸಡಗರದಿಂದ ಪರಿದುತಂದು ಜನನಿಯು ।
ಮುಡಿಯು ಜಡಿದು ಮುದ್ದುನೀವನೊಮ್ಮೊಮ್ಮೆ ನಂದನಂದನ ।
ಮಡದಿಯು ತೊರದ ಕುಚಗಳ ಕರದಿಂದ ।
ಪಿಡಿದು ಮೊಗದಲಿ ಸವಿವನೊಮ್ಮೊಮ್ಮೆ ಆ ಆ-ಕಡುಮುದ್ದು ।
ಆ ಆ ಆ ಒಡಕೋಪವಿಡಿದು ಬೊಮ್ಮೆ ಕರದಿಂದ ।
ಶಿರಗ್ಗಿಡಿದು ಅಡಿಯಿಡೆ ಬೇಗ ಕಂಗೆಡುವನೊಮ್ಮೊಮ್ಮೆ ।

ವೃಂದಾವನದಲಿ ಸುಳಿವನಲ್ಲೆ ಅಮರ ।
ವೃಂದಾವನೆಲ್ಲವ ಮೋಹಿಸುತ ಪ್ರಾಣಿ ।
ವೃಂದವು ಇರವ ಮರಸುತಲಿ ಗುಣ ಗಣಗಣ ।
ವೃಂದಾ ವರದರಾಜಕೃಷ್ಣ ತಾ ಹೆಂಗಳ ।
ವೃಂದವ ಮರುಳುಗೊಳಿಸುತಲೆಮ್ಮಯ ಕೆಳದಿ ॥ ೧ ॥
ವೃಂದಾವನದಲ್ಲಿ ಸುಳಿವನಲ್ಲೆ ॥

ಮಟ್ಟ ತಾಳ

ಲೀಲಾವತಿಯೊಳೆಮ್ಮನಲ್ಲನನೊಯ್ದು ನಮ್ಮೆಲ್ಲರ ಮೋಹಿಸಿದ ।
ಅಕ್ರೂರಗೆ ಸಲ್ಲದ ಕ್ರೂರನೆಂದೆಂಬರು ।
ಒಳ್ಳೆಯ ಪೆಸರು ಸಲ್ಲದು ನಮ್ಮೆಲ್ಲರ ।
ಬಲ್ಲಿ ತನವನು ಎಲ್ಲಿಗ್ಹೋಯಿತು ।
ವಲ್ಲಭೆ ಸಲ್ಲದ ಕ್ರೂರನೆಂದೆಂಬರು ।
ಫುಲ್ಲ ಶರನಪಿತಸಿರಿ ವರದರಾಜ ಕೃಷ್ಣನ-
ಮೆಲ್ಲರುಗಳ ಚೆಲುವಿನ ।
ಜಲದಲ್ಲಿ ಮುಳಗುವರಂತೆ ಫುಲ್ಲಶರನ। ॥ ೨ ॥

ರೂಪಕ ತಾಳ

ವೃಂದ ವೃಂದದೊಳಾನಂದವೀವನು ಬೇಗ ।
ದಿಂದ ಕರದೊಯ್ದು ಬುಧರು ಯೇ ।
ನೆಂದು ಕರದರೆ ಈ ಪೆಸರಿನಲಿ ಅದ ।
ರಿಂದ ಮೋಹಿಸಿದೆವು ಮಂದಮತಿಯಲಿ ಯೇ।
ನೆಂದು ಕರದರೆ ಈ ಪೆಸರಿನಲಿ ।
ಇಂದಿರೇಯರಸ ವರದರಾಜ ಕೃಷ್ಣತಾ ।
ಮಂದಹಾಸದಲಿ ಚಂದ್ರಿಕೆಯ ಸೂಸುವರು ಏ ।
ನೆಂದು ಕರದರೆ ಈ ಪೆಸರಿನಲಿ। ॥ ೩ ॥

ಝಂಪೆ ತಾಳ

ಪ್ರೀತಿಯಿಂದಲಿ ನಾವು ವೋತು ಸೋತೆವು ಪ್ರಾಣ ।
—ತತವನ ಮಾಡಿ ಕರದೊಯ್ಯುಗೆ ।

ಯಾತಕೀ ಪೆಸರನಿತ್ತ ಕಾಣಿರೋ ।
ಸಾತ್ವಿಕರರಸ ಸಿರಿ ವರದರಾಜ ಕೃಷ್ಣ ನಮ್ಮ ಮನದ ।
ಕಾತರವ ಸಲಿಸಿ ಅತಿ ಪ್ರೀತಿಯಾದ ಮಾತು ।
ಯಾತಕೀಪೆಸರನಿತ್ತುದ ಕಾಣಿರೋ। ॥ ೪ ॥

ತ್ರಿಪುಟ ತಾಳ

ಸ್ಮರಪಿತೆಮ್ಮಯ ತನುವಸು ಮರುಳು ಮಾಡಿದ ಗೋವಳೆನ್ನ ।
ಕಿರುವತನದಲಿ ಕರದೊಯ್ದು ಮೂರುಕನು ।
ಮನದ ಇರವನರಿಯದೆ ಕರೆದನು ।
ಕಿರವಿನೊಳಗೊಳಗಿರುವ ಮನದಿರವನರಿಯದೆ ಕರೆದನು ।
ತರಳೊಳುಪಚರಿಪ ಸಿರಿವರದರಾಜ ಕೃಷ್ಣ ।
ನಮ್ಮ ಸೆರಗ ಕರದಲಿ ಪಿಡಿದು ಸೆಳೆವುತ ।
ಹರುಷ ಶರಧಿಯ ಲೊರಗಿಸುವಂತೆ ಮನದ !
ಇರವನರಿಯದೆ ಕರೆದನು ॥ ೫ ॥

ಅಟ್ಟತಾಳ

ನಮ್ಮ ಪ್ರಾಣೇಶನ ಸುಮ್ಮನೊಮ್ಮೆ ಬಂದು ।
ಗಮ್ಮನೆ ನೆಳದೊಯ್ದು ಅಕ್ರೂರಗೆ ಬೊಮ್ಮನೇಕೆ ಸೃಜಿಸಿದನು ।
ಅಮ್ಮ ನಮ್ಮನಿಮ್ಮಿದ್ದೆಡಿಗೆ ನಿಮಿಷಕೆ ಸಲಿಸುವ ।
ಬೊಮ್ಮನೇಕೆ ಸೃಜಿಸಿದನು ।
ನಿರ್ಮಲರೂಪ ವರದರಾಜ ಕೃಷ್ಣ ತಾ ।
ನಮ್ಮೊಳು ಬೆಳಮಳದಿ ಚರಿಸುವನೆಂತೋ ।
ಬೊಮ್ಮನೇಕೆ ಸೃಜಿಸಿದನು। ॥ ೬ ॥

ಏಕತಾಳ

ತಿಂಗಳ ಬೆಳದಿಂಗಳೊಳಗೆ ತಂಗಾಳಿಯ ಸುಳುವುತಾಲೊಯ್ಯನೆ ।
ರಂಗ ಪುಳಿನಂಗಳೊಳಗೆ ನಮ್ಮಂಗ ।
ಸಂಗ ದೊಳಿಂಗಡಲೊಳು ಮುಳುಗಿಪ್ಪರಂಗ ।
ಮಂಗಳರೂಪ ವರದರಾಜ ಕೃಷ್ಣ ತಾ ।

ಕಂಗಳ ಪಾಂಗದಿ ಸಂಗಡಿಸುವನೆಂತೋ ।
ರಂಗ ಪುಳಿನಂಗಳೊಳಗೆ || ೭ ||

ಜತೆ

ಶ್ರೀಪತಿ ವರದರಾಜ ಕೃಷ್ಣ ವಿರಹತಾಪದಿ ।
ಗೋಪಿ ಗೋಪಾಂಗನೆಯರು ಈ ಪರಿ ಕಳೆದರು। || ೮ ||

ನಮ್ಮ ಮಂಡಲದಲ್ಲಿ ದೊರೆಯುವ ಪುಸ್ತಕಗಳ ಪಟ್ಟಿ

೧	ತಾರತಮ್ಯ ಸುಳಾದಿಗಳು	೧—೮—೦
೨	ಶ್ರೀ ಸುಮಧ್ವವಿಜಯ ಭಾಮಿನಷಪ್ಪದಿ ಸಹಿ ೫ನೇಭಾಗ	೧—೮—೦
೩	ಶ್ರೀ ಪ್ರಾಣೇಶವಿಠಲರ ಕೀರ್ತನಮಾಲಾ ೧೫ ಪುಸ್ತಕ	೫—೦—೦
೪	ಶ್ರೀ ವಿಜಯದಾಸರ ಪ್ರಾರ್ಥನಾ ಸುಳಾದಿ (೧೦೦)	೨—೦—೦
೫	ಸೃಷ್ಟಿಪ್ರಕರಣ ಸುಳಾದಿಗಳು ತಾತ್ಪರ್ಯಸಹ	೩—೦—೦
೬	ಕ್ಷೇತ್ರಮಹಿಮಾ ಸುಳಾದಗಳು	೩—೪—೦
೭	ಸಾಧನಭಾಗ ಸುಳಾದಿಗಳು ಭಾಗ ೧ ಭಾಗ ೨	೨—೮—೦
೮	ಉಪಾಸನಾಭಾಗ ಸುಳಾದಿಗಳು	೨—೮—೦
೯	ಪ್ರಮೇಯಭಾಗ ಸುಳಾದಿಗಳು	೧—೪—೦
೧೦	ಸ್ತೋತ್ರಭಾಗ ಸುಳಾದಿಗಳು	೨—೦—೦
೧೧	ಶ್ರೀ ವಿಜಯದಾಸರ ೨೫೭ ಪದಗಳು ತಾರತಮ್ಯ ಕ್ರಮ ನಿತ್ಯ ಭಜನೆಗೆ ಅನುಕೂಲ ಭಾಗ ೧	೧ ೧೨—೦
೧೨	ಶ್ರೀ ವಿಜಯದಾಸರ ಉಳಿದ ಪದಗಳು ೨೫೦ ಭಾಗ ೨	೧—೧೨—೦
೧೩	ಶ್ರೀ ವಿಜಯದಾಸರ ಸ್ತೋತ್ರ ಪದಗಳು ವಿಶದವಾದ ಚರಿತ್ರೆ ಸುಮಾರು ೩೦೦ ಪುಟ	೨—೮—೦
೧೪	ಶ್ರೀ ಗೋಪಾಲವಿಠಲರು ೪ ಜನ ದಾಸರ ಸುಳಾದಿ	೨—೮—೦
೧೫	ಶ್ರೀ ಐಜಿಸ್ವಾಮಿಗಳು ವಾಸುದೇವ ವಿಠಲರ ಕೃತಿಗಳು ಚರಿತ್ರೆ ಸಹ	೧—೪—೦
೧೬	ಶ್ರೀ ಮೊದಲಕಲ್ ಶೇಷದಾಸರ ಕೃತಿಗಳು	೨—೦—೦
೧೭	ಶ್ರೀ ಲಕ್ಷ್ಮೀಲೀಲಾಮೃತ	೦—೪—೦
೧೮	ಶ್ರೀರಾಮ ಭಜನೆ	೦—೪—೦
೧೯	ಶ್ರೀ ಹನುಮದ್ವೃತ ಕಥಾ ಸುಳಾದಿ	೦—೬—೦
೨೦	ಶ್ರೀ ಹರಿಕಥಾಮೃತಸಾರ ಮೂಲ ಶುದ್ಧಪ್ರತಿ ದಾಸರ ಚರಿತ್ರೆ ಸಹ	೨—೪—೦
೨೧	ಶ್ರೀ ಹರಿಕಥಾಮೃತಸಾರ ಸಂಗ್ರಹ ಗದ್ಯ	೧—೮—೦
೨೨	(ಗದ್ಯ) ಸದಾಚಾರ	೧—೪—೦
೨೩	,, ಪಂಚಭೇದ ಶ್ರೀ ಗುರುವಿಜಯಕೃತ	೧—೪—೦

೨೪ ,, ಬ್ರಹ್ಮಚರ್ಯ ೧—೮—೦

೨೫ (ಗದ್ಯ) ಅಧ್ಯಾತ್ಮಮಾಲಾಭಾಗ ೧-೨ ೨—೮—೦

೨೬ ಸಂಧ್ಯೋಪಾಸನೆ ಭಾಗ ೧-೨ ೨—೮—೦

೨೭ ಶ್ರೀ ಆದ್ಯಾದಿ ಹರಿದಾಸರ ಸುಳಾದಿಗಳು ೧೪೦ ಪುಟ ೧—೪—೦

೨೮ ಶ್ರೀ ನರಹರಿ ತೀರ್ಥಾದಿ ದಾಸರ ಸ್ತೋತ್ರ ಪದಗಳು ೦-೧೨—೦

೨೯ ಶ್ರೀ ಮನೋಹರ ವಿಠಲವಿರಚಿತ ಶ್ರೀಮತ್ ಅನಂತವ್ರತಕಥಾ ಭಾರತ ಸಭಾಪರ್ವಯುಕ್ತ ನವರಸಾಲಂಕಾರಭರಿತ ವಾರ್ಧಿಕ ಷಟ್ಪದಿ ೧೦ ಸಂಧಿಯುಕ್ತ ಮಹಾಕಾವ್ಯ ೩೦೦ ಪು. ೩—೮—೦

೩೦ ಶ್ರೀ ಕರ್ನಾಟಕ ಹರಿದಾಸ ಸಾಹಿತ್ಯ ಗದ್ಯಗ್ರಂಥ ದಾಸ ಸಾಹಿತ್ಯ ವಿವಿಧ ಲೇಖಗಳು ಸುಮಾರು ೩೦೦ ಪುಟ ೨—೮—೦

೩೧ ಚಕ್ರಾಬ್ಜಮಂಡಲ ಕಂಕಣಾಕಾರ ಸುಳಾದಿ ಸಂಕ್ಷಿಪ್ತ ತದ್ವಿವರ ಪ್ರಮಾಣ ಸಹಿತ ೦—೧೨—೦

೩೨ ಶ್ರೀ ವರದೇಂದ್ರ ಕರ್ನಾಟಕ ಹರಿದಾಸ ಸಾಹಿತ್ಯ ೧ನೇ ವರ್ಷ ದ್ವೈಮಾಸಿಕ ಸಂಚಿಕೆಗಳು (೬) ಕ್ಕೆ ೬—೦—೦

ವಿರಾಟ-ವಿಶ್ವರೂಪ ಪಟಗಳು ಪ್ರತಿಯೊಂದಕ್ಕೆ ೮ ಅಣೆ ರಥದ ಪಟ ೪ ಅಣೆ ಶ್ರೀ ವಿಜಯದಾಸಾದಿ ೧೧ ಪಟಗಳು ಪ್ರತಿಯೊಂದಕ್ಕೆ ೨ ಅಣೆ ಟಪಾಲವೆಚ್ಚ ಬೇರೆ, ಕಮೀಶನ್ ಏಜಂಟರಿಗೆ ೧೦೦ ಕ್ಕೆ ೧೨೫ ರೂ. ಪುಸ್ತಕ ಕೊಡವೆವು, ಟಪಾಲ ವೆಚ್ಚ ಬೇರೆ ಹೆಚ್ಚಿನ ವಿವರಗಳಿಗಾಗಿ ಪತ್ರವ್ಯವಹಾರ ಮಾಡಿರಿ. ಲಿಷ್ಟ ಕೇಳುವವರು ಉತ್ತರ ಅಪೇಕ್ಷಿಸುವವರು ಸ್ಟ್ಯಾಂಪ ಕಳಿಸಿರಿ.

ಶ್ರೀ ವರದೇಂದ್ರ ಕರ್ನಾಟಕ ಹರಿದಾಸ ಸಾಹಿತ್ಯ ದ್ವೈಮಾಸಿಕ (೧೯೫೧) ಕ್ಕೆ

ಇಂದೇ ಚಂದಾದಾರರಾಗಿರಿ ಅಂಚೆ ಸಹ (೬) ರೂ. ಸಾಂಪ್ರದಾಯಿಕವಾಗಿ ಪರಿಶುದ್ಧ ಸಂಶೋಧಿಸಿದ ಸಾಹಿತ್ಯ ಗದ್ಯಪದ್ಯ ವಿಭಾಗ ಸುಳಾದಿ ಸ್ತೋತ್ರ ಪದಗಳು ಕಾವ್ಯವಿಭಾಗ ಸಾಂಪ್ರದಾಯಿಕ ವಿದ್ವಾಂಸರ ಲೇಖನಗಳದ್ವಾರಾ ಮಧ್ವ ಸಿದ್ಧಾಂತವನ್ನು ದಾಸಸಾಹಿತ್ಯದ್ವಾರಾ ಬೀರಲು ಮುಡುಪಾದ ತಿಳಿಗನ್ನಡ ದ್ವೈಮಾಸಿಕ ಕ್ರೌನ ೧/೮ ಪುಟ ೧೧೪ ಗ್ಲೇಜ ಕಾಗದ ಸುಂದರವಾದ ಮುದ್ರಣ ಸರಿಯಾಗಿ ೨ ತಿಂಗಳಿಗೊಮ್ಮೆ ಹೊರಡುವದು.

ಹನಮಂತರಾವ ಗೊರೆಬಾಳ ಲಿಂಗಸೂಗೂರ